*The Department of Public Instruction, Bombay.*

KANARESE

# THIRD BOOK.

COMPOSED BY

GANGADHAR M. TURAMURI,
ASSISTANT KANARESE TRANSLATOR, E. D.

Third Edition—25,000 Copies.

*Registered for Copyright under the Government of India's Act XXV. of 1867.*

**BOMBAY:**
GOVERNMENT CENTRAL BOOK DEPÔT.
1887.

(*All Rights reserved.*)

***Price: 5 Annas.***

PRINTED AT THE BASEL MISSION PRESS,
MANGALORE.

ಮುಂಬಯಿ ಇಲಾಖೆಯೊಳಗಿನ ಸರಕಾರೀ ವಿದ್ಯಾಶಾಲಾಖಾತೆ.

ಕನ್ನಡ

# ಮೂರನೇ ಪುಸ್ತಕ.

ಇದನ್ನು

**ಗಂಗಾಧರ ಮಡಿವಾಳೇಶ್ವರ ತುರಮರಿ,**

ಅಶಿಷ್ಟಂಟ ಕನ್ನಡ ತ್ರಾನ್ಸಲೇಟರ, ಎ. ಡಿ.

ಇವರು ಮಾಡಿದರು.

೬ನೇ ಆವೃತಿ—೨೫,೦೦೦ ಪ್ರತಿಗಳು.

ಈ ಪುಸ್ತಕದ ಬಾಧ್ಯತೆಯು ಹಿಂದುಸ್ತಾನ ಸರಕಾರದ
ಸನ್ ೧೮೬೭ನೇ ಇಸವಿಯ ೨೫ನೇ ಆಕ್ಟಿನಂತೆ ರಿಜಿಷ್ಟರ ಮಾಡಿಯದೆ.

ಮುಂಬಯಿ:
ಗವರ್ನಮೆಂಟ ಸೆಂಟ್ರಲ್ ಬುಕ್ ಡೀಪೊ.
೧೮೮೭.

(ಈ ಪುಸ್ತಕದ ಸಂಬಂಧದ ಯಾವತ್ತು ಅಧಿಕಾರಗಳನ್ನು ಸರಕಾರದವರು
ತಮ್ಮ ಸ್ವಾಧೀನ ಇಟ್ಟುಕೊಂಡಿದ್ದಾರೆ.)

ಕಿಮ್ಮತು: ೫ ಆಣೆ.

ಮಂಗಳೂರು

ಬಾಸೆಲ್ ಮಿಶ್ಯನ್ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು.

# ಅ ನು ಕ್ರ ಮ ಣಿ ಕೆ.


ಪಾಠ. ಪುಟ.

## ನೀತಿಯ ಪಾಠಗಳು.

| | | |
|---|---|---|
| ೮. | ಬೈದಾಡಬಾರದೆಂಬ ಬಗ್ಗೆ . . . . . . . . . . | ೧೪ |
| ೧೪. | ಕೆಟ್ಟ ಸಂಗತಿಯ ಫಲ . . . . . . . . . | ೨೨ |
| ೧೮. | ಶೆಟ್ಟಿಯ ಮಗನೂ ವೈದ್ಯನೂ . . . . . . . | ೨೯ |
| ೨೪. | ಕದಿಯುವ ಇಚ್ಛೆಯನ್ನು ತಿರುಗಿಸಿದ್ದು . . . . . | ೩೮ |
| ೩೪. | ಆಜ್ಞೆ . . . . . . . . . . . . . . . | ೫೪ |
| ೩೭. | ಶಿಟ್ಟು ಕಳೆಯುವ ಹಂಚಿಕೆ . . . . . . . . | ೬೦ |
| ೩೮. | ಒಳ್ಳೇ ಬುದ್ಧಿ . . . . . . . . . . . . | ೬೨ |
| ೪೪. | ಪ್ರಾಮಾಣಿಕ ವರ್ತಕನು . . . . . . . . . | ೭೩ |
| ೫೫. | ಸತ್ಯದ ಬಗ್ಗೆ ಒಬ್ಬ ಮುದುಕನ ಉಪದೇಶ . . . . | ೯೬ |
| ೫೭. | ತನ್ನ ಕರ್ಮ ತನಗೆ ಬಿಡದು . . . . . . . . | ೧೦೧ |
| ೬೭. | ಪರೋಪಕಾರಿಯಾದ ಹುಡುಗನು, ೧ನೇ ಭಾಗ . . | ೧೨೧ |
| ೬೮. | ಪರೋಪಕಾರಿಯಾದ ಹುಡುಗನು, ೨ನೇ ಭಾಗ . . | ೧೨೪ |

## ಕಥೆಗಳು.

| | | |
|---|---|---|
| ೪. | ಸತ್ಯ ಮಾತಾಡಿದ ಜಾರ್ಜ ವಾಶಿಂಗ್ಟನ್ನನೆಂಬ ಹುಡುಗ | ೬ |
| ೬. | ನರಿಯೂ ಕಾಗೆಯೂ . . . . . . . . . . | ೧೨ |
| ೯. | ಹದಿನೇಳು ಆನೆಗಳನ್ನು ಮೂರು ಮಂದಿಗೆ ಹಂಚಿ ಕೊಟ್ಟದ್ದು . . . . . . . . . . . | ೧೫ |

| ಪಾಠ. | | ಪುಟ. |
|---|---|---|
| ೧೧. | ನೀರೊಳಗೆ ನೆರಳು ನೋಡಿದ ಸಾರಂಗ | ೧೯ |
| ೧೬. | ಜಾಣ ಹುಡುಗ | ೨೬ |
| ೨೨. | ಜಾಣತನದ ಉತ್ತರ | ೩೪ |
| ೨೬. | ಒಂದು ನಾಯಿಯ ಜಾಣತನ | ೪೨ |
| ೨೭. | ಸಾಲೆಯೊಳಗಿನ ಹುಡುಗ | ೪೪ |
| ೨೮. | ಉತ್ತರ ಅಮೇರಿಕದ ಇಂದಿಯನನೂ ಕಳವಿಲಿ ಹೋದ ಮಾಂಸವೂ | ೪೫ |
| ೩೧. | ಹೋಳಕರ ಮಲ್ಹಾರರಾಯನೂ ಚಿತ್ರಗಾರನೂ | ೫೦ |
| ೩೨. | ಕಿವುಡಿಯೂ ಮೂಕಿಯೂ ಆದ ತಾಯಿ | ೫೧ |
| ೪೧. | ಕಾಡಹಂದಿಯೂ ತೋಳವೂ | ೬೮ |
| ೪೩. | ಮುದಕನೂ ಅವನ ಕುದುರೆಯೂ | ೭೧ |
| ೪೬. | ವೈಜನಾಥನ ಜಾತ್ರೆ | ೭೭ |
| ೪೮. | ರಾಮನೂ ರಾಧೆಯೂ | ೮೧ |
| ೪೯. | ಒಡೆದ ಕನ್ನಡಿ | ೮೩ |
| ೫೪. | ನರಿಯೂ ಶಾಹಾಮೃಗವೂ | ೯೫ |


## ಸಾಮಾನ್ಯ ಜ್ಞಾನದ ಪಾಠಗಳು.


| | | |
|---|---|---|
| ೧. | ಹೊಸ ಪುಸ್ತಕವೂ ಹಳೆ ಪುಸ್ತಕವೂ | ೧ |
| ೨. | ಓದುವ ರೀತಿ | ೩ |
| ೩. | ವಿರಾಮಚಿನ್ಹಗಳು | ೫ |
| ೧೭. | ನಾನು ಯಾರು, ನನ್ನ ಹೆಸರೇನು? | ೨೬ |
| ೨೧. | ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುವ ಬಗ್ಗೆ | ೩೩ |
| ೪೨. | ಸಂಗ್ರಹ ಮಾಡುವ ಬಗ್ಗೆ | ೬೮ |
| ೫೨. | ಕುರುಡ ಹುಡುಗನು | ೯೦ |

| ಪಾರ. | | ಪುಟ. |
|---|---|---|
| ೫೩. | ಹಣವು | ೯೨ |
| ೫೯. | ಸುಖ ಪಡಕೊಳ್ಳುವ ಹಂಚಿಕೆ | ೧೦೪ |
| ೬೫. | ಹಡಗು | ೧೧೭ |


## ಪದಾರ್ಥಗಳು.


| | | |
|---|---|---|
| ೨೯. | ಸಕ್ಕರೆ | ೪೭ |
| ೩೬. | ಸ್ಲೇಟು | ೫೯ |
| ೫೧. | ಘಡಿಯಾಳ | ೮೭ |
| ೫೮. | ಧೋತರಜೋಡು | ೧೦೨ |
| ೬೨. | ರೊಟ್ಟಿ | ೧೧೦ |


## ಮೃಗಗಳು.

### ವನ್ಯಮೃಗಗಳು.


| | | |
|---|---|---|
| ೪೫. | ನರಿಯು | ೭೫ |
| ೫೦. | ತೋಳವು | ೮೫ |
| ೫೬. | ಚಿರ್ತೆ | ೯೯ |
| ೬೧. | ಕರಡಿ | ೧೦೭ |


### ಗ್ರಾಮ್ಯಮೃಗಗಳು


| | | |
|---|---|---|
| ೫. | ಕುರಿ, ಆಡು | ೯ |
| ೧೦. | ಎತ್ತು, ಆಕಳು | ೧೭ |
| ೧೩. | ಇಲಿಗಳೂ ತತ್ತಿಗಳೂ | ೨೧ |
| ೧೫. | ಎಮ್ಮೆಯೂ ಕೋಣವೂ | ೨೪ |
| ೨೦. | ಬೆಕ್ಕು | ೩೧ |
| ೨೫. | ನಾಯಿ | ೪೦ |

| ಪಾರ. | | ಪುಟ. |
|---|---|---|
| ೩೦. | ಕತ್ತೆ | ೪೮ |
| ೩೯. | ಕುದುರೆ | ೫೫ |
| ೪೦. | ಒಂಟೆ | ೬೫ |


## ಪಕ್ಷಿಗಳು.


| | | |
|---|---|---|
| ೬೩. | ಪಾರಿವಾಳ | ೧೧೨ |
| ೬೬. | ಗೂಗೆ | ೧೧೮ |


## ವನಸ್ಪತಿಗಳು.


| | | |
|---|---|---|
| ೭. | ಲವಂಗ | ೧೩ |
| ೧೨. | ಬಾದಾಮಿ | ೨೦ |
| ೧೯. | ಯಾಲಕ್ಕಿ | ೩೦ |
| ೨೩. | ಗಿಡ, ಹೂವು, ಬೀಜಗಳು | ೩೫ |
| ೩೩. | ಜಾಜೀಕಾಯಿಯ ಗಿಡ | ೫೩ |
| ೩೯. | ದಾಲ್ಚಿನ್ನಿ | ೬೪ |
| ೪೭. | ಚಂದನ | ೮೦ |
| ೬೦. | ಕೇಶರ | ೧೦೬ |
| ೬೪. | ಅಕ್ರೋಡ | ೧೧೪ |

ಕನ್ನಡ

# ಮೂರನೇ ಪುಸ್ತಕ.

## ೧ನೇ ಪಾಠ.

### ಹೊಸ ಪುಸ್ತಕವೂ ಹಳೆ ಪುಸ್ತಕವೂ.

ಗುರು—ವಿದ್ಯಾರ್ಥಿಗಳಿರಾ, ಈಹೊತ್ತು ನಿಮಗೆ ಹೊಸ ಪುಸ್ತಕವನ್ನು ಕಲಿಸಲಾರಂಭಿಸುತ್ತೇವೆ. ಹಿಂದಿನ ಪುಸ್ತಕವನ್ನಂತು ನೀವು ಹಲವು ಸಾರಿ ಚನ್ನಾಗಿ ಓದಿ ಮುಗಿಸಿದಿರಿ; ಆದದರಿಂದ ನೀವು ಕಲಿತ ಪಾಠಗಳೆಲ್ಲ ನಿಮಗೆ ಚನ್ನಾಗಿ ಬರುತ್ತವಲ್ಲವೇ? ಬೇಕಾದಾಗ ಆ ಪಾಠಗಳನ್ನು ಓದಿ ಅವುಗಳ ತಾತ್ಪರ್ಯವನ್ನು ಎರಡನೆಯುವರಿಗೆ ಹೇಳಲಿಕ್ಕೆ ನಿಮಗೆ ಬರುವದೋ? ನೆನಪಿಡತಕ್ಕ ಮಾತುಗಳೂ, ಹುಡುಗರು ಕೇಳಿ ಸಂತೋಷ ಪಡುವ ಸಂಗತಿಗಳೂ ಆ ಪುಸ್ತಕದಲ್ಲಿ ಹಲವುಂಟು. ಈಹೊತ್ತು ನಿಮಗೆ ಹೊಸ ಪುಸ್ತಕ ಹಚ್ಚುವದು ನಿಜವು; ಆದರೆ ಮೊದಲು ನೀವು ಓದಿದ ಹಳೆ ಪುಸ್ತಕದೊಳಗಿನ ಮಾತುಗಳನ್ನು ಎಷ್ಟು ಮಟ್ಟಿಗೆ ನೆನಪಿಟ್ಟಿದ್ದೀರೆಂಬುವದನ್ನು ಮೊದಲು ತಿಳುಕೊಳ್ಳಬೇಕಾಗಿದೆ. ಎಲಾ ಬಾಲಸುಂದರಾ, ನೀನು ಬಲ್ಲಷ್ಟು ಹೇಳು.

ಬಾಲ.—ನಾವು ಕಲಿತ ಪುಸ್ತಕದಲ್ಲಿ ಮನುಷ್ಯ, ಪಶು, ಪಕ್ಷಿ, ಗಿಡ ಮುಂತಾದವುಗಳ ಬಗ್ಗೆ ಪಾಠಗಳುಂಟು. ಇದಲ್ಲದೆ ಆ ಪುಸ್ತಕದಲ್ಲಿ ನೀತಿಯ ಪಾಠಗಳುಂಟು. ಅವುಗಳನ್ನು ಚನ್ನಾಗಿ ಓದಿ ನೆನಪಿಟ್ಟುಕೊಂಡು ಅದರಂತೆ ನಡಕೊಳ್ಳಬೇಕೆಂಬದಾಗಿ ಬರೆದದೆ.

ಗು.—ಚಂದ್ರಶೇಖರಾ, ಇದರ ಹೊರ್ತು ಮತ್ತೇನಾದರು ನಿನಗೆ ನೆನಪುಂಟೋ?

ಚಂ.—ಗುರುಗಳ ಮಾತುಗಳನ್ನೂ, ತಾಯಿತಂದೆಗಳ ಮಾತುಗಳನ್ನೂ ಕೇಳಬೇಕು; ಎಂದಿಗೂ ಅವರ ಮಾತು ಮೀರಬಾರದು ಎಂತಲೂ ಅದರಲ್ಲಿ ಬರೆದದೆ.

ಗು.—ಒಳ್ಳೇದು, ನೀವು ಹೇಳಿದ್ದೆಲ್ಲ ಸರಿ; ಆದರೆ ತಾಯಿತಂದೆ ಬಂಧುಬಳಗದವರಿಗಿಂತ ಬಹಳ ಹೆಚ್ಚಿನವನಾದ ದೇವರ ಬಗ್ಗೆ ಹೇಳಿದ್ದು ನಿಮಗೇನಾದರೂ ನೆನಪುಂಟೋ?

ಬಾ.—ಹೌದು, ಈಗ ನೆನಪಾಯ್ತು ಸ್ವಾಮೀ; ಮನುಷ್ಯ, ಪಶು, ಪಕ್ಷಿ, ಗಿಡ, ಭೂಮಿ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರ ಮುಂತಾದವುಗಳನ್ನೆಲ್ಲ ದೇವರು ಹುಟ್ಟಿಸಿದನೆಂದು ಅದರಲ್ಲಿ ಬರೆದದೆ.

ಗು.—ಚಂದ್ರಶೇಖರಾ, ಇದರ ಹೊರ್ತು ದೇವರ ಬಗ್ಗೆ ಮತ್ತೇನಾದರೂ ಬಲ್ಲಿಯಾ?

ಚಂ.—ದೇವರು ನಮಗೆ ಕಾಣಿಸದಿದ್ದರೂ ನಮ್ಮನ್ನು ಆತನು ಹಗಲೂ ಇರುಳೂ ಯಾವಾಗಲೂ ನೋಡುತ್ತಿರುತ್ತಾನೆ.

ಗು.—ಸರಿ, ನಾವು ಮಾಡುವದನ್ನೆಲ್ಲ ಆತನು ನೋಡುತ್ತಾನೆ; ಮಾತಾಡುವದನ್ನೆಲ್ಲ ಕೇಳುತ್ತಾನೆ; ಆದರೆ ನಾವು ಏನಾದರು ಮಾಡಿ, ಆತನಿಗೆ ತಿಳಿಯದ ಹಾಗೆ ಅದನ್ನು ಮುಚ್ಚುವದು ನಮ್ಮಿಂದಾಗುವದೋ?

ಬಾ.—ಎಂದಿಗೂ ಆಗದು ಸ್ವಾಮೀ; ನಾವು ಯಾವದಾದರೊಂದು ಕೆಲಸವನ್ನು ಯಾರಿಗೂ ತಿಳಿಯಗೊಡದೆ ಮಾಡಿದರೂ ಅದನ್ನು ದೇವರು ನೋಡೇ ನೋಡುತ್ತಾನೆ.

ಗು.—ನೀನು ಆಡಿದ ಮಾತು ನಿಜವು. ಆತನಿಂದ ನಾವು ಏನೇನೂ ಬಚ್ಚಲಾರೆವು. ಆತನಿಗೆ ತಿಳಿಯದ ಹಾಗೆ ಮಾಡುವದು ಎಂದಿಗೂ ನಮ್ಮಿಂದಾಗದು. ನಾವು ಕೆಟ್ಟ ಕೆಲಸ ಮಾಡಿದರೆ, ಮಂದಿ ಅದನ್ನು ನೋಡದಿದ್ದರೂ, ದೇವರು ನೋಡಿ ನಮಗೆ ನಿಜವಾಗಿ

ಅದಕ್ಕೆ ತಕ್ಕ ಶಿಕ್ಷೆ ಮಾಡುತ್ತಾನೆ. ಆದರೆ ನಾವು ಆತನನ್ನು ಪೂರಾ ನಂಬಿ, ಆತನಿಗೆ ಅಂಜಿಕೊಂಡು ಯಾವಾಗಲೂ ಒಳ್ಳೇ ರೀತಿಯಿಂದ ನಡೆದರೆ, ಆತನು ನಮಗೆ ಸಹಾಯ ಮಾಡುವನು. ನಂಬಿದವರಿಗೆ ಆತನು ತಾಯಿತಂದೆಗಳಿಗಿಂತ ಹೆಚ್ಚಿನ ಅಪ್ಪನು. ಆದದರಿಂದ ಆತನನ್ನು ನಾವೆಲ್ಲರೂ ಎಂದಿಗೂ ಮರೆಯಬಾರದು.

---

## ೨ನೇ ಪಾಠ.

### ಓದುವ ರೀತಿ.

ಚನ್ನಾಗಿ ಓದಕಲಿಯುವದು ಬಹು ಅವಶ್ಯವಾದ ಮಾತು. ಯಾವದಾದರೊಂದು ಕೆಟ್ಟ ಚಟ ಬಿದ್ದ ಬಳಿಕ ಅದು ಬೇಗ ಬಿಡುವದಿಲ್ಲ. ಆ ಕಾರಣ ಮೊದಲೇ ಉತ್ತಮ ರೀತಿಯನ್ನು ಹಿಡಿಯಬೇಕು.

ಕೆಲವರು ಅಕ್ಷರಗಳನ್ನು ಕಲಿತರೆ ತೀರಿತು, ಓದ ಬಂದ ಹಾಗಾಯಿತೆಂದು ತಿಳುಕೊಳ್ಳುತ್ತಾರೆ; ಇದು ಬಹಳ ದಡ್ಡತನವು. ಚನ್ನಾಗಿ ಓದುವದನ್ನು ಕುರಿತು ಕೆಲವು ನಿಯಮಗಳನ್ನು ಕೆಳಗೆ ಬರೆದಿದ್ದೇವೆ; ಇವುಗಳನ್ನು ಎಲ್ಲ ವಿದ್ಯಾರ್ಥಿಗಳು ನೆನಪಿಡಬೇಕು.

೧. ಸ್ವರ, ಮಹಾಪ್ರಾಣ ಮುಂತಾದ ಅಕ್ಷರಗಳನ್ನು ಕೆಲವು ಹುಡುಗರು ಸ್ಪಷ್ಟವಾಗಿ ಉಚ್ಚರಿಸುವದಿಲ್ಲ; ಇಂಥ ಅಕ್ಷರಗಳನ್ನು ಉಚ್ಚರಿಸಲಿಕ್ಕೆ ಚನ್ನಾಗಿ ಕಲಿತ ಬಳಿಕ ಪುಸ್ತಕಗಳನ್ನು ಓದಲಾರಂಭಿಸಬೇಕು.

೨. ಓದುವಾಗ ಕೆಲವು ಹುಡುಗರು ಅದೇ ಶಬ್ದವನ್ನು ಎರಡೆರಡು ಮೂರು ಮೂರು ಸಾರಿ ತಿರಿತಿರಿಗಿ ಅನ್ನುತ್ತಾರೆ; ಹಾಗೆ ಓದಬಾರದು. ಒಂದು ಶಬ್ದವನ್ನು ಒಮ್ಮೇ ಉಚ್ಚರಿಸಬೇಕು.

೩. ಬಹಳ ಮೆಲ್ಲಗೆ ಓದುವದರಿಂದ ವರ್ಗದೊಳಗಿನವರಿಗೆ ಕೇಳಿಸುವದಿಲ್ಲ; ಆ ಕಾರಣ ಘಟ್ಟಿಸಿ ಎಲ್ಲರಿಗೂ ಕೇಳಿಸುವಂತೆ ಓದಬೇಕು.

೪. ಕೆಲವು ಹುಡುಗರು ತಾವು ಬಹು ನಿಪುಣರೆಂಬುವದನ್ನು ತೋರಿಸುವದಕ್ಕಾಗಿ ಓದುವದರಲ್ಲಿ ಬಹು ತ್ವರೆ ಮಾಡುತ್ತಾರೆ; ಅದರಿಂದ ಅವರು ಏನು ಓದುತ್ತಾರೆಂಬುವದು ಹತ್ತಿರ ಕುಳಿತವರಿಗೆ ತಿಳಿಯುವದನಕ ಇರಲಿ, ಅವರದು ಅವರಿಗೆ ಸಹಾ ತಿಳಿಯುವದಿಲ್ಲ; ಹಾಗೆ ತ್ವರೆಯಿಂದ ಓದಬಾರದು; ಕೇಳುವವರಿಗೆ ತಿಳಿಯುವಂತೆ ಸಾವಕಾಶವಾಗಿಯೂ ಸ್ಪಷ್ಟವಾಗಿಯೂ ಓದಬೇಕು.

೫. ಕೆಲವರು ರಾಗದಿಂದ ಹಾಡಿದಂತೆ ಓದುತ್ತಾರೆ; ಅದೂ ಸರಿಯಲ್ಲ. ಸಾಧಾರಣವಾಗಿ ಮಾತಾಡಿದಂತೆ ಓದಬೇಕು.

೬. ಕೆಲವು ಹುಡುಗರು ಓದುವಾಗ ಒಂದು ಶಬ್ದವನ್ನು ಮತ್ತೊಂದು ಶಬ್ದದೊಳಗೆ ಕೂಡಿಸುತ್ತಾರೆ, ಅಂದರೆ ಒಂದು ಶಬ್ದದ ಕಟ್ಟಕಡೆಯ ಅಕ್ಷರವನ್ನು ಮುಂದಿನ ಶಬ್ದದ ಆರಂಭದ ಅಕ್ಷರದೊಳಗೆ ಕೂಡಿಸಿ ಓದುತ್ತಾರೆ; ಉದಾಹರಣೆ—"ಶ್ರೀಮತು ಸಕಲಗುಣಸಂಪನ್ನ" ಎಂದು ಓದುವದಕ್ಕೆ ಬದಲಾಗಿ "ಶ್ರೀಮ ತುಸ ಕಲ ಗುಣಸಂಪನ್ನ" ಎಂಬದಾಗಿ ಓದುವರು; ಆದರೆ ಹೀಗೆ ಓದುವದು ಬಹಳ ಅಶುದ್ಧ. ಒಂದೊಂದು ಶಬ್ದ ಬೇರೆ ಬೇರೆ ವಿಂಗಡಿಸಿ ಅರ್ಥ ತಿಳುಕೊಂಡು ಓದಬೇಕು.

೭. ಓದುವಾಗ ಎಲ್ಲೆಲ್ಲಿ ನಿಲ್ಲಬೇಕೆಂಬುವದು ಕೆಲವು ವಿದ್ಯಾರ್ಥಿಗಳಿಗೆ ಗೊತ್ತು ಇರುವದಿಲ್ಲ, ಸುಮ್ಮನೆ ಒಂದೇ ಸವನೆ ಓದುತ್ತ ಹೋಗುತ್ತಾರೆ; ಹೀಗೆ ಮಾಡಬಾರದು. ವಾಕ್ಯವು ತೀರ ಸಣದಿದ್ದರೆ, ನಡುವೆ ನಿಲ್ಲಬಾರದು; ವಾಕ್ಯ ಮುಗಿದ ಬಳಿಕ ಮಾತ್ರ ನಿಲ್ಲಬೇಕು. ದೊಡ್ಡ ವಾಕ್ಯವಿದ್ದರೆ, ಅದನ್ನು ಓದುವಾಗ ಎಲ್ಲೆಲ್ಲಿ ನಿಲ್ಲಬೇಕೆಂಬುವದರ ಬಗ್ಗೆ ಗುರುತುಗಳುಂಟೋ ಅಲ್ಲಲ್ಲಿ ನಿಲ್ಲಬೇಕು; ಅವುಗಳಿಗೆ ವಿರಾಮಚಿನ್ಹಗಳೆನ್ನುತ್ತಾರೆ. ಅವುಗಳನ್ನು ಉಪಯೋಗ ಸಹಿತ ಮುಂದಿನ ಪಾಠದೊಳಗೆ ಬರೆಯುವೆವು.

## ೩ನೇ ಪಾಠ.

### ವಿರಾಮಚಿನ್ಹಗಳು.

( , ) ಈ ಗುರುತಿಗೆ ಸ್ವಲ್ಪವಿರಾಮ ಅನ್ನುವರು; ಇದು ಇದ್ದಲ್ಲಿ ಸ್ವಲ್ಪ ನಿಲ್ಲಬೇಕು.

( ; ) ಈಗುರುತಿಗೆ ಅರ್ಧವಿರಾಮ ಅನ್ನುವರು; ಇದು ಇದ್ದಲ್ಲಿ ಮೇಲಿನದಕ್ಕಿಂತ ತುಸ ಹೆಚ್ಚು ನಿಲ್ಲಬೇಕು.

( . ) ಇದಕ್ಕೆ ಪೂರ್ಣವಿರಾಮ ಅನ್ನುವರು; ಇದು ಇದ್ದಲ್ಲಿ ವಾಕ್ಯವನ್ನು ಮುಗಿಸಿಬಿಡಬೇಕು.

( ? ) ಇದಕ್ಕೆ ಪ್ರಶ್ನಚಿನ್ಹ ಅನ್ನುವರು; ಎರಡನೆಯವರನ್ನು ಏನಾದರು ಕೇಳತಕ್ಕದ್ದಿದ್ದರೆ, ಇದನ್ನು ಉಪಯೋಗಿಸುತ್ತಾರೆ. ಆದಕಾರಣ ಈ ಚಿನ್ಹವಿದ್ದಲ್ಲಿ ಪ್ರಶ್ನಕೇಳುವ ಹಾಗೆ ಓದಬೇಕು.

( ! ) ಇದಕ್ಕೆ ಉದ್ಗಾರವಾಚಕಚಿನ್ಹ ಅನ್ನುವರು; ಆಶ್ಚರ್ಯ, ಭೀತಿ, ಆನಂದ, ದುಃಖ ಮುಂತಾದ ಮನೋವಿಕಾರಗಳನ್ನು ತೋರಿಸಬೇಕಾದಲ್ಲಿ ಇದನ್ನು ಹಾಕುತ್ತಾರೆ.

(" ") ಇದಕ್ಕೆ ಅವತರಣಚಿನ್ಹ ಅನ್ನುತ್ತಾರೆ; ಎರಡನೆ ಗ್ರಂಥಕಾರನ ಶಬ್ದಗಳನ್ನು ತಕ್ಕೊಂಡಲ್ಲಿ, ಇದನ್ನು ಉಪಯೋಗಿಸುತ್ತಾರೆ.

ಈ ಮೇರೆಗೆ ವಾಕ್ಯಗಳಲ್ಲಿ ಗುರುತುಗಳಿದ್ದರೆ, ಗ್ರಂಥ ಬರೆಯುವವನ ಮನಸ್ಸಿನೊಳಗಿನ ಅರ್ಥವು ಸ್ಪಷ್ಟವಾಗಿ ಹೊರಡುತ್ತದೆ; ಇಲ್ಲದಿದ್ದರೆ ವಾಕ್ಯಗಳ ಮೂಲಾರ್ಥವು ಕೆಟ್ಟು ಬೇರೆ ಏನಾದರು ಅರ್ಥವಾಗುವದು. ಹ್ಯಾಗಂದರೆ—"ಇಂಥ ಮಾತು ಆಗುವದೇ ಸುಳ್ಳು ಆದರೆ ಬಹು ಆಶ್ಚರ್ಯ" ಎಂಬ ವಾಕ್ಯದಲ್ಲಿ 'ಆಗುವದೇ' ಎಂಬ ಶಬ್ದದ ಮುಂದೆ ಸ್ವಲ್ಪವಿರಾಮವಿದ್ದರೆ, ಇಂಥ ಮಾತು ಆಗುವದು ನಿಶ್ಚಯ, ಅದು ಸುಳ್ಳಾದರೆ, ಬಹು ಆಶ್ಚರ್ಯ ಎಂಬ ಅರ್ಥವಾಗುವದು. ಅದೇ 'ಸುಳ್ಳು' ಎಂಬ ಶಬ್ದದ ಮುಂದೆ ಸ್ವಲ್ಪವಿರಾಮವಿದ್ದರೆ, ಇಂಥ ಮಾತು ಆಗುವದು ನಿಶ್ಚಯವಾಗಿ ಸುಳ್ಳು, ಅದು ಆದರೆ ಬಹು ಆಶ್ಚರ್ಯ ಎಂಬದಾಗಿ ವಿಪರೀತ ಅರ್ಥವಾಗುವದು.

ಈ ಮೇರೆಗೆ ವಿರಾಮಚಿನ್ಹಗಳಿದ್ದಂತೆ ಬೇರೆ ಬೇರೆ ಅರ್ಥವಾಗುವದು; ಆದಕಾರಣ ಆ ಚಿನ್ಹಗಳನ್ನು ಚನ್ನಾಗಿ ಲಕ್ಷ್ಯದಲ್ಲಿಟ್ಟು ಓದಬೇಕು.

ಕೆಲವು ವಾಕ್ಯಗಳಲ್ಲಿ ಒಂದೊಂದು ಶಬ್ದದೊಳಗೆ ವಿಶೇಷ ಅರ್ಥವಿರುತ್ತದೆ. ಅದರಿಂದ ಅದನ್ನು ಆ ವಾಕ್ಯದೊಳಗಿನ ಉಳಿದ ಶಬ್ದಗಳಿಗಿಂತ ಘಟ್ಟಿಸಿ ಉಚ್ಚರಿಸಬೇಕು. ಒಂದೇ ವಾಕ್ಯದೊಳಗಿನ ಬೇರೆ ಬೇರೆ ಶಬ್ದಗಳನ್ನು ಒತ್ತಿ ಓದಿದರೆ, ಬೇರೆ ಬೇರೆ ಅರ್ಥಗಳಾಗುತ್ತವೆ. ಹ್ಯಾಗೆಂದರೆ—"ನಾನು ನಿನ್ನನ್ನು ಹೊಡೆದೆನೋ?" ಎಂಬ ವಾಕ್ಯ ಓದುವಾಗ 'ನಾನು' ಎಂಬ ಶಬ್ದವನ್ನು ಘಟ್ಟಿಸಿ ಓದಿದರೆ, 'ನೀನಲ್ಲ, ಅವನು' ಎಂಬದಾಗಿ ಉತ್ತರ ಬರಬಹುದು; ಅದೇ 'ನಿನ್ನನ್ನು' ಎಂಬ ಶಬ್ದವನ್ನು ಒತ್ತಿ ಓದಿದರೆ, 'ನನ್ನನ್ನು ಅಲ್ಲ, ನಮ್ಮ ತಮ್ಮನನ್ನು' ಎಂಬ ಉತ್ತರ ಬರಬಹುದು; ಕಡೆಗೆ 'ಹೊಡೆದೆನೋ?' ಎಂಬ ಶಬ್ದವನ್ನು ಘಟ್ಟಿಸಿ ಓದಿದರೆ, 'ಹೊಡೆಯಲಿಲ್ಲ, ದಬ್ಬಿ ಕೊಟ್ಟೆ' ಎಂಬ ಉತ್ತರ ಬರಬಹುದು. ಈ ಮೇರೆಗೆ ಒಂದೇ ವಾಕ್ಯದಲ್ಲಿ ಬೇರೆ ಬೇರೆ ಶಬ್ದಗಳನ್ನು ಒತ್ತಿ ಓದಿದ ಹಾಗೆ ಬೇರೆ ಬೇರೆ ಅರ್ಥಗಳಾಗುವವು. ಆ ಕಾರಣ ತಕ್ಕ ಶಬ್ದಗಳನ್ನು ಒತ್ತಿ ಓದಬೇಕು.

ವರ್ಗದೊಳಗಿನವರಿಗೆ ಕೇಳಿಸುವಷ್ಟು ಘಟ್ಟಿಸಿ ನುಡಿದು ಶುದ್ಧವಾಗಿಯೂ ಸ್ಪಷ್ಟವಾಗಿಯೂ ಮಾತಾಡುವಂತೆ ಓದಬೇಕು.

---

## ೩ನೇ ಪಾಠ.

### ಸತ್ಯ ಮಾತಾಡಿದ ಜಾರ್ಜ ವಾಶಿಂಗ್ಟನ್ನನೆಂಬ ಹುಡುಗನು.

ಅಮೇರಿಕ ಖಂಡದೊಳಗಿನ ಪ್ರಸಿದ್ಧ ಸೇನಾಪತಿಯಾದ ವಾಶಿಂಗ್ಟನ್ನನೆಂಬವನು ಆರು ವರ್ಷದವನಿದ್ದಾಗ ಯಾರೋ ಒಬ್ಬರು ಅವನಿಗೆ ಒಂದು ಸಣ್ಣ ಕೊಡ್ಲಿಯನ್ನು ಕೊಟ್ಟರು. ಅದರಿಂದ ಅವನು ಹಿಗ್ಗಿ, ತನ್ನ ಹೊಸ ಕೊಡ್ಲಿಯು ಹದನವದೆಯೋ ಇಲ್ಲವೋ ನೋಡಬೇಕೆಂದು ಕಂಡ ಕಂಡದ್ದನ್ನೆಲ್ಲ ಕಡಿಯಹತ್ತಿದನು.



ವಾತಿಂಗ್ಟನ್ನನೂ ಅವನ ತಾಯಿಯೂ.

ಮನೆಯ ಹತ್ತಿರ ತೋಟದೊಳಗೆ ಅವನ ತಂದೆಯು ಪ್ರೀತಿಯಿಂದ ಹಚ್ಚಿದ ಒಂದು ಹಣ್ಣಿನ ಗಿಡವಿತ್ತು. ಆ ಹುಡುಗನು ಅಕಸ್ಮಾತ್ತಾಗಿ ಆ ಗಿಡದ ಹತ್ತಿರ ಹೋಗಿ, ಆಡುತ್ತ ಆಡುತ್ತ ತನ್ನ ಕೊಡ್ಲಿಯಿಂದ ಅದರ ತೊಗಟೆಯನ್ನು ಸವರಿದನು. ಅದರಿಂದ ಆ ಗಿಡವು ಬಾಡಿತು.

ಮರುದಿವಸ ಮುಂಜಾನೆ ಆತನ ತಂದೆಯು ತೋಟಕ್ಕೆ ಹೋಗಿ ನೋಡಲು, ತಾನು ಪ್ರೀತಿಯಿಂದ ಜೋಕೆ ಮಾಡಿದ ಗಿಡದ ಅವಸ್ಥೆಯು ಹೀಗಾಗಿತ್ತು. ಕಾರಣ ಮರಮರನೆ ಮರುಗಿ, ಐವತ್ತು ರೂಪಾಯಿ ಕೊಟ್ಟಿದ್ದರೂ ಈ ಗಿಡವನ್ನು ನಾನು ಯಾರಿಗೂ ಕೊಡುತ್ತಿದ್ದಿಲ್ಲ. ಇದನ್ನು ಈ ಹಾಡು ಮಾಡಿದವರು ಯಾರು? ಎಂದು ತೋಟದೊಳಗಿನ ಆಳುಗಳನ್ನು ಕರೆದು ಕೇಳಿದನು. ಆದರೆ ಅವರು ಅರಿಯದೆ ಇದ್ದದರಿಂದ ತಮಗೆ ಗೊತ್ತು ಇಲ್ಲೆಂದು ಹೇಳಿದರು.

ಅಷ್ಟರೊಳಗೆ ಆತನ ಮಗನು ಕೈಯೊಳಗೆ ಕೊಡ್ಲೀ ಹಿಡಕೊಂಡು, ತೋಟಕ್ಕೆ ಬಂದನು. ಅವನನ್ನು ನೋಡಿ ತಂದೆಯು— ಈ ಗಿಡದ ತೊಗಟೆಯನ್ನು ಸವರಿದವರು ಯಾರು? ನಿನಗೆ ಗೊತ್ತದೆಯೋ? ಎಂದು ಕೇಳಿದನು. ಆಗ ಆ ಹುಡುಗನು ತುಸು ಹೆದರಿ,— ಅಯ್ಯಾ, ನಾನು ಸುಳ್ಳು ಹೇಳಲಾರೆನು; ನಾನೇ ಈ ಗಿಡವನ್ನು ಈ ಕೊಡ್ಲಿಯಿಂದ ಸವರಿದನು ಎಂದು ಹೇಳಿದ ಕೂಡಲೆ ತಂದೆಯು ಆನಂದದ ಭರದಿಂದ—ಬಾ, ನನ್ನ ಮುದ್ದು ಮಗನೇ, ಎಂದು ಅವನನ್ನು ಅಪ್ಪಿಕೊಂಡು,—ನೀನು ನನ್ನ ಗಿಡವನ್ನು ನಾಶ ಮಾಡಿದ್ದರಿಂದ ನನಗೆ ಮೊದಲು ಖೇದವಾಗಿತ್ತು; ಆದರೆ ನೀನು ಈ ಪ್ರಸಂಗದಲ್ಲಿ ಸತ್ಯವನ್ನು ಹೇಳಿದ್ದರಿಂದ ಆ ಖೇದ ಹೋಗಿ, ನನಗೆ ಇಂಥಾ ಸಾವಿರ ಗಿಡಗಳ ಬೆಲೆ ಬಂದಷ್ಟು ಆನಂದವಾಯಿತು, ಎಂದು ಅವನನ್ನು ಮುಂಡಾಡಿದನು.


ಈ ಸಣ್ಣ ಹುಡುಗನು ಇದೇ ಗುಣದಿಂದ ಮುಂದೆ ಅಮೇರಿಕ ಖಂಡದೊಳಗಿನ ಒಂದು ದೊಡ್ಡ ನಾಡಿಗೆ ಮುಖ್ಯಾಧಿಕಾರಿಯಾದನು. ಮಕ್ಕಳಿರಾ, ಯಾವಾಗಲೂ ಸತ್ಯ ಹೇಳುವಂಥ, ಹೆರವರನ್ನು

ಮೋಸಗೊಳಿಸದಂಥ, ದೊಡ್ಡ ಮನಸ್ಸಿನ ಹುಡುಗನು ಎಲ್ಲರಿಗೂ ಬೇಕಾಗುವನು.

---

## ೫ನೇ ಪಾಠ.

## ಕುರಿ, ಆಡು.



ಬಹುತರವಾಗಿ ಎಲ್ಲ ನಾಡುಗಳಲ್ಲಿ ಕುರಿಗಳನ್ನು ಸಾಕುತ್ತಾರೆ. ಕುರಿಗಳು ಕಾಡುಗಳಲ್ಲಿ ಸಹಾ ಇರುವವು. ಕಾಡಗುರಿಗಳು ಏಸಿಯ, ಯುರೋಪ ಖಂಡಗಳ ಗುಡ್ಡಗಳಲ್ಲಿ ಉಂಟು. ಅವುಗಳಿಗೆ ಹೊಂಗುರಿಯೆಂದೆನ್ನುವರು.

ಕುರಿಗಳಲ್ಲಿ ಗಂಡಿಗೆ ಟಗರು, ಆಡುಗಳಲ್ಲಿ ಗಂಡಿಗೆ ಹೋತು ಅನ್ನುವರು. ಆಡಿನ ಕೋಡುಗಳೂ ಹೋತಿನ ಕೋಡುಗಳೂ ಮೇಲ್ಗಡಿಗೆ ಹಾದಿರುತ್ತವೆ. ಕುರಿಗಳಿಗೆ ಬಹುತರ ಕೋಡು ಇರುವದಿಲ್ಲ. ಟಗರಿನ ಕೋಡುಗಳು ಕೆಳಗೆ ಬಾಗಿ ಸುರುಳಿ ಸುತ್ತಿರುತ್ತವೆ. ಕುರಿಯ ಮೈಮೇಲೆ ಉಣ್ಣೆ, ಆಡಿನ ಮೈಮೇಲೆ ಕೂದಲು, ಆಡಿಗೂ ಕುರಿಗೂ ಇರುವ ಮುಖ್ಯ ಭೇದವಿಷ್ಟೇ.



ಏಸಿಯಾ ಮೈನರದೊಳಗಿನ ಅಂಗೋರದಲ್ಲಿ ಉತ್ತಮ ಜಾತಿಯ ಆಡುಗಳನ್ನು ಸಾಕುತ್ತಾರೆ; ಅವುಗಳ ರೇಶ್ಮಿಯಂಥ ಕೂದಲುಗಳಿಂದ ಸಕಲಾತಿ ಮುಂತಾದವುಗಳನ್ನು ನೇಯುತ್ತಾರೆ.

ತಿಬೇಟ ದೇಶದ ಆಡುಗಳ ಉತ್ಕೃಷ್ಟವಾದ ಕೂದಲುಗಳನ್ನು ಕಾಶ್ಮೀರಕ್ಕೆ ತಂದು, ಅಲ್ಲಿ ತರತರದ ಶಾಲುಗಳನ್ನು ನೇಯುತ್ತಾರೆ. ತಿಬೇಟ ದೇಶದಲ್ಲಿ ಉತ್ತಮ ಜಾತಿಯ ಕುರಿಗಳು ಅವೆ. ಅಲ್ಲಿಯ ಜನರು ಅವುಗಳ ಮೇಲೆ ಸರಕುಗಳನ್ನು ಹೇರಿಕೊಂಡು, ಪರನಾ

ಡುಗಳಿಗೆ ಹೋಗಿ, ವ್ಯಾಪಾರ ಮಾಡುತ್ತಾರೆ. ಹೋತುಗಳಿಗ ಗಡ್ಡ ವಿರುವದುಂಟು. ಬೇರೆ ಬೇರೆ ಬಣ್ಣದ ಕುರಿಗಳು ಇರುತ್ತವೆ.

ಆಡಿನ ಮರಿಗಳು ಬಹು ಚಪಲ; ಅವು ಉಲ್ಲಾಸದಿಂದ ನಾಲ್ಕೂ ಕಾಲು ಒಮ್ಮೆಲೆ ಎತ್ತೆತ್ತಿ ಅಡ್ಡ ಹಾರುತ್ತವೆ. ಅವುಗಳ ಮೇಲೆ ಪ್ರೀತಿ ಮಾಡಿದ್ದು ಅವುಗಳಿಗೆ ತಿಳಿಯುವದು. ಇವುಗಳಿಗೆ ಮನಸ್ಸಿಗೆ ಬಂದಂತೆ ತಿರುಗಾಡುವದೂ ಹಾರಾಡುವದೂ ಬೇಕು. ಇವು ಬಿಕ್ಕಟ್ಟಿನ ಗೋಡೆಯ ಮೇಲೆ ಸುಲಭದಿಂದ ಏರಿ ಹೋಗುತ್ತವೆ; ಹಕ್ಕಿಗಳ ಹೊರ್ತು ಎರಡನೆ ಪ್ರಾಣಿಗಳಿಗೆ ಹೋಗಲಿಕ್ಕೆ ಬಾರದ ಗುಡ್ಡದ ತುದಿಯ ಮೇಲೆ ಸಹಾ ಏರುತ್ತವೆ. ಇವುಗಳ ಕೊಳಗಗಳು ಇಬ್ಭಾಗವಾಗಿರುವದರಿಂದ ಎಂಥಾ ಬಿಕ್ಕಟ್ಟಿನಲ್ಲಿಯಾದರೂ ಜಾರುವದಿಲ್ಲ. ಇವು ಬಿಸಲೊಳಗೆ ಸೊಗಸಿನಿಂದ ಮಲಗಿಕೊಳ್ಳುತ್ತವೆ; ಕುರಿಗಳ ಮೈಮೇಲೆ ಉಣ್ಣೆ ಇರುವದರಿಂದ ಅವುಗಳಿಗೆ ಚಳಿಗಾಳಿಗಳ ಅಂಜಿಕೆ ಬಹಳವಿಲ್ಲ.

ಅಡವೀ ಆಡುಗಳು ಹತ್ತು ಹದಿನೈದರ ತನಕ ಕೂಡಿ, ಹಿಂಡುಗಟ್ಟಿ ತಿರುಗುತ್ತಿರುತ್ತವೆ. ಅವು ಗುಡ್ಡದ ಮೇಲೆ ಮೇದು ಸಂಜೆಗೆ ಕೆಳಗೆ ಇಳಿದು ಬರುವವು. ಜವುಳ ಅಡವಿಯಲ್ಲಿಯೂ ಕೊಬ್ಬೇರಿ ಬೆಳಿದ ಹುಲ್ಲಿನಲ್ಲಿಯೂ ಅವು ಮೇಯುವದಿಲ್ಲ; ದಿಬ್ಬಗಳ ಮೇಲೆಯೂ ಗುಡ್ಡಗಳ ಮೇಲೆಯೂ ಮೇಯಲಿಕ್ಕೆ ಹೋಗುತ್ತವೆ. ಒಮ್ಮೊಮ್ಮೆ ಎತ್ತರವಾದ ಬಿಕ್ಕಟ್ಟಿನ ಸ್ಥಳದೊಳಗೆ ಅಂಜಿಕೆ ಇಲ್ಲದೆ ಮಲಗುತ್ತವೆ; ಇಲ್ಲವೆ ಮೆಲಕಾಡಿಸುತ್ತ ಸಂತೋಷದಿಂದ ಬಿದ್ದುಕೊಂಡಿರುತ್ತವೆ. ಬೇಟೆಗಾರರು ಅಡವೀ ಆಡುಗಳನ್ನು ಹಿಡಿಯ ಹೋದರೆ, ಅವು ಅಂಥಾ ಬಿಕ್ಕಟ್ಟಿನೊಳಗಿಂದಾದರೂ ಕೆಳಗೆ ಹಾರಿ, ಪೆಟ್ಟು ಹಚ್ಚಿಕೊಳ್ಳದೆ ದಾಟಿ ಹೋಗುವವು. ಅಡವೀ ಕುರಿಗಳು ಮನುಷ್ಯರಿಗೆ ಮೊದಲು ಹೆದರಿದಾಗ್ಯೂ ಬರಬರುತ್ತ ಈಲಾಗುತ್ತವೆ.

ಎರಡನೆ ಪಶುಗಳ ಮರಿಗಳನ್ನು ಆಡುಗಳ ಮೊಲೆಗೆ ಹಚ್ಚಿದರೆ, ಅವು ಸುಮ್ಮನೇ ಮೊಲೆ ಕುಡಿಸುವವು. ಹೋತುಗಳು ಕಲಿಸಿದಂತೆ

ಕಲಿಯುತ್ತವೆ; ಮಂಗನ ಆಟದೊಳಗೆ ಹೋತುಗಳ ಚೇಷ್ಟೆಗಳನ್ನು ಎಲ್ಲರು ನೋಡಿ ಬಲ್ಲರು. ಆಡುಗಳು ಟಗರುಗಳ ಹಾಗೆ ಕಾದಾಡುವದಿಲ್ಲ; ಹಿಂಗಾಲು ಊರಿ ನಿಂತುಕೊಂಡು, ತಲೆಯನ್ನು ಓರೆ ಮಾಡಿ, ಕೋಡಿನಿಂದ ಸೊನ್ನೆ ಕೊಡುತ್ತವೆ.

ಆಡುಗಳು ಹಲವು ತರದ ಗಿಡಗಂಟಿಗಳನ್ನು ತಿನ್ನುತ್ತವೆ; ಆದದರಿಂದ ಅವುಗಳ ಹಾಲು ಹಿತಕರವು. ಹಾಳ ಅಡವಿಗಳಲ್ಲಿಯೂ, ಬೆಳೆಯುದ ನೆಲದಲ್ಲಿಯೂ ಸಹಾ ಅವು ಕರಿಕೆಯನ್ನೂ ಎಲೆಗಳನ್ನೂ ಹುಡುಕಿ ತಿನ್ನುವವು.

ಆಡುಗಳು ಸರತಿಗೆ ಎರಡು ಮೂರು ಮರಿಗಳನ್ನು ಈಯುತ್ತವೆ. ಕುರಿಯ ಹಾಲಿಗಿಂತಲೂ ಆಕಳ ಹಾಲಿಗಿಂತಲೂ ಆಡಿನ ಹಾಲು ಮಂದವಾಗಿ ಸವಿ ಇರುತ್ತವೆ. ಇವು ಹತ್ತು ಹನ್ನೆರಡು ವರ್ಷ ಬಾಳುವವು.


ಹೋತಿನ ಕೋಡುಗಳು ಚೂರೀ ಹಿಡಿಕಿಗೆ ಬರುತ್ತವೆ. ಕುರೀ ಮರಿಗಳ ತೊಗಲಿನಿಂದ ಕೈಚೀಲುಗಳನ್ನು ಮಾಡುತ್ತಾರೆ.

---

## ೬ನೇ ಪಾಠ.

### ನರಿಯೂ ಕಾಗೆಯೂ.

ಒಂದು ಕಾಗೆಯು ಮಾಂಸದ ಕರಣೆಯನ್ನು ಬಾಯೊಳಗೆ ಕಚ್ಚಿಕೊಂಡು ಹಾರಿ, ಒಂದು ಎತ್ತರವಾದ ಗಿಡದ ಕೊನೆಯಲ್ಲಿ ಹೋಗಿ ಕೂತಿತು. ಅದನ್ನು ಕಂಡು ಒಂದು ನರಿಯು ಆ ಮರದ ಕೆಳಗೆ ಹೋಗಿ, ಕಪಟದಿಂದ—ಎಲೈ ಕಾಕರಾಜನೇ, ನಿನ್ನ ಸಮಾನ ಸುಂದರವಾದ ಪಕ್ಷಿಯನ್ನು ನಾನು ಇಂದಿನ ವರೆಗೂ ಎಲ್ಲಿಯೂ ಕಾಣಲಿಲ್ಲ. ನಿನ್ನ ಗರಿಗಳು ಎಷ್ಟು ಚಂದ ಕಾಣಿಸುತ್ತವೆ! ನಿನ್ನ ಶರೀರದ ಕಾಂತಿಯನ್ನು ಎಷ್ಟು ವರ್ಣಿಸಿದರೂ ತೀರದು. ನಿನ್ನ ಅವಯವಗಳ ಸೌಂದರ್ಯವನ್ನೇ ಯಾವಾಗಲೂ ನೋಡುತ್ತ ಕುಳಿತುಕೊಳ್ಳಬೇಕೆಂಬ ಇಚ್ಛೆ ನನಗೆ ಆಗಿದೆ. ಇಷ್ಟು ಚಲ್ವಿಕೆಯು ಇದ್ದ



ಬಳಿಕ ನಿನ್ನ ಕಂಠದ ಸ್ವರವು ಸುಸ್ವರವೇ ಇರಬಹುದೆಂದು ನಾನು ನೆನಸುತ್ತೇನೆ. ಒಂದು ವೇಳೆ ನಿನ್ನ ಸ್ವರವು ಮಂಜುಳವಿದ್ದರೆ, ಕೇಳುವದೇನು! ನಿನ್ನ ಸಮಾನ ಮೂರು ಲೋಕದಲ್ಲಿಯೂ ಯಾರೂ ಇಲ್ಲ. ಈ ಪ್ರಕಾರ ತನ್ನ ಪ್ರಶಂಸೆ ಕೇಳಿ ಕಾಗೆಯು ತಾನು ಯಾರು ಎಂಬ ಎಚ್ಚರ ಮರೆತು, ಶಟಕೊಂಡು ಕೊಂಕು ಮಾಡುತ್ತ, ತನ್ನ ಸ್ವರಕ್ಕೆ ಈ ನರಿಯು ಭ್ರಾಂತವಾಗಿದೆ, ಇದನ್ನು ಸಂತೋಷಗೊಳಿಸಬೇಕೆಂದು ಗಾಯನಕ್ಕೆ ಆರಂಭ ಮಾಡಿತು. ಬಾಯ ತೆರಿದ ಕೂಡಲೆ ಮಾಂಸದ ಕರಣಿಯು ಕೆಳಗೆ ಬಿತ್ತು. ಅದನ್ನು ನರಿಯು ತಕ್ಕೊಂಡು ಆ ಕಾಗೆಯ ಮರುಳುತನಕ್ಕೆ ನಗುತ್ತ ಹೊರಟು ಹೋಯಿತು.

---

## ೭ನೇ ಪಾಠ.

### ಲವಂಗ.

ಲವಂಗದ ಗಿಡಗಳು ಮೊದಲು ಮೊಲಕ್ಕಾ ನಡುಗಡ್ಡೆಗಳಲ್ಲಿ ಮಾತ್ರ ಬೆಳೆಯುತ್ತಿದ್ದವು. ಅಲ್ಲಿಂದ ಅದರ ಸಸಿಗಳನ್ನು ಫ್ರಾನ್ಸ, ಬೋರ್ನಿಯೊ, ದಕ್ಷಿಣ ಅಮೇರಿಕಗಳಿಗೆ ಒಯ್ದರು. ಇತ್ತಿತ್ತ ಈ

ದೇಶದೊಳಗಾದರೂ ಈ ಗಿಡಗಳನ್ನು ಹಚ್ಚಹತ್ತಿದ್ದಾರೆ. ಈ ಗಿಡಗಳು ಹತ್ತು ಹನ್ನೆರಡು ಮೊಳ ಎತ್ತರ ಬೆಳೆದು, ಎಂಟು ಒಂಬತ್ತು ವರ್ಷಕ್ಕೆ ಫಲಿಸುತ್ತವೆ. ಅಂಬಾಯಿನ ಎಂಬ ನಡುಗಡ್ಡೆಯೊಳಗೆ ಉತ್ಕೃಷ್ಟ ಲವಂಗಗಳು ಹುಟ್ಟುತ್ತವೆ. ವರ್ಷಕ್ಕೊಮ್ಮೆ ಒಂದೊಂದು ಗಿಡಕ್ಕೆ ಬಹಳ ಲವಂಗಗಳು ಆಗುವವು. ಮೊಲಕ್ಕಾ ನಡುಗಡ್ಡೆಗಳನ್ನು ಡಚ್ಚ ಜನರು ಆಳುತ್ತಿದ್ದಾಗ, ಅವರು ಲವಂಗದ ವ್ಯಾಪಾರವನ್ನು ತಾವೇ ಮಾಡಿ ಮನಸ್ಸಿಗೆ ಬಂದ ಹಾಗೆ ತುಟ್ಟಿ ಮಾರುತ್ತಿದ್ದರು.

ಲವಂಗಗಳಿಂದ ಎಣ್ಣೇ ತೆಗೆಯುತ್ತಾರೆ. ನೆಗಡಿಯಾದರೆ, ಲವಂಗದ ಕಷಾಯ ಕುಡಿಯುವರು. ಕೆಲವರು ಲವಂಗಗಳನ್ನು ಹಾಗೇ ತಿನ್ನುತ್ತಾರೆ; ಕೆಲವರು ವೀಳೆ ಎಲೆಯ ಕೂಡ ತಿನ್ನುತ್ತಾರೆ. ಮುಂಚೆ ಲವಂಗಗಳು ನಾಲ್ಕು ಆಣೆಗೆ ತೊಲೆ ದೊರೆಯುತ್ತಿದ್ದವು; ಆದರೆ ಈಗ ಒಂದು ಆಣೆಗೆ ಮೂರು ನಾಲ್ಕು ತೊಲೆ ಆಗಿವೆ.

---

## ೮ನೇ ಪಾಠ.

### ಬೈದಾಡಬಾರದೆಂಬ ಬಗ್ಗೆ.

ಒಂದು ದಿನ ಒಬ್ಬ ಬಡವರ ಹುಡುಗನು ಒಬ್ಬ ಅರಸುಮಗನಿಗೆ ಬೈದನು. ಆಗ ಆತನು ಅಳುತ್ತಾ ತನ್ನ ತಂದೆಯ ಬಳಿಗೆ ಹೋಗಿ, ಇಂಥಾ ಹುಡುಗನು ತನ್ನನ್ನು ಬೈದನೆಂದು ದೂರಿದನು. ಅದನ್ನು ಕೇಳಿ ಆ ಅರಸು ಓಲಗದಲ್ಲಿದ್ದವರಿಗೆ ಆ ಸಂಗತಿಯನ್ನು ತಿಳಿಸಿ, ಆ ಬೈದ ಹುಡುಗನನ್ನು ಏನು ಮಾಡಬೇಕೆಂದು ಕೇಳಿದನು. ಬಳಿಕ ಅವರಲ್ಲಿ ಕೆಲವರು—ಆ ಹುಡುಗನನ್ನು ಊರ ಬಿಡಿಸಿ ಹೊರಗೆ ಹಾಕತಕ್ಕದ್ದೆಂತಲೂ, ಕೆಲವರು ಅವನನ್ನು ಶೆರೆಯೊಳಗೆ ಇಟ್ಟರೆ ಒಳ್ಳೇದೆಂತಲೂ, ಕೆಲವರು ಅವನಿಗೆ ದಂಡಾ ಕಟ್ಟಿದರೆ ಸಾಕು ಎಂತಲೂ ತಮಗೆ ತಿಳಿದಂತೆ ಹಲವು ಪ್ರಕಾರ ಹೇಳಿದರು.


ತರುವಾಯ ಆ ಅರಸು ತನ್ನ ಮಗನಿಗೆ—ನಾನು ಅರಸು,

ನಿನ್ನನ್ನು ಬೈದವನಿಗೆ ಬೇಕಾದ ಶಿಕ್ಷೆ ಕೊಡುವದು ನನ್ನ ಕೈಯೊಳಗೆ ಅದೆ. ಆದರೆ ಆ ಹುಡುಗನನ್ನು ನೀನು ಕ್ಷಮಿಸಿಬಿಟ್ಟರೆ, ಜನರು ನಿನಗೆ ಬಹಳ ಮೆಚ್ಚುವರು. ಶಿಕ್ಷಿಸುವದಕ್ಕಿಂತ ಕ್ಷಮಿಸುವದು ಬಹು ಯೋಗ್ಯವು, ಎಂದು ಬುದ್ಧೀ ಹೇಳಿದನು. ಆ ಮೇಲೆ ಆ ಅರಸುಮಗನು ತನ್ನ ತಂದೆಯ ಬುದ್ಧೀ ಮಾತು ಮನಸ್ಸಿಗೆ ತಂದು ಆ ಹುಡುಗನನ್ನು ಕ್ಷಮಿಸಿ,—ನಿನ್ನನ್ನು ಇಂದೊಂದು ಸಾರಿ ಬಿಟ್ಟು ಬಿಡುತ್ತೇನೆ; ನೀನು ಬಹಳ ಚಿಕ್ಕವನಾಗಿಯೂ ತಿಳಿಗೇಡಿಯಾಗಿಯೂ ಇದ್ದೀ; ಇನ್ನು ಮೇಲೆ ಹೀಗೆ ಮಾಡಬೇಡ. ಬೈದಾಡುವ ನಡತೆ ಬಹಳ ಕೆಟ್ಟದ್ದು, ಇದನ್ನು ಚನ್ನಾಗಿ ನೆನಪಿನಲ್ಲಿಡು, ಎಂದು ಬುದ್ಧೀ ಹೇಳಿ ಅವನನ್ನು ಕಳುಹಿಸಿದನು.

---

## ೮ನೇ ಪಾಠ.

### ಹದಿನೇಳು ಆನೆಗಳನ್ನು ಮೂರು ಮಂದಿಗೆ ಹಂಚಿ ಕೊಟ್ಟ ಕಥೆ.




ವಿಜಯನಗರವೆಂಬ ಪಟ್ಟಣದಲ್ಲಿ ವೀರಶೆಟ್ಟಿಯೆಂಬ ಒಬ್ಬ ವರ್ತಕನಿದ್ದನು. ಆತನಿಗೆ ಮೂರು ಮಂದಿ ಮಕ್ಕಳಿದ್ದರು. ಸಾಯು

ವಾಗ ಆತನು ತನ್ನ ಮಕ್ಕಳನ್ನು ಕರೆದು—ನಾನು ಹದಿನೇಳು ಆನೆಗಳನ್ನು ಸಂಪಾದಿಸಿದ್ದೇನೆ. ಇವು ಚಲೋ ಲಕ್ಷಣಗಳುಳ್ಳವು. ಇವುಗಳನ್ನು ಯಾರಿಗೂ ಮಾರಬೇಡಿರಿ. ಇವುಗಳಲ್ಲಿ ಎರಡರಲ್ಲೊಂದು ಪಾಲು ಚೊಚ್ಚಲ ಮಗನು, ಮೂರರಲ್ಲೊಂದು ಪಾಲು ಮರುಚಲ ಮಗನು, ಒಂಬತ್ತರಲ್ಲೊಂದು ಪಾಲು ಕಡೆ ಹುಟ್ಟಿದ ಮಗನು ತಕ್ಕೊಂಡು ಅವನ್ನು ಚನ್ನಾಗಿ ಆರೈಕೆ ಮಾಡಿಕೊಂಡು ಇರ್ರಿ. ಉಳಿದ ಬೆಳ್ಳಿ ಭಂಗಾರ, ಕಾಳುಕಡಿ, ಮನೆಮಾರು, ದನಕರ ಮುಂತಾದವುಗಳನ್ನು ಸರಿಯಾಗಿ ಮೂರು ಪಾಲು ಮಾಡಿ ಹಂಚಿಕೊಳ್ಳಿರೆಂದು ಹೇಳಿ ಸತ್ತು ಹೋದನು. ಬಳಿಕ ಮೂವರು ಮಕ್ಕಳು ಆತನ ಉತ್ತರಕ್ರಿಯಾದಿಗಳನ್ನು ಮಾಡಿ, ತಂದೆ ಗಳಿಸಿದ ಬದುಕು ಮೂರು ಪಾಲು ಮಾಡಿ, ಒಬ್ಬೊಬ್ಬರು ಒಂದೊಂದು ಪಾಲು ತಕ್ಕೊಂಡರು. ಆನೆಗಳನ್ನು ತಂದೆ ಹೇಳಿದ ಮೇರೆಗೆ ಪಾಲು ಮಾಡಿಕೊಳ್ಳುವದಕ್ಕೆ ತಿಳಿಯದೆ, ಊರೊಳಗಿನ ಜಾಣರಿಗೆ ಹೇಳಿಕೊಂಡರು. ಅವರು ತಮ್ಮಿಂದಾಗದೆಂದು ಅಂದದರಿಂದ ಇವರು ಆನೆಗುಂದೀ ಸಂಸ್ಥಾನದ ರಾಯರ ಅಪ್ಪಾಜಿಯೆಂಬ ಮಂತ್ರಿಯ ಬಳಿಗೆ ಹೋಗಿ ಅರಿಕೆ ಮಾಡಿದರು. ಆತನು ಒಂದು ಗಳಿಗೆ ಯೋಚಿಸಿ, ನಿಮ್ಮ ತಂದೆ ಹೇಳಿದಂತೆಯೇ ಪಾಲು ಮಾಡಿ ಕೊಡುತ್ತೇನೆಂದು ಅವರಿಗೆ ಹೇಳಿ, ತಾನು ಒಂದು ಆನೆಯ ಮೇಲೆ ಕುಳಿತುಕೊಂಡು ವಿಜಯನಗರಕ್ಕೆ ಬಂದು, ನಿಮ್ಮ ಹದಿನೇಳು ಆನೆಗಳಲ್ಲಿ ನನ್ನದೂ ಒಂದು ಕೂಡಿಸಿಕೊಂಡು ನಿಮ್ಮ ತಂದೆ ಹೇಳಿದಂತೆ ನಿಮ್ಮ ನಿಮ್ಮ ಪಾಲಿಗೆ ಬಂದಷ್ಟು ಆನೆಗಳನ್ನು ತಕ್ಕೊಳ್ಳಿರೆಂದು ಹೇಳಿದನು. ಅವರು ಒಂದು ಆನೆ ಹೆಚ್ಚಿಗೆ ಬಂತೆಂದು ಹಿಗ್ಗಿ, ಹಿರಿಯ ಮಗನು ಒಂಬತ್ತು, ನಡುವಿನ ಮಗನು ಆರು, ಕಿರಿಯ ಮಗನು ಎರಡು, ಈ ಮೇರೆಗೆ ಆನೆಗಳನ್ನು ಹಂಚಿಕೊಂಡರು. ಕಡೆಗೆ ರಾಯರ ಅಪ್ಪಾಜಿ ಕೊಟ್ಟ ಆನೆ ಉಳಿಯಿತು; ಅದನ್ನು ಹತ್ತಿಕೊಂಡು ಆತನು ತಿರಿಗಿ ಆನೆಗುಂದಿಗೆ ಹೋದನು.

---

# ೧೦ನೇ ಪಾಠ.

## ಎತ್ತು, ಆಕಳು.




ಎತ್ತು ಆಕಳುಗಳು ಮೆಲಕಾಡಿಸುವ ದನಗಳು; ಮನುಷ್ಯರು ಇರುವಲ್ಲಿ ಇವು ಬಹುತರವಾಗಿ ಇರುತ್ತವೆ. ಪೋಲಂಡ, ಕೇಪ ಆಫ್‌ಗುಡ್‌ಹೋಪ, ತಿಬೇಟ, ಉತ್ತರ ಅಮೇರಿಕಗಳ ಅಡವಿಗಳಲ್ಲಿ ಕಾಡಾಕಳು ಕಾಡೆತ್ತುಗಳು ಉಂಟು. ಅವು ದೊಡ್ಡವು ಇರುತ್ತವೆ.

ಎತ್ತು ಆಕಳುಗಳ ಕುತ್ತಿಗೆಯ ಕೆಳಗೆ ತಿಳುವಾದ ತೊಗಲು ಜೋತಾಡುತ್ತಿರುತ್ತದೆ; ಅದಕ್ಕೆ ಗಂಗೆದೊಗಲೆನ್ನುವರು. ಇವುಗಳ ಬಾಲದ ತುದಿಗೆ ಕೂದಲು ಇರುತ್ತವೆ. ಇವುಗಳ ಇಬ್ಭಾಗವಾದ ಕೊಳಗಗಳ ಹಿಂದೆ ಎರಡೆರಡು ಚಿಟಿಗೊಳಗು ಇರುವವು. ಹಿಂದುಸ್ತಾನದೊಳಗಿನ ಎತ್ತುಗಳಿಗೆ ಇಣಿ ಇದ್ದ ಹಾಗೆ ಬೇರೆ ಯಾವ ನಾಡೊಳಗಿನ ಎತ್ತುಗಳಿಗೂ ಇರುವದಿಲ್ಲ. ಈ ದನಗಳು ಹಲವು ಬಣ್ಣದವು ಇರುತ್ತವೆ.

ಇವು ಸಭ್ಯ ಸ್ವಭಾವದವು; ಸಾಕಿದ ಎತ್ತುಗಳು ಒಡೆಯನಿಗೆ ಅಂಕಿತವಾಗಿ ಅವನ ಕೆಲಸಗಳನ್ನು ಮಾಡುವವು. ಎತ್ತುಗಳು

ಡುರಕಿ ಹಾಕುತ್ತವೆ. ಕಾಡಾಕಳು ಕಾಡೆತ್ತುಗಳು ಇರಕುಳಿ ಇರು ತ್ತವೆ. ಇವು ಕೋಡುಗಳಿಂದ ಕಾದುವವು.

ಇವು ಹುಲ್ಲನ್ನೂ, ಗಿಡದ ಎಲೆಗಳನ್ನೂ, ಕಾಳುಗಳನ್ನೂ ತಿಂದು ಬದುಕುತ್ತವೆ. ಇವುಗಳ ಹೊಟ್ಟೆಯೊಳಗೆ ಜೀರ್ಣಕೋಶಗಳೆಂಬ ನಾಲ್ಕು ಚೀಲಗಳುಂಟು. ಮೊದಲು ಔಡೌಡವಾಗಿ ತಿಂದ ಮೇವು ಮೊದಲನೇ ಚೀಲದೊಳಗೆ ಇಳಿದು, ಅಲ್ಲಿಂದ ಎರಡನೇ ಚೀಲದೊ ಳಗೆ ಇಳಿಯುತ್ತದೆ; ಅಲ್ಲಿ ಚನ್ನಾಗಿ ತ್ಯಾವವಾದ ಬಳಿಕ ಮರಳಿಸಿ ಬಾಯೊಳಗೆ ತುಸು ತುಸು ತಕ್ಕೊಂಡು ಮೆಲಕಾಡಿಸುವವು; ಆ ಮೆಲಕಾಡಿಸಿದಂಥ ಮೇವು ಮೂರನೇ ಚೀಲದೊಳಗೆ ಇಳಿದು, ಅಲ್ಲಿಂದ ನಾಲ್ಕನೇ ಚೀಲದೊಳಗೆ ಹೋಗಿ ಪಚನವಾಗುತ್ತದೆ. ಇವುಗಳಿಗೆ ತೌಡು, ಹಿಂಡಿ, ಹತ್ತೀಕಾಳು ಮುಂತಾದವುಗಳನ್ನು ತಿನಿಸುವರು. ಇವು ಬಹುತರವಾಗಿ ಹೊತ್ತಿಗೆ ಸಿಕ್ಕ ನೀರು ಕುಡಿ ಯುತ್ತವೆ.




ಆಕಳು ಗಬ್ಬವಾಗಿ ಒಂಬತ್ತು ತಿಂಗಳಿಗೆ ಈಯುತ್ತವೆ. ಸರ ತಿಗೆ ಒಂದೇ ಕರ ಹುಟ್ಟುವದು; ಹೆಣ್ಣಾದರೆ ಕರವೆಂತಲೂ, ಗಂಡಾ ದರೆ ಹೋರಿಯೆಂತಲೂ ಅನ್ನುತ್ತಾರೆ. ಕರಗಳು ಹುಟ್ಟಿದ ಕೂಡಲೆ ಎದ್ದು ನಿಂತು ಮೊಲೆ ಕುಡಿಯುವವು. ಇವುಗಳ ಬೆಳವಣಿಗೆ ಮೂರು ವರ್ಷ. ಇವು ಹದಿನೈದು ವರ್ಷ ಬದುಕುತ್ತವೆ. ಇವುಗಳ ಹಲ್ಲೂ, ಕೋಡೂ ನೋಡಿ ವಯಸ್ಸು ತಿಳುಕೊಳ್ಳುತ್ತಾರೆ. ಆಕಳಿಗೆ ನಾಲ್ಕು ಮೊಲೆಗಳಿರುತ್ತವೆ. ಇದರ ಹಾಲಿನ ಚೀಲಕ್ಕೆ ಕೆಚ್ಚಲವೆನ್ನುತ್ತಾರೆ.

ನಮ್ಮ ದೇಶದಲ್ಲಿ ಬಹು ಕಾಲದಿಂದ ಜನರು ಹೊಲದ ಕೆಲಸಗಳನ್ನು ಎತ್ತುಗಳಿಂದಲೇ ಸಾಗಿಸಿಕೊಳ್ಳುತ್ತ ಬಂದಿದ್ದಾರೆ. ಇವುಗಳನ್ನು ಒಜ್ಜೆ ಹೊರುವದಕ್ಕೂ ಬಂಡೀ ಎಳೆಯುವದಕ್ಕೂ ಹೊಲ ಹರಗುವದಕ್ಕೂ ಹಚ್ಚುತ್ತಾರೆ. ಹಲವರು ಎತ್ತುಗಳ ಮೇಲೆ ಹತ್ತಿಕೊಂಡು ಊರಿಂದೂರಿಗೆ ಹೋಗುತ್ತಾರೆ. ಆಕಳಗಳಿಂದ ಮನುಷ್ಯರಿಗೆ ಹಾಲು, ತುಪ್ಪ, ಬೆಣ್ಣೆ, ಮೊಸರು, ಮಜ್ಜಿಗೆ ಮುಂತಾದವುಗಳು ದೊರೆಯುತ್ತವೆ.

---

## ೧೧ನೇ ಪಾಠ.

### ನೀರೊಳಗೆ ನೆರಳು ನೋಡಿದ ಸಾರಂಗ.



ಒಂದು ದಿನ ಒಂದು ಸಾರಂಗವು ಕೆರೆಯಲ್ಲಿ ನೀರು ಕುಡಿಯುವಾಗ ನೀರೊಳಗೆ ಪ್ರತಿಬಿಂಬಿಸಿದ ತನ್ನ ನೆರಳ ನೋಡಿ ಬಹಳ ಸಮಾಧಾನಗೊಂಡು, ಕೋಡಿನ ತುದಿಯಿಂದ ಕಾಲ ತನಕ ದಿಟ್ಟಿಸಿ ನೋಡಿ—ಅಹಹಾ, ನನ್ನ ತಲೆಯ ಮೇಲಿನ ಕೋಡು ಎಂಥಾ ಚಂದ ಕಾಣಿಸುತ್ತವೆ! ಇವುಗಳಿಂದ ನನ್ನ ತಲೆಗೆ ಶೋಭೆ ಉಂಟಾಗಿದೆ! ಆದರೆ ನನ್ನ ಕಾಲುಗಳು ಉದ್ದವಾಗಿ ಬಹಳ ಸಣ್ಣಗೆ ಅವೆ! ಇವುಗಳಿಂದ ನನ್ನ ಚೆಲ್ವಿಕೆಯೇ ಅಂದಗೆಟ್ಟು ಹೋಗಿದೆ! ಉಳಿದದ್ದೇನು

ಕುಂದಿಡುವ ಹಾಗಿಲ್ಲ, ಕಾಲು ನೋಡಿದರೆ ಮಾತ್ರ ನನಗೆ ನಾಚಿಕೆ ಬರುವದು. ಇಂಥಾ ಅವುಂಗಳ ಕಾಲು ಇರುವದಕ್ಕಿಂತ ದೇವರು ನನಗೆ ಕಾಲುಗಳನ್ನೇ ಕೊಡದಿದ್ದರೆ ನೆಟ್ಟಗಾಗುತ್ತಿತ್ತು, ಎಂದು ಅದು ಕ್ಲೇಶ ಪಡುತ್ತಿರುವಷ್ಟರಲ್ಲಿ ಒಮ್ಮಿಂದೊಮ್ಮೆ ಬೇಟೀನಾಯಿಗಳು ಬೊಗಳುತ್ತ ಬಂದವು. ಆಗ ಈ ಸಾರಂಗವು ಅಂಜಿ ಎದೆಯೊಡ ಕೊಂಡು ಗಿಡದ ಗುಂಪಿನೊಳಗೆ ಹೊಕ್ಕು ಅಡಗಿಕೊಳ್ಳಬೇಕೆಂದು ಓಡಿತು. ಆದರೆ ಅದರ ಕೋಡು ಗಿಡದ ಟೊಂಗೆಗಳಲ್ಲಿ ತೊಡಕಿ ಕೊಂಡವು; ಬೇಕಾದಷ್ಟು ಒದ್ದಾಡಿ ಜಿಗ್ಗಾಡಿದಾಗ್ಯೂ ಬಿಡುಗಡೆ ಯಾಗಲಿಲ್ಲ. ಅಷ್ಟರೊಳಗೆ ಆ ಬೇಟೀನಾಯಿಗಳು ಬಂದು ಅದನ್ನು ಹಿಡಿದವು. ಆಗ ಅದು ತನ್ನ ಮನಸ್ಸಿನಲ್ಲಿ—ನಾನು ಧಿಕ್ಕರಿಸಿ ಹಳಿದ ಕಾಲುಗಳೇ ನನ್ನನ್ನು ಸಂಕಟದೊಳಗಿಂದ ಪಾರ ಮಾಡಲಿಕ್ಕೆ ತಕ್ಕ ಸಹಾಯ ಮಾಡಿದವು. ಆದರೆ ಯಾವ ಕೋಡುಗಳ ಬಗ್ಗೆ ನನಗೆ ಬಹಳ ಗರ್ವ ಬಂದಿತ್ತೋ ಆ ಕೋಡುಗಳೇ ಕಡೆಗೆ ನನ್ನ ಪ್ರಾಣಕ್ಕೆ ಮುಳುವು ಆದವು. ಇವಷ್ಟು ಇಲ್ಲದಿದ್ದರೆ ನನ್ನ ಅವಸ್ಥೆ ಹೀಗಾಗು ತ್ತಿದ್ದಿಲ್ಲ. ಎಂದು ಪಶ್ಚಾತ್ತಾಪ ಪಟ್ಟಿತು.

ಪೂರ್ಣ ವಿಚಾರ ಮಾಡದೆ ಯಾವದಕ್ಕೂ ಹೆಸರಿಡಬಾರದು. ಒಮ್ಮೊಮ್ಮೆ ನಿರುಪಯುಕ್ತವಾಗಿ ತೋರುವ ಪದಾರ್ಥವೇ ಒಂದೊಂದು ಪ್ರಸಂಗದಲ್ಲಿ ನಮಗೆ ಬಹಳ ಉಪಯೋಗಕ್ಕೆ ಬೀಳುತ್ತದೆ.

---

## ೧೨ನೇ ಪಾಠ.

### ಬಾದಾಮಿ.

ಬಾದಾಮಿ ಗಿಡಗಳು ದೊಡ್ಡವು. ಇವು ಬೇಗ ಬೆಳೆಯುತ್ತವೆ. ಇವುಗಳಿಗೆ ಕಾಯಿ ಬಹಳವಾಗುವವು. ಇರಾಣ ಅರ್ಬಸ್ಥಾನಗಳಲ್ಲಿ ಬಾದಾಮಿ ಬಹಳ. ಅಲ್ಲಿಂದಲೇ ನಮ್ಮದೇಶಕ್ಕೆ ಬಾದಾಮಿ ಬರುತ್ತವೆ. ಫ್ರಾನ್ಸ್, ಸ್ಪೇನ್, ಇತಾಲಿ ನಾಡುಗಳಲ್ಲಿಯೂ ಬಾದಾಮಿ ಹುಟ್ಟುತ್ತವೆ.

IMPERIAL LIBRARY

ಬಾದಾವೀ ಗಿಡಗಳಿಗೆ ಜ್ಯೇಷ್ಠ ಆಷಾಢಗಳಲ್ಲಿ ಹೂಬಿಟ್ಟು, ಆಶ್ವಿನ ಕಾರ್ತಿಕಗಳಲ್ಲಿ ಹಣ್ಣಾಗುತ್ತವೆ. ಅದರ ಹೂವು ಕೆಂಪು, ಹಣ್ಣು ಸಣ್ಣ ಪೇರಲ ಹಣ್ಣಿನಷ್ಟು ಆಗುವವು. ಅವುಗಳ ಮೇಲಿನ ತೊಗಟಿ ಕೆಂಪು; ತಿಂದರೆ ಆ ತೊಗಟಿ ತುಸು ಒಗರು ಹತ್ತುತ್ತದೆ. ಈ ನಾಡೊಳಗೆ ಬಾದಾವೀ ಗಿಡಗಳನ್ನು ಹಚ್ಚುತ್ತಾರೆ; ಆದರೂ ಮೇಲೆ ಹೇಳಿದ ನಾಡೊಳಗಿನಂಥ ಬಾದಾವಿ ಆಗುವದಿಲ್ಲ.

ಬಾದಾವಿ ಬಹು ರುಚಿಕರ. ಅದರ ಎಣ್ಣೆ ಔಷಧಕ್ಕೆ ಬರುತ್ತದೆ.

ಕಹಿ ಬಾದಾವಿಗಳನ್ನು ತಿನ್ನುವದಿಲ್ಲ. ಇದರ ಎಣ್ಣೆಯೂ ಔಷಧಕ್ಕೆ ಬರುತ್ತದೆ. ಕವಡಿಗಳಂತೆ ಸುರತ ಪಟ್ಟಣದಲ್ಲಿ ಕಹಿ ಬಾದಾವಿ ನಡೆಯುತ್ತವೆ. ಕೆಲವರು ಬಾದಾವೀ ಚಿಪ್ಪು ಸುಟ್ಟು ಕರೆಬೂದಿ ಮಾಡಿ ಅದರಿಂದ ಹಲ್ಲು ತಿಕ್ಕಿಕೊಳ್ಳುತ್ತಾರೆ; ಅದರಿಂದ ಹಲ್ಲು ಹಸನಾಗಿ ಘಟ್ಟಿಯಾಗುವವು.

---

## ೧೩ನೇ ಪಾಠ.

### ಇಲಿಗಳೂ ತತ್ತಿಗಳೂ.

ಇಲಿಗಳು ಕೋಳೀ ಗೂಡಿನೊಳಗೆ ಹೊಕ್ಕು ತತ್ತಿಗಳನ್ನು ಕೆಡಿಸುತ್ತವೆ. ಒಮ್ಮೊಮ್ಮೆ ಕೋಳೀ ಗೂಡಿನೊಳಗಿಂದ ತತ್ತಿಗಳು ಹೋಗುತ್ತವೆ; ಆದರೆ ಅವುಗಳನ್ನು ಇಲಿಗಳು ಒಯ್ಯುತ್ತವೆಂದು ಯಾರಿಗೂ ತಿಳಿಯದು. ಯಾಕಂದರೆ, ಇಂಥಾ ದೊಡ್ಡ ದುಂಡನ್ನ ಪದಾರ್ಥವನ್ನು ಎತ್ತಿಕೊಂಡು ಹೋಗುವದು ಇಂಥಾ ಸಣ್ಣ ಪ್ರಾಣಿಗಳಿಂದ ಆದೀತೆಂದು ಯಾರಿಗೂ ತೋರುವದಿಲ್ಲ. ಆದರೂ ಇಲಿಗಳು ತತ್ತಿಗಳನ್ನು ಒಯ್ಯುವದು ನಿಜವು. ಒಂದು ದಿನ ಒಬ್ಬ ಒಕ್ಕಲಿಗನು ಒಂದು ಕೋಳೀ ಗೂಡಿನ ಹತ್ತರ ಕೆಲವು ಇಲಿಗಳನ್ನು ಕಂಡನು. ಆಗ ಅವು ಅಲ್ಲಿ ಏನು ಮಾಡುತ್ತವೆ ನೋಡಬೇಕೆಂ.ದು ಸುಮ್ಮನೇ ಒತ್ತಟ್ಟಿಗೆ ನಿಂತುಕೊಂಡನು. ಅಷ್ಟರಲ್ಲಿ ಒಂದು

ಇಲಿಯು ಒಂದು ತತ್ತಿಯ ಹತ್ತರ ಹೋಳವ್ಮೆಲಿ ಬಿದ್ದು ತನ್ನ ಮೈ ಯಿಂದ ಅದಕ್ಕೆ ಸುತ್ತು ಹಾಕಿತು. ಬಳಿಕ ತನ್ನ ಬಾಲವನ್ನು ಬಾಯೊಳಗೆ ಹಿಡಿದು ಕಾಲುಗಳಿಂದ ಆ ತತ್ತಿಯನ್ನು ಒತ್ತಿ ಹಿಡಕೊಂಡಿತು. ಆ ಮೇಲೆ ಬೇರೆ ಇಲಿಗಳು ಅದರ ಬಳಿಗೆ ಒಂದು ಅದನ್ನು ಹಿಡಿದು, ತತ್ತಿಯೊಡನೆ ಕೋಳೀ ಗೂಡಿನೊಳಗಿಂದ ತಮ್ಮ ಗುದ್ದಿಗೆ ಎಳಕೊಂಡು ಹೋದವು. ಇದನ್ನೆಲ್ಲ ಆವನು ಕಣ್ಣಾರೆ ಕಂಡನು.




## ೧೪ನೇ ಪಾಠ.

### ಕೆಟ್ಟ ಸಂಗತಿಯ ಫಲ.

ಬ್ರಹ್ಮಪುರವೆಂಬ ಅಗ್ರಹಾರದಲ್ಲಿ ಪುಣ್ಯಶೀಲನೆಂಬ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಒಂದು ಆಕಳು ಇತ್ತು. ಅದು ಬಹು ಸಭ್ಯವಾಗಿ ಹೊತ್ತು ಹೊತ್ತಿಗೆ ಹಾಲು ಕೊಡುತ್ತಿತ್ತು. ಅದರಿಂದ

ಮನೆಯವರೆಲ್ಲರು ಬಡವರ ತಕ್ಕ ಆಕಳೆಂದು ಅದರ ಮೇಲೆ ಬಹಳ ಪ್ರೀತಿ ಮಾಡುತ್ತಿದ್ದರು ಅದೇ ಊರೊಳಗೆ ದುರ್ಘಟನೆಂಬ ತಳ ವಾರನದೊಂದು ಆಕಳು ಇರುಳೆಲ್ಲ ತುಡುಗ ಮೇದು ಬೆಳಿಗ್ಗೆ ತಿರಿಗಿ ಮನೆಗೆ ಬರುತ್ತಿತ್ತು. ಒಂದು ದಿನ ಇವೆರಡು ಆಕಳುಗಳು ಅಡವಿ ಯಲ್ಲಿ ಅಕಸ್ಮಾತ್ತಾಗಿ ಕೂಡಿ ಮೇಯುತ್ತಿರುವಾಗ, ತುಡುಗ ಆವು— ನೀನು ಇಷ್ಟು ಯಾಕೆ ಸೊರಗಿದ್ಧೀ? ಎಂದು ಆ ಸಭ್ಯ ಆಕಳನ್ನು ಕೇಳಿತು. ಅದು—ನಮ್ಮ ಒಡೆಯನು ಬಡವನಿದ್ದದರಿಂದ ನನಗೆ ಹೊಟ್ಟೆ ತುಂಬಾ ಮೇವು ದೊರಕುವದಿಲ್ಲ, ಅದರಿಂದ ಇಷ್ಟು ಬಡ ಕನಾಗಿದ್ದೇನೆ ಎಂದು ಹೇಳಿತು. ತುಡುಗ ಆವು—ಹಾಗಾದರೆ ಈ



ಹೊತ್ತು ನೀನು ನನ್ನ ಬಳಿಯಲ್ಲಿ ನಿಂತರೆ, ನಿನಗೆ ಹೊಟ್ಟೆ ತುಂಬ ಮೇವು ದೊರಕುವಂತೆ ನಾನು ಮಾಡುತ್ತೇನೆ ಎಂದು ಹೇಳಿದ್ದರಿಂದ, ಆದರ ಮಾತು ಕೇಳಿ ಆ ಸಭ್ಯ ಆಕಳು ಆ ರಾತ್ರಿ ಮನೆಗೆ ಹೋ ಗದೆ ತುಡುಗ ಆವಿನ ಸಂಗತೀ ಹಿಡಿಯಿತು. ನಸುಗತ್ತಲಾದ ಬಳಿಕ ಅವೆರಡೂ ಆವುಗಳು ಗೌಡರ ಕಡ್ಲೆಯ ಹೊಲದೊಳಗೆ ಹೊಕ್ಕು ಮೇಯುಹತ್ತಿದವು ತುಡುಗ ಆವು ಗಪಗಪ ತಿಂದು ಹೊಲ ಕಾ ಯುವವರ ಸುಳಿವು ಕಂಡ ಕೂಡಲೆ ಜೋಳದ ನಿಲುವು ಬಿದ್ದು ಓಡಿ

ಹೋಯಿತು. ಈ ಸಭ್ಯ ಆವು ಬಹು ದಿವಸಕ್ಕೆ ತನಗೆ ಹೊಟ್ಟೆ ತುಂಬುವ ಹಾಗೆ ಆಹಾರ ದೊರಕಿತೆಂಬ ಸಂತೋಷದಿಂದ ಸಾವ ಕಾಶ ಮೇಯಹತ್ತಿತು. ಆಗ ಹೊಲ ಕಾಯುವವರು ಮೆಲ್ಲಗೆ ಹಿಂದಿಂದೆ ಬಂದು ಇದನ್ನು ಹಿಡಿದು ಬಡಿ ಬಡಿಗೆಯಿಂದ ಬಡಿದು ಚಾವಡಿಗೆ ಒಯ್ದು ಕಟ್ಟಿಹಾಕಿದರು. ಮರುದಿನ ಆ ಹಾರುವನನ್ನು ಕರಿಸಿ,— ನಿನ್ನ ಆಕಳು ದಿನಾಲು ಬಂದು ಗೌಡರ ಕಣ್ಣೆಯ ಹೊಲಾ ಹಾಳು ಮಾಡಿ ಬಿಟ್ಟಿತು. ಇಷ್ಟು ದಿನ ಎಷ್ಟು ಯತ್ನ ಮಾಡಿದರೂ ಶಿಕ್ಕಿದ್ದಿಲ್ಲ; ಸಳ್ಳುವರಿದು ದಾಟಿ ಓಡಿಹೋಗುತ್ತಿತ್ತು. ನಿನ್ನೆ ಹಂಚಿ ಕೆಯಿಂದ ಇದನ್ನು ಹಿಡಿದೆವು. ಹೊಲದೊಳಗೆ ಬಹಳ ಕೇಡು ಮಾಡಿಯದೆ, ಆ ಕಾರಣ ನೀನು ಹತ್ತು ರೂಪಾಯಿ ಕೊಡಬೇ ಕೆಂದು ಹೇಳಿ, ಪೀಡಿಸಿ ಹತ್ತು ರೂಪಾಯಿ ತಕ್ಕೊಂಡು, ಇನ್ನೊಮ್ಮೆ ಬಿಡದಂತೆ ಬಿಗಿ ಮಾಡಿ ಅವನ ಆಕಳು ಕೊಟ್ಟು ಕಳುಹಿಸಿದರು. ಮನೆಗೆ ಬಂದು ಆ ಹಾರುವನು ಹತ್ತು ರೂಪಾಯಿ ಹೋದ ಶಿಟ್ಟಿ ನಿಂದ ಆ ಆಕಳಾ ಹೊಡದು, ಅದರ ಕೊರಳೊಳಗೆ ದೊಡ್ಡದೊಂದು ಗುದ್ದೀ ಕಟ್ಟಿ ತುರಮುಂದೆಗೆ ಬಿಟ್ಟನು. ಅಲ್ಲಿ ಆ ತುಡುಗ ಆವು ಇದನ್ನು ನೋಡಿ, ಇಂಥಾ ಗುದ್ದಿ ಬರುವ ಕಾರಣವೇನೆಂದು ಕೇಳಿ ತು. ಆ ಸಭ್ಯ ಆವು— ಇದು ನಿನ್ನ ಸಂಗತೀ ಫಲವು! ಎಂದು ಹೇಳಿ ಆದನ್ನು ಬಿಟ್ಟು ದೂರ ಹೋಯಿತು. ಕೆಟ್ಟವರ ಸ್ನೇಹ ಮಾಡಿದರೆ ಹೀಗಾಗುವದು.

---

## ೧೫ನೇ ಪಾಠ.

## ಎಮ್ಮೆಯೂ, ಕೋಣವೂ.

ಆಫ್ರಿಕಾ, ಹಿಂದುಸ್ತಾನಗಳೊಳಗಿನ ಉಷ್ಣಪ್ರದೇಶಗಳು ಎಮ್ಮೆ ಕೋಣಗಳ ಮೂಲಸ್ಥಾನವು. ಕ್ರಿಸ್ತಶಕದ ಏಳನೇ ಶತಮಾನದಲ್ಲಿ

ಯಾವನೋ ಒಬ್ಬನು ನಮ್ಮ ದೇಶದಿಂದ ಇಟಲೀ ದೇಶಕ್ಕೆ ಎಮ್ಮೆ ಕೋಣಗಳನ್ನು ಒಯ್ದನೆಂದು ಹೇಳುತ್ತಾರೆ. ಈಗ ಯುರೋಪ ಖಂಡದ ತೆಂಕಣ ಭಾಗದಲ್ಲಿ ಈ ದನಗಳು ಬಹಳ ಆಗಿವೆ. ಆಫ್ರಿಕಾ, ಹಿಂದುಸ್ತಾನ, ಸಿಂಹಳ ದ್ವೀಪಗಳೊಳಗಿನ ಕಾಡುಗಳೊಳಗೆ ಕಾಡಕೋಣಗಳೂ ಕಾಡೆಮ್ಮೆಗಳೂ ಇರುತ್ತವೆ.

ಇವುಗಳ ತಲೆ ದೊಡ್ಡದು, ಕಣ್ಣು ಸಣ್ಣವು, ಮೋರೆ ಹಲಚಿ, ಮೈಬಣ್ಣ ಕಪ್ಪು ಇರುವದರಿಂದ ಇವು ಚಂದ ಕಾಣುವದಿಲ್ಲ. ಇವುಗಳ ಹಣೆ, ಮೆಲಕು, ಮೊಣಕಾಲು, ಬಾಲದ ತುದಿ, ಇಷ್ಟು ಕಡೆಯಲ್ಲಿ ಉರುಟು ಕೂದಲು ಇರುತ್ತವೆ; ಮೈಮೇಲೆ ಬಹಳ ಕೂದಲು ಇರುವದಿಲ್ಲ. ಇವುಗಳಿಗೆ ಚಿಟಿಕೊಳಗು ಇರುತ್ತವೆ.

ಎಮ್ಮೆ ಕೋಣಗಳು ಮೆಲಕಾಡಿಸುತ್ತವೆ. ಇವು ಎತ್ತುಗಳಿಗಿಂತ ಹಟವುಳ್ಳವು. ಕಾಡಕೋಣದ ಮೋರೆ ಬಹು ಭಯಂಕರವು. ಇವು ಚನ್ನಾಗಿ ಈಸುತ್ತವೆ. ಇವು ಅಡ್ಡತಿಡ್ಡ ನಡೆದಾಗ್ಯೂ ತೀವ್ರ ಓಡುತ್ತವೆ. ಇವುಗಳ ಧ್ವನಿ ಕರ್ಕಶವು. ಇವುಗಳಿಗೆ ನೀರು ನೆರಳುಗಳಲ್ಲಿ ಮಲಗುವದೂ ಕೆಸರೊಳಗೆ ಹೊರಳಾಡುವದೂ ಬೇಕು; ಕಾಡೆಮ್ಮೆ ಕಾಡುಕೋಣಗಳು ಬೈಲೊಳಗೆ ಇರುವದಿಲ್ಲ, ಗಿಡದ ಗುಂಪಿನೊಳಗೂ ಕೆಸರುಳ್ಳ ಕಾಡುಗಳೊಳಗೂ ಇರುತ್ತವೆ.

ನಾಲ್ಕು ವರ್ಷಕ್ಕೆ ಎಮ್ಮೆಗಳು ಕಟ್ಟುತ್ತವೆ; ಕಟ್ಟಿದ ಹತ್ತು ತಿಂಗಳಿಗೆ ಈಯುವವು. ಹನ್ನೆರಡು ವರ್ಷವಾದ ಮೇಲೆ ಎಮ್ಮೆಗಳು ಗಬ್ಬಾಗುವದಿಲ್ಲ. ಇವು ಹದಿನೈದು ವರ್ಷ ಬಾಳುತ್ತವೆ.

ಎಮ್ಮೆಯ ಹಾಲು ಆಕಳ ಹಾಲಿನಷ್ಟು ಆರೋಗ್ಯವಲ್ಲ; ಆದರೆ ಎಮ್ಮೆಯ ಹಾಲಿಗೆ ಬೆಣ್ಣೆ ಬಹಳ.

## ೧೬ನೇ ಪಾಠ.

### ಜಾಣ ಹುಡುಗ.

ಒಬ್ಬ ಗೃಹಸ್ಥನಿಗೆ ಒಬ್ಬನೇ ಪರದೇಶಿ ಮಗನಿದ್ದನು. ಆತನು ಆ ಮಗನನ್ನು ಬಹಳ ಪ್ರೀತಿಯಿಂದ ಜೋಪಾನ ಮಾಡುತ್ತಿದ್ದನು. ಆ ಮಗನು ದೊಡ್ಡವನಾದ ಬಳಿಕ ಒಂದು ದಿನ ಜಗಳಾಡಿ, ತನ್ನ ಮುಪ್ಪಿನ ತಂದೆಯನ್ನು ಮನೆ ಬಿಡಿಸಿ ಹೊರಗೆ ಹಾಕಿದನು. ಆಗ ಆ ಮುದುಕನು ತನ್ನ ಮೊಮ್ಮಗನಿಗೆ—ತಮ್ಮಾ, ಹೊದ್ದುಕೊಳ್ಳುವ ನನ್ನ ಹರಕ ಧೋತರಾ ತಂದು ಕೊಡು! ಮುಂಜಾನೆ ಮನೆ ಮನೆ ಭಿಕ್ಷೆ ಬೇಡಲಿಕ್ಕೆ ಹೋಗುವಾಗ ನನಗೆ ಚಳಿ ಹತ್ತುತ್ತದೆ ಅಂದನು. ಆ ಮಾತು ಕೇಳಿದ ಕೂಡಲೆ ಆ ಕೂಸಿಗೆ ಕಣ್ತುಂಬಾ ನೀರು ಬಂದವು. ಆದರೂ ಅದು ತನ್ನ ಅಜ್ಜನ ಅಪ್ಪಣೆಯ ಮೇರೆಗೆ ಧೋತರ ತರಹೋಯಿತು. ತಕ್ಕೊಂಡು ತಿರಿಗಿ ಬರುವಾಗ ಆ ಹುಡುಗನು ತನ್ನ ತಂದೆಯ ಬಳಿಗೆ ಹೋಗಿ—ಅಪ್ಪಾ, ಈ ಹರಕ ಧೋತರಾ ಅಜ್ಜ ಹೊದ್ದುಕೊಳ್ಳಲಿಕ್ಕೆ ಬೇಡುತ್ತಾನೆ. ಆದರೆ ಇದನ್ನು ಸವನಾಗಿ ಹರಿದು ಎರಡು ತುಂಡು ಮಾಡಿ ಒಂದು ಅಜ್ಜನಿಗೆ ಕೊಡುತ್ತೇನೆ; ಒಂದು ನನ್ನ ಹತ್ತರ ಇಟ್ಟುಕೊಳ್ಳುತ್ತೇನೆ. ಯಾಕೆಂದರೆ ಮುಂದೆ ನಾನು ದೊಡ್ಡವನಾದ ಬಳಿಕ ನಿನ್ನನ್ನು ಮನೆ ಬಿಡಿಸಿ ಹೊರಗೆ ಹಾಕಿದಾಗ ನಿನಗೆ ಬೇಕಾದೀತು ಅಂದನು. ಈ ಮಾತು ಕೇಳಿ ಅವನು ನಾಚಿಕೊಂಡು ತಂದೆಯ ಬಳಿಗೆ ಹೋಗಿ, ಆತನ ಕಾಲುಬಿದ್ದು ಅವನನ್ನು ಮನೆಗೆ ಕರಕೊಂಡು ಬಂದು ಚನ್ನಾಗಿ ಕಾಪಾಡಿದನು.

---

## ೧೭ನೇ ಪಾಠ.

### ನಾನು ಯಾರು, ನನ್ನ ಹೆಸರೇನು?

ಮಗನೇ, ನಾನು ಯಾರು, ನನ್ನ ಹೆಸರೇನು ಬಲ್ಲಿಯಾ? ನಾನು ಮೂಡಣ ದಿಕ್ಕಿನಿಂದ ಬರುತ್ತೇನೆ; ನಾನು ಬಂದ ಕೂಡಲೆ ಬೆಳಗಾ

ಗುತ್ತದೆ. ನೀನು ಏಳುವ ಹೊತ್ತಿಗೆ ನಾನು ನನ್ನ ಹೊಂಬಣ್ಣದ ಕೈಗಳನ್ನು ಬೆಳಕಿಂಡಿಯೊಳಗಿಂದ ಒಳಗೆ ಚಾಚಿ, ದಿನಾಲು ನಿನ್ನನ್ನು ಎಬ್ಬಿಸುತ್ತೇನೆ. ನೀನು ಹಾಸಿಗೆ ಬಿಟ್ಟು ಎದ್ದು ಜಳಕ ಮಾಡಿ ಪುಸ್ತಕ ಓದಿ ಶಾಲೆಗೆ ಹೋಗಬೇಕೆಂಬುವದರ ಸಲುವಾಗಿ ನಾನು ಬರುತ್ತೇನೆ.



ನಾನು ಬಹು ತೀವ್ರ ನಡೆಯುವವನು. ಒಂದೇ ದಿವಸದೊಳಗೆ ಯಾವತ್ತು ಆಕಾಶವನ್ನು ತಿರುಗಿ ಬರುತ್ತೇನೆ. ನನಗೆ ದಣುವೇ ಇಲ್ಲ; ನಾನು ಎಂದೂ ನಿಲ್ಲುವದಿಲ್ಲ. ನನ್ನ ತಲೆಯ ಮೇಲೆ ಹೊ

ಳೆಯುವ ಹೊನ್ನಿನ ಕಿರೀಟವುಂಟು. ಅದರ ಬೆಳಕು ಎಲ್ಲಾ ಕಡೆ ಯಲ್ಲಿಯೂ ಬೀಳುತ್ತದೆ. ಗಿಡ, ಮನೆ, ನೀರು ಮುಂತಾದ ಎಲ್ಲ ಒಡವೆಗಳ ಮೇಲೆ ನಾನು ಪ್ರಕಾಶವನ್ನು ಹರಹುತ್ತೇನೆ. ನನ್ನ ಬೆಳಕು ಬಿದ್ದ ಒಡವೆಗಳೆಲ್ಲ ಚಂದ ಕಾಣಿಸುತ್ತವೆ.

ಆಕಾಶದಲ್ಲಿ ನಾನು ಬಹು ದೂರ ಇದ್ದೇನೆ. ನಾನು ಇದ್ದ ಎಡೆಯನ್ನು ಬಿಟ್ಟು ಹತ್ತರ ಬಂದರೆ, ನೀನು ಹುರಪಳಿಸಿ ಸತ್ತು ಹೋಗುವಿ; ಎಲ್ಲ ಮನೆಮಾರುಗಳೂ ಗಿಡಗಂಟೆಗಳೂ ಸುಟ್ಟು ಬೂದಿಯಾಗುವವು. ಒಮ್ಮೊಮ್ಮೆ ಹೊಳೆಯುವ ಹೊನ್ನಿನ ಕಿರೀಟ ತೆಗೆದಿಟ್ಟು, ಮೋಡವೆಂಬ ಶೆಲ್ಲೆಯನ್ನು ತಲೆಗೆ ಸುತ್ತಿಕೊಳ್ಳುತ್ತೇನೆ; ಆಗ ಮಾತ್ರ ನೀನು ನನ್ನನ್ನು ನೋಡಬಹುದು. ಆದರೆ ನಾನು ತಲೆಯ ಮೇಲೆ ಕಿರೀಟ ಹಾಕಿಕೊಂಡು ಮಧ್ಯಾಹ್ನದಲ್ಲಿ ಯಾವತ್ತು ಕಿರಣಗಳಿಂದ ಪ್ರಕಾಶಿಸುವಾಗ ನನ್ನನ್ನು ನೀನು ನೋಡಲಾರಿ. ಇಂಥಾ ಹೊತ್ತಿನಲ್ಲಿ ಹದ್ದು ಮಾತ್ರ ನನ್ನನ್ನು ನೋಡುತ್ತದೆ. ಯಾವಾಗಲೂ ನನ್ನನ್ನು ನೋಡುವ ತ್ರಾಣೆಯು ಹದ್ದಿನಲ್ಲಿ ಉಂಟು.

ಮುಂಜಾವಿನಲ್ಲಿ ನಾನು ಬಂದ ಕೂಡಲೆ ಚಂಡೋಲ ಪಕ್ಷಿಗಳು ನನ್ನೆದುರಿಗೆ ಬರಬೇಕೆಂಬ ಹವಣಿಕೆಯಿಂದ ಆಕಾಶದಲ್ಲಿ ಹಾರಿ ಇಂಪಾದ ರಾಗ ಮಾಡುತ್ತವೆ. ಕೋಳಿ ಕೂಗಿ ನಾನು ಬರುವದನ್ನು ಜನರಿಗೆ ಸೂಚಿಸುತ್ತದೆ. ಗೂಗೆಗಳೂ ಕಣ್ಕಪ್ಪಡೆಗಳೂ ನನಗೆ ಹೆದರಿ ಗಿಡಗಳ ಪೊಳ್ಳುಗಳಲ್ಲಿಯೂ, ಹಾಳು ಗೋಡೆಗಳ ಬಿರುಕುಗೆಳಲ್ಲಿಯೂ ಅಡಗುತ್ತವೆ. ಸಿಂಹಗಳೂ ಹುಲಿಗಳೂ ನನ್ನನ್ನು ಕಂಡು ತಮ್ಮ ತಮ್ಮ ಗವಿಗಳೊಳಗೆ ಹಗಲೆಲ್ಲ ಮಲಗಿಕೊಳ್ಳುತ್ತವೆ.

ನಾನು ಹಿಂದುಸ್ತಾನದ ಮೇಲೆಯೂ, ಇಂಗ್ಲಾಂಡದ ಮೇಲೆಯೂ ಯಾವತ್ತು ಭೂಮಂಡಲದ ಮೇಲೆಯೂ ಪ್ರಕಾಶಿಸುತ್ತೇನೆ. ಭೂಮಿಯ ಮೇಲಿನ ಎಲ್ಲ ಸುಂದರವಾದಂಥ, ತೇಜವುಳ್ಳಂಥ ಒಡವೆಗಳಿಗಿಂತ ಮೇಲಾದ ಸುಂದರನೂ ತೇಜವುಳ್ಳವನೂ ನಾನೇ. ಆದರೆ ಮಗನೇ, ನಾನು ಯಾರು, ನನ್ನ ಹೆಸರೇನು ಹೇಳು.

## ೧೮ ನೇ ಪಾಠ.

### ಶೆಟ್ಟಿಯ ಮಗನೂ ವೈದ್ಯನೂ.

ಹುಬ್ಬಳ್ಳಿಯಲ್ಲಿ ಅಮರಶೆಟ್ಟಿ ಎಂಬ ಒಬ್ಬ ವರ್ತಕನಿದ್ದನು. ಅವನಿಗೆ ಎಷ್ಟೋ ದಿವಸ ಮಕ್ಕಳಿದ್ದಿಲ್ಲ. ಕಡೆಗೆ ಮುಪ್ಪಿನ ಕಾಲಕ್ಕೆ ಒಬ್ಬ ಮಗನು ಹುಟ್ಟಿದನು. ಅವನಿಗೆ ಬಸೆಟ್ಟಿ ಎಂದು ಹೆಸರಿಟ್ಟರು. ಅವನು ನಾಲ್ಕು ವರ್ಷದವನಾದಾಗ ಆತನ ತಂದೆ ತೀರಿದನು. ಮುಂದೆ ಆ ಹುಡುಗನನ್ನು ತಾಯಿ ಜೋಪಾನ ಮಾಡಿದಳು. ಬಸೆಟ್ಟಿ ಇಪ್ಪತ್ತು ವರ್ಷದವನಾದಾಗ ಹುಬ್ಬಳ್ಳಿಗೆ ಮೈಸೂರಿಂದ ಒಬ್ಬ ಪ್ರಸಿದ್ಧ ವೈದ್ಯ ಬಂದನು. ಆಗ ಬಸೆಟ್ಟೀ ಮೈಯಲ್ಲಿ ಸ್ವಸ್ಥವಿದ್ದಿಲ್ಲ. ಅವನು ಆ ವೈದ್ಯನ ಹತ್ತರ ಹೋಗಿ ಕೈಶೋರಿಸಿ, ಮೈಯಲ್ಲಿ ಶಕ್ತಿ ಬರುವ ಔಷಧವೇನಾದರು ಕೊಡಿರೆಂದು ಕೇಳಿದನು. ಅದಕ್ಕೆ ವೈದ್ಯನು ಕೆಲವು ಔಷಧದ ಚೀಟುಗಳನ್ನು ಕೊಟ್ಟು, ಇವುಗಳನ್ನು ದಿನಾಲು ಸಂಜೆಗೊಂದು ಮುಂಜಾನೆ ಒಂದು ಸಕ್ಕರೆ ತುಪ್ಪ ಅನುಪಾನದೊಳಗೆ ತಕ್ಕೊಂಡರೆ, ತೀವ್ರ ನೆಟ್ಟಗಾಗಿ ಮೈಯಲ್ಲಿ ಶಕ್ತಿ ಬರುವದೆಂದು ಹೇಳಿದನು. ಆ ಚೀಟುಗಳನ್ನು ತಕ್ಕೊಂಡು ಮನೆಗೆ ಹೋಗಿ ಬಸೆಟ್ಟಿ ಸರ್ತಿಗೆ ಒಂದು ಚೀಟು ತಕ್ಕೊಳ್ಳುವದೇ ಎರಡು ತಕ್ಕೊಂಡರೆ ವೈದ್ಯ ಹೇಳಿದ್ದಕ್ಕಿಂತ ತೀವ್ರ ಶಕ್ತಿ ಬಂದೀತೆಂದು ಆಲೋಚಿಸಿ, ವೈದ್ಯ ಕೊಟ್ಟ ನಾಲ್ಕು ದಿನದ ಚೀಟುಗಳನ್ನು ಎರಡೇ ದಿವಸಗಳಲ್ಲಿ ತೀರಿಸಿಬಿಟ್ಟನು. ಆಗ ಆ ಔಷಧದ ಕಾವಿಗೆ ಪ್ರಕೃತಿ ಮತ್ತಿಷ್ಟು ಕೆಟ್ಟು, ಈಗ ಸಾಯುತ್ತಾನೋ ಇನ್ನೊಂದು ಘಳಿಗೆಗೆ ಸಾಯುತ್ತಾನೋ ಅನ್ನುವ ಹಾಗೆ ಆದನು. ಅವನ ತಾಯಿ ಮಗ ಸಾಯುತ್ತಾನೆಂದು ಎದೆ ಎದೆ ಬಡಕೊಳ್ಳಹತ್ತಿದಳು; ಮನೆಯವರೂ ನೆರೆಹೊರೆಯವರೂ ಆ ವೈದ್ಯನಿಗೆ ಬಾಯಿಗೆ ಬಂದ ಹಾಗೆ ಅಂದರು. ಪಾಪ ಅವನೇನು ಮಾಡ್ಯಾನು? ಅವನದೇನು ತಪ್ಪು? ಆತ ಹೇಳಿದಂತೆ ತಕ್ಕೊಳ್ಳದೆ ಮನಸ್ಸಿಗೆ ಬಂದ ಹಾಗೆ ಮಾಡಿದರೆ, ಪ್ರಕೃತಿ ಕೆಡದೇನು ಮಾಡೀತು! ಮುಂದೆ ವೈದ್ಯನು ಬಂದು ನಾಲ್ಕೆಂಟು ದಿನ

ಔಷಧ ಕೊಟ್ಟು ಉಂಟಾದ ಬೇನೇ ಕಡಿಮೆ ಮಾಡಿದನು. ಬಸೆಟ್ಟಿ ಮೊದಲಿದ್ದಂತೆ ಆಗ ಬೇಕಾದರೆ, ನಾಲ್ಕು ತಿಂಗಳು ಬೇಕಾಯಿತು.

ತಮಗೆ ಗೊತ್ತಿಲ್ಲದ ಮಾತಿನಲ್ಲಿ ಬಲ್ಲವರು ಹೇಳಿದಂತೆ ಕೇಳ ಬೇಕಲ್ಲದೆ, ಸುಮ್ಮಸುಮ್ಮನೆ ತಮ್ಮ ಜಾಣತನ ಮೆರಿಸ ಹೋದರೆ, ಬಹಳ ಅನರ್ಥವಾಗುವದು.

---

## ೧೮ನೇ ಪಾಠ.

### ಯಾಲಕ್ಕಿ.

ಯಾಲಕ್ಕಿಯ ಗಿಡಗಳು ಹಿಂದುಸ್ಥಾನದಲ್ಲಿಯೂ ಅದರ ಸುತ್ತು ಮುತ್ತಿನ ಶೆಕೆಯುಳ್ಳ ನಡುಗಡ್ಡೆಗಳಲ್ಲಿಯೂ ಹುಟ್ಟುತ್ತವೆ. ಇವು ತಂಪು ನಾಡುಗಳಲ್ಲಿ ಹುಟ್ಟುವದಿಲ್ಲ. ತಿರುವಂಕೋಡು (ತ್ರಾವಣ ಕೋರ) ಮಲಯಾಳ, ಮುಂತಾದ ಪಶ್ಚಿಮ ಘಟ್ಟದ ಸಮೀಪದ ನಾಡುಗಳಲ್ಲಿ ಯಾಲಕ್ಕಿಯ ಗಿಡಗಳು ಬಹಳ. ಅಲ್ಲಿ ಅವು ತಮ್ಮಿಂದ ತಾವೇ ಬೆಳೆಯುತ್ತವೆ. ಕೆಲಕೆಲವು ಸ್ಥಳಗಳಲ್ಲಿ ಜನರು ಇವುಗಳ ಸಸಿಗಳನ್ನು ಹಚ್ಚುತ್ತಾರೆ. ಯಾಲಕ್ಕಿಯ ಗಿಡಗಳು ಅರಿಶಿನದ ಗಿಡದ ಹಾಗೆ ಇರುತ್ತವೆ. ಅದರ ಗೊನೆಗಳು ಗಿಡದ ಬೇರಿಗೆ ಬಿಡುತ್ತವೆ. ಮಳೆಗಾಲದಲ್ಲಿ ನೆಲ ಪೊಳ್ಳು ಮಾಡಿ ಯಾಲಕ್ಕೀ ಬೀಜಾ ಬಿತ್ತು ತ್ತಾರೆ. ಮುಂದೆ ಆಶ್ವಿನ ಕಾರ್ತಿಕಗಳಲ್ಲಿ ಕಾಯಿ ಆಗುತ್ತವೆ. ಆ ಕಾಯಿ ಕೊಯ್ದು ಬಳಿಕ ಅವುಗಳನ್ನು ಬಿಸಲೊಳಗೆ ಒಣಗಿಸುತ್ತಾರೆ. ಆ ಮೇಲೆ ನಗಗಳನ್ನು ಕಟ್ಟಿ ಮಾರಾಟಕ್ಕೆ ಕಳಿಸುವರು ಮಲ ಯಾಳ ಸೀಮೆಯಿಂದ ಪ್ರತಿ ವರ್ಷ ನೂರಾರು ಖಂಡುಗ ಯಾಲಕ್ಕೀ ಕಾಯಿ ಇಂಗ್ಲಾಂಡ ಮುಂತಾದ ನಾಡುಗಳಿಗೆ ಹೋಗುತ್ತವೆ.

ಯಾಲಕ್ಕೀ ಕಾಳು ಕಪ್ಪು; ಕಾಯಿ ಹಸುರು; ಅವುಗಳನ್ನು ನೀರೊಳಗೆ ಸಬಕಾರ ಹಚ್ಚಿ ತೊಳೆದು ಒಣಗಿಸಿದರೆ, ಅವು ಉಬ್ಬಿ ಬೆಳ್ಳಗಾಗುತ್ತವೆ. ಶಿರ್ಶಿ, ಬಗ್ಗುಂಜಿ, ಕೊಡಗಗಳಿಂದ ಯಾಲಕ್ಕೀ ಕಾಯಿಗಳನ್ನು ಹಾವೇರಿಗೆ ತರುತ್ತಾರೆ. ಆ ಊರೊಳಗೆ ಒಂದು


ಬಾವಿಯುಂಟು, ಅದರೊಳಗೆ ಆ ಕಾಯಿ ತೊಳೆಯುವದರಿಂದ ಅವು ಉಬ್ಬಿ ಬೆಳ್ಳಗಾಗುತ್ತವೆ. ಆ ಮೇಲೆ ನಗಾ ಕಟ್ಟಿ ಹೈದರಾಬಾದದ ಕಡೆಗೆ ಕಳಿಸುತ್ತಾರೆ.

ಯಾಲಕ್ಕಿಗಳು ಸುಗಂಧವಿರುವದರಿಂದ ಅವುಗಳನ್ನು ತಿಂಬುವ ಪದಾರ್ಥಗಳಲ್ಲಿ ಹಾಕುತ್ತಾರೆ. ಯಾಲಕ್ಕೀ ತೋಟದಲ್ಲಿ ಹಾವು ಬಹಳ.

---

## ೨೦ನೇ ಪಾಠ.

### ಬೆಕ್ಕು.



ಬೆಕ್ಕುಗಳು ಎಲ್ಲ ನಾಡುಗಳಲ್ಲಿ ಉಂಟು. ಕಾಡಮನುಷ್ಯರ ಹೊರ್ತು ಎಲ್ಲ ಜನರು ಬೆಕ್ಕು ಸಾಕುತ್ತಾರೆ. ಅಡವೀ ಬೆಕ್ಕು ಕಾಡುಗಳಲ್ಲಿ, ಮಟಬೆಕ್ಕು ಹಾಳದೇಗುಲಗಳಲ್ಲಿ ಇರುತ್ತವೆ.

ಬೆಕ್ಕಿನ ತಲೆ ಬಟ್ಟಗೆ, ಕಿವಿ ನೆಟ್ಟಗೆ, ಬಾಲ ಉದ್ದ, ಮೈ ಹಬ್ಬು, ಮೈಮೇಲೆ ಮೆತ್ತನ್ನ ತುಪ್ಪಳು ಇರುವವು. ಬೆಕ್ಕುಗಳು ಕಣ್ಣಿಗೆ ಚಂದ ಕಾಣಿಸುತ್ತವೆ. ಇವುಗಳ ಕಾಲಿಗೆ ಐದೈದು ಉಗುರು ಇರುವವು. ಅವುಗಳಿಗೆ ಪಂಜರವೆನ್ನುವರು. ಅವುಗಳನ್ನು ಅವು ಬೇಕಾದಾಗ ಹೊರಗೆ ತೆರೆಯುವವು. ಇವುಗಳ ಅಂಗಾಲು ಬಹು ಮಿದುವು, ಮೇಲುದುಟಿಯ ಮೇಲೆ ಮಿಾಶಿಯ ಹಾಗೆ ಉದ್ದನ್ನ ಬಿರುಸು ಕೂದಲು ಇರುತ್ತವೆ. ಬೆಕ್ಕಿನ ಕಣ್ಣು ದೊಡ್ಡವು; ಕತ್ತಲೊಳಗೆ ವೈಡೂರ್ಯರತ್ನದ ಹಾಗೆ ಹೊಳೆಯುತ್ತವೆ. ಬೆಕ್ಕಿನ ಕಣ್ಣೊಳಗಿನ

ಗೊಂಬೆಗಳು ಹಗಲು ಸಣ್ಣ ಗೆರೆಗಳಂತೆ, ಇರುಳು ದೊಡ್ಡವಾಗಿ ಬಟುವಾಗಿ ತೋರುತ್ತವೆ. ಬೆಕ್ಕಿನ ಮೋರೆಯ ಮೇಲೆ ತುಡುಗಿನ ಕಳೆ ಇರುವದು. ತುಡುಗಿನಿಂದ ಹಾಲು ಕುಡಿಯುವಾಗ ಮಂದಿಗೆ ಕಾಣಬಾರದೆಂಬ ಬುದ್ಧಿಯಿಂದ ಅವು ಕಣ್ಣು ಮುಚ್ಚಿಕೊಂಡು ಕುಡಿಯುತ್ತವೆ. ತರತರದ ಬಣ್ಣದ ಬೆಕ್ಕುಗಳು ಇರುತ್ತವೆ. ಬಹು ತರವಾಗಿ ಬೆಕ್ಕಿನ ಮೈಮೇಲೆ ಉದ್ದನ್ನ ಪಟ್ಟೆಗಳೂ ಚಿಕ್ಕಿಗಳೂ ಇರುವವು. ಇರಾಣ ದೇಶದ ಬೆಕ್ಕುಗಳ ಮೈಮೇಲೆ ಉದ್ದನ್ನ ಕೂದಲು ಇರುತ್ತವೆ.

ಅಡವೀ ಬೆಕ್ಕು ಕಾಡಿನಲ್ಲಿ ಕೊರಕಲುಗಳಲ್ಲಾಗಲಿ ಮರದ ಪೊಳ್ಳಿನೊಳಗಾಗಲಿ ಅಡಗಿಕೊಂಡು ಇರುತ್ತವೆ. ಇವು ಅಡವಿ ಯೊಳಗಿನ ಹಕ್ಕಿ, ಇಲಿ, ಇಣಚಿ, ಮೊಲ ಮುಂತಾದ ಸಣ್ಣ ಸಣ್ಣ ಪ್ರಾಣಿಗಳನ್ನು ಕೊಂದು ತಿನ್ನುತ್ತವೆ. ಇವು ಊರ ಹತ್ತರ ಇದ್ದರೆ, ಕೋಳಿಗಳನ್ನು ಕೊಂದು ತಿನ್ನುವವು. ಇವು ತಮ್ಮ ಹೊಟ್ಟೆಯ ಸಲುವಾಗಿ ಇರುಳು ಹೊರಬೀಳುತ್ತವೆ. ಬೇಟೆ ಕಣ್ಣಿಗೆ ಬಿದ್ದ ಕೂಡಲೆ ಹಿಡಿದು ಕೊಲ್ಲುತ್ತವೆ.

ಸಾಕಿದ ಬೆಕ್ಕು ಸಹ ಇರುಳು ಹೊರಬಿದ್ದು, ಇಲಿಗಳ ಗುದ್ದಿನ ಬಳಿಯಲ್ಲಿ ಜಪ್ಪಿಸಿ ಕಾದುಕೊಂಡು ಕುಳಿತುಕೊಳ್ಳುತ್ತವೆ. ಗಿಳಿ, ಗುಬ್ಬಿ, ಪಾರಿವಾಳ ಮುಂತಾದ ಪಕ್ಷಿಗಳನ್ನು ಹಿಡಿಯಲಿಕ್ಕೆ ಹೊಂಚು ಹಾಕುತ್ತವೆ; ಅವು ತಮ್ಮ ಅಳವಿನೊಳಗೆ ಬಂದ ಕೂಡಲೆ ಹಾರಿ ಅವುಗಳನ್ನು ಗಪ್ಪನೆ ಹಿಡಿಯುವವು. ಬೆಕ್ಕು ಎಷ್ಟು ಮೇಲಿಂದ ಬಿದ್ದರೂ ನೆಲಕ್ಕೆ ಕಾಲು ಊರಿ ಸಾವರಿಸಿಕೊಳ್ಳುತ್ತವೆ. ಅವುಗಳಿಗೆ ಹೊಲಸುತನ ಸೇರುವದಿಲ್ಲ; ಸುಮ್ಮನೆ ಕುಳಿತಾಗ ತಮ್ಮ ಮೈಯನ್ನು ನೆಕ್ಕಿ ನುಣುಪು ಮಾಡಿಕೊಳ್ಳುವವು. ನಾಲಿಗೆಗೆ ನಿಲಕದ ಹಾಗಿದ್ದರೆ, ಅಂಗಾಲನ್ನು ನಾಲಿಗೆಯಿಂದ ನೆಕ್ಕಿ, ಅದರಿಂದ ಮೈಯನ್ನು ಹಸನು ಮಾಡಿಕೊಳ್ಳುತ್ತವೆ. ಬೆಚ್ಚಗಿರುವ ಮೆತ್ತನ್ನ ಸ್ಥಳ ನೋಡಿ ಮಲಗಿ ಕೊಳ್ಳುತ್ತವೆ.

## ೨೧ನೇ ಪಾಠ.

### ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುವ ಬಗ್ಗೆ.

ಹೆಣ್ಣುಮಕ್ಕಳು ಚಿಕ್ಕಂದಿನಲ್ಲಿ ಸಾಲೆಗೆ ಹೋಗಿ ವಿದ್ಯೆ ಕಲಿಯುತಕ್ಕದ್ದು. ಅದರಿಂದ ಅವರಿಗೆ ಮುಂದೆ ಬಹಳ ಹಿತವಾಗುವದು. ಈಗ ಈ ದೇಶದಲ್ಲಿ ಹೆಣ್ಣುಮಕ್ಕಳು ಬಹುತರವಾಗಿ ಕಾಡುಜನರಂತೆ ಬುದ್ಧಿಯಿಲ್ಲದವರಾಗಿದ್ದಾರೆ. ವಿದ್ಯೆ ಕಲಿತರೆ ಅವರ ಬುದ್ಧಿ ಹೆಚ್ಚಾಗುವದು; ಅವರು ನೀತಿಯಿಂದ ನಡೆಯುವರು; ದೊಡ್ಡವರಾದ ಬಳಿಕ ಅವರು ತಮ್ಮ ಗಂಡಂದಿರಿಗೆ ಯಾವಾಗಲು ಕೈಲಾದ ಮಟ್ಟಿಗೆ ನೆರವಾಗುವರು; ಮನೆಯ ಕೆಲಸಗಳನ್ನೆಲ್ಲ ತಾವೇ ಸಾಗಿಸುವರು; ತಮ್ಮ ಮಕ್ಕಳಿಗೆ ಯಾವಾಗಲು ವಿದ್ಯಾಬುದ್ಧಿಗಳನ್ನು ಕಲಿಸಿ ಒಳ್ಳೇ ಮಾರ್ಗಕ್ಕೆ ಹಚ್ಚುವರು; ಅವರನ್ನು ಕೆಟ್ಟ ಹುಡುಗರ ಸಂಗಡ ಆಡಗೊಡರು. ಹೊಲಸು ಅರಿವೆಗಳನ್ನು ಹಾಕದೆ ಸ್ವಚ್ಛವಾದವುಗಳನ್ನು ಉಡಿಸಿ ತೊಡಿಸಿ, ತಕ್ಕ ಹೊತ್ತಿಗೆ ಹಿತವಾದ ಅನ್ನವನ್ನು ಉಣ್ಣಿಸಿ, ರೋಗ ಬಾರದ ಹಾಗೆ ಮಕ್ಕಳನ್ನು ಕಾಪಾಡುವರು; ಒಂದು ವೇಳೆ ಬೇನೆ ಬಂದರೆ, ಅವರು ತಮ್ಮ ಬುದ್ಧಿಯ ಬಲದಿಂದ ತಕ್ಕ ಔಷಧವನ್ನು ಕೊಡಿಸಿ ಚನ್ನಾಗಿ ಪಥ್ಯ ಮಾಡಿಸಿ, ಬೇಗ ಅವರ ಬೇನೆಯನ್ನು ಕಳೆಯುವರು. ವಿದ್ಯೆ ಕಲಿತ ಹೆಂಗಸು ತನ್ನ ಗಂಡನನ್ನೂ ಮಕ್ಕಳನ್ನೂ ಯಾವಾಗಲೂ ಸಂತೋಷ ಪಡಿಸುವಳು. ಎಷ್ಟು ಕೆಲಸಗಳಿದ್ದರೂ ಬಿಟ್ಟು, ಮಕ್ಕಳನ್ನು ಅಳಿಸದೆ, ಜಾಣತನದಿಂದಲೂ ಜಾಗ್ರತೆಯಿಂದಲೂ ಪ್ರೀತಿಯಿಂದಲೂ ಜೋಪಾನ ಮಾಡುವಳು. ಈ ಮೇರೆಗೆ ನಡೆಯುವದರಿಂದ ಕುಟುಂಬದವರೆಲ್ಲರು ಗುಣವಂತರಾಗಿ ಬಹು ದಿವಸ ಬಾಳುವರು. ಹೀಗಾದ ಬಳಿಕ ಅವರ ಸುಖವೂ ಐಶ್ವರ್ಯವೂ ಕೀರ್ತಿಯೂ ಹೆಚ್ಚಾಗುವವು. ವಿದ್ಯೆ ಕಲಿಯದ ಹುಡುಗರು ದನಗಳ ಹಾಗೆ ಇರುತ್ತಾರೆ. ವಿದ್ಯೆ ಕಲಿಯದಿದ್ದರೆ,

ಬುದ್ಧಿ ಬರುವದಿಲ್ಲ; ಬುದ್ಧಿ ಇಲ್ಲದಿದ್ದರೆ, ನೀತಿ ಇರುವದಿಲ್ಲ; ನೀತಿ ಇಲ್ಲದಿದ್ದರೆ, ಅನೇಕ ದುಃಖಗಳಿಗೆ ಒಳಗಾಗುತ್ತಾರೆ.

ವಿಲಾಯತಿಯವರು ತಮ್ಮ ಹೆಣ್ಣುಮಕ್ಕಳಿಗೂ ಗಂಡುಮಕ್ಕಳಿಗೂ ಚಿಕ್ಕಂದಿನಲ್ಲಿ ಚನ್ನಾಗಿ ವಿದ್ಯೆ ಕಲಿಸುತ್ತಾರೆ. ಆದದರಿಂದ ಅವರು ಸುಖವನ್ನು ಅನುಭೋಗಿಸುತ್ತಾರೆ. ಯಾವ ದೇಶದಲ್ಲಿ ಜನರು ವಿದ್ಯೆ ಕಲಿಯುವದಿಲ್ಲವೋ ಆ ದೇಶದಲ್ಲಿ ಸೌಖ್ಯವಿರುವದಿಲ್ಲ.

ಸಾಲೆಗೆ ಹೋಗುವದಕ್ಕೆ ಅಡ್ಡಿ ಇದ್ದರೆ, ಹೆಣ್ಣುಮಕ್ಕಳಿಗೆ ಮನೆಯಲ್ಲಿ ಕಲಿಸತಕ್ಕದ್ದು. ಎಲ್ಲ ಕುಲದವರು ತಮ್ಮ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕು. ತಾಯಿತಂದೆಗಳು ವಿದ್ಯೆ ಕಲಿಸದಿದ್ದರೆ, ಅವರೇ ಸುಖದ ದಾರಿಯನ್ನು ಬಿಡಿಸಿ ತಮ್ಮ ಮಕ್ಕಳಿಗೆ ದುಃಖದ ದಾರಿಯನ್ನು ತೋರಿಸಿಕೊಟ್ಟ ಹಾಗೆ ಆಗುವದು.

ನಮ್ಮ ದೇಶದೊಳಗೆ ಪೂರ್ವದಲ್ಲಿ ಅರಸರೂ ಋಷಿಗಳೂ ದೊಡ್ಡ ದೊಡ್ಡ ಮನೆತನದವರೂ ತಮ್ಮ ತಮ್ಮ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುತ್ತಿದ್ದರೆಂಬದಾಗಿ ಇತಿಹಾಸದಿಂದ ತಿಳಿಯಬರುತ್ತದೆ. ಈ ನಡತೆಯು ಮುಸಲ್ಮಾನರು ನಮ್ಮ ದೇಶವನ್ನು ಆಳಲಾರಂಭಿಸಿದ ಬಳಿಕ ಕುಂದುತ್ತ ಬಂತು. ಆದರೆ ಈಗ ಊರೂರಿಗೆ ಸಾಲೆಗಳಾದದರಿಂದ ವಿದ್ಯೆ ಕಲಿಯುವದು ಬಹಳ ಸುಲಭವಾಗಿದೆ. ಆದಕಾರಣ ಎಲ್ಲರು ತಮ್ಮ ಹೆಣ್ಣುಮಕ್ಕಳಿಗೆ ತಕ್ಕ ಮಟ್ಟಿಗೆ ವಿದ್ಯೆ ಕಲಿಸಬೇಕು.

---

## ೨೨ನೇ ಪಾಠ.

### ಜಾಣತನದ ಉತ್ತರ.

ದೇವದತ್ತನೆಂಬವನೊಬ್ಬನು ಕಾಶೀ ಕಡೆಯಿಂದ ಬಂದು ಶ್ರೀರಂಗಪಟ್ಟಣದಲ್ಲಿ ನಿಂತುಕೊಂಡಿದ್ದನು. ಈತನಿಗೂ ಆ ಪಟ್ಟಣದ ಲಿಂಗಶೆಟ್ಟಿಯೆಂಬ ಒಬ್ಬ ಕೋಮಟಿಗನಿಗೂ ಗೆಳೆತನ ಬಿತ್ತು.

ಕೆಲವು ತಿಂಗಳ ತರುವಾಯ ದೇವದತ್ತನು ಹೆಂಡರು ಮಕ್ಕಳನ್ನು ಬಿಟ್ಟು ಬಂದು ಬಹಳ ದಿವಸವಾಯಿತೆಂದು ಕಾಶಿಗೆ ಹೊರಟು, ಗೆಳೆಯನ ಮನೆಗೆ ಹೇಳಲಿಕ್ಕೆ ಬಂದು ಕಣ್ತುಂಬ ನೀರು ತಂದು, ಹೋಗಿ ಬರುತ್ತೇನೆ, ಗುರ್ತು ಇರಲೆಂದು ಲಿಂಗಶೆಟ್ಟಿಯನ್ನು ಅಪ್ಪಿಕೊಂಡನು. ಅದೇ ಮೇರೆಗೆ ಲಿಂಗಶೆಟ್ಟಿಯೂ ಕಣ್ಣೀರು ಸುರಿಸುತ್ತ ಅವನನ್ನು ಊರ ಹೊರ ತನಕ ಕಳಿಸಿ ಬರಬೇಕೆಂದು ಹೊರಟನು. ಆಗ ದೇವದತ್ತನು ಅವನ ಬೆರಳೊಳಗಿನ ವಜ್ರದ ಉಂಗುರವ ನೋಡಿ— ಗೆಳೆಯಾ, ನಿನ್ನ ಬೆರಳೊಳಗಿನ ಉಂಗುರವನ್ನು ನನಗೆ ಕೊಡು! ಅದನ್ನು ನನ್ನ ಬೆರಳೊಳಗೆ ಇಟ್ಟುಕೊಳ್ಳುತ್ತೇನೆ; ಅದನ್ನು ನೋಡಿದಾಗ ನನಗೆ ನಿನ್ನ ನೆನಪು ಆಗುವದು ಎಂದನು. ಓಹೋ! ನನ್ನ ನೆನಪು ಆಗಬೇಕೆಂಬುವದು ನಿನ್ನ ಮನಸ್ಸಿನೊಳಗಿದ್ದರೆ, ಇಷ್ಟು ಯಾಕೆ? ಹಾಗೇ ನಿನ್ನ ಬೆರಳು ನೋಡಿಕೊಳ್ಳುತ್ತಿರು! ಅಂದರೆ, ಲಿಂಗಶೆಟ್ಟಿ ಉಂಗುರಾ ಕೊಟ್ಟಿದ್ದರೆ, ಇದೇ ಬೆರಳಿಗೆ ಇಟ್ಟುಕೊಳ್ಳುತ್ತಿದ್ದೆನೆಂಬದಾಗಿ ಸಹಜವೇ ನನ್ನ ನೆನಪು ಆಗುವದು ಎಂದು ಲಿಂಗಶೆಟ್ಟಿಯು ಹೇಳಿದನು.

---

## ೨೩ನೇ ಪಾಠ.

### ಗಿಡ, ಹೂವು, ಬೀಜಗಳು.

ಗಿಡಗಳಿಗೂ ಪ್ರಾಣಿಗಳಿಗೂ ಬಹಳ ಭೇದವದೆ. ಪ್ರಾಣಿಗಳಿಗೆ ಹೊಟ್ಟೆ ಇರುವಂತೆ ಗಿಡಗಳಿಗೆ ಇಲ್ಲ. ಪ್ರಾಣಿಗಳು ಯಾವಾಗಲೂ ತಮ್ಮ ಆಹಾರ ದೊರಕಿಸುವದಕ್ಕೋಸ್ಕರ ತಿರುಗಾಡುತ್ತವೆ; ಗಿಡಗಳು ತಿರುಗಾಡುವದಿಲ್ಲ. ಗಿಡಗಳಿಗೆ ಪ್ರಾಣಿಗಳಂತೆ ಬಾಯಿ ಇಲ್ಲ; ಅವು ತಮ್ಮ ಬೇರುಗಳ ತುದಿಯಿಂದ ಭೂಮಿಯೊಳಗಿನ ರಸವನ್ನು ಸೇದಿಕೊಳ್ಳುತ್ತವೆ. ಪ್ರಾಣಿಗಳಿಗೆ ಇಂದ್ರಿಯಗಳೂ ಮನೋವಿ



ಕಾರಗಳೂ ಉಂಟು; ಹಾಗೆ ಗಿಡಗಳಿಗೆ ಇಲ್ಲ. ಮುಟ್ಟಲ ಮುರಕಿ ಮುಂತಾದ ಕೆಲವು ವನಸ್ಪತಿಗಳು ಕೈಹಚ್ಚಿದ ಕೂಡಲೆ ಮುಚ್ಚಿಕೊಳ್ಳುತ್ತವೆ. ಆದರೆ ಅವುಗಳಿಗೆ ಪ್ರಾಣಿಗಳಂತೆ ಆನಂದ ದುಃಖಗಳು ಆಗುವದಿಲ್ಲ.

ಗಿಡಗಳು ಬೀಜಗಳಿಂದ ಹುಟ್ಟುತ್ತವೆ. ಬೀಜದೊಳಗೆ ಮುಖ್ಯವಾಗಿ ಎರಡು ಮೊಳಿಕೆಗಳು ಇರುವವು. ಬೀಜ ಬಿತ್ತಿದ ಬಳಿಕ ಒಂದು ಮೊಳಿಕೆ ಮೇಲಕ್ಕೆ ಚಿಗಿಯುತ್ತದೆ; ಮತ್ತೊಂದು ಕೆಳಗೆ ನೆಲದೊಳಗಿಳಿದು ಬೇರು ಬಿಡುತ್ತದೆ. ಬೇರುಗಳು ದೊಡ್ಡವಿದ್ದಂತೆ ಗಿಡಗಳು ಬಹಳ ದಿವಸ ಬಾಳುವವು. ಅವು ನೆಲದೊಳಗಿನ ರಸವನ್ನು ಹೀರಿಕೊಂಡು ಬೊಡ್ಡಿಯೊಳಗಿಂದ ಗಿಡಕ್ಕೆಲ್ಲ ಹಂಚಿಕೊಡುವದರಿಂದ, ಟೊಂಗೆಗಳೂ ಎಲೆಗಳೂ ಹೂಗಳೂ ಆಗುತ್ತವೆ. ನಮ್ಮ ಮೈತುಂಬಾ ರಕ್ತವು ಹರಿದಾಡುವಂತೆ ಗಿಡದ ಮೈತುಂಬಾ ಆ ರಸವು ಹರಿದಾಡುತ್ತದೆ. ಬೇರೆ ಬೇರೆ ಜಾತಿಯ ಗಿಡಗಳು ತಮತಮಗೆ ಬೇಕಾಗುವ ರಸವನ್ನೇ ಭೂಮಿಯೊಳಗಿಂದ ಹೀರಿಕೊಳ್ಳುತ್ತವೆ.

ಎಲೆಗಳಿಂದ ಗಿಡಗಳು ಚಂದ ಕಾಣಿಸುತ್ತವೆ. ಎಲೆಗಳು ತರ ತರದ ಆಕಾರದವು ಇರುವವು. ಅವುಗಳ ಬೆನ್ನ ಮೇಲೆ ಹಲವು ತೂತುಗಳು ಇರುತ್ತವೆ. ಅವು ಹವೆ ತಂಪಾಗಿದ್ದರೆ ತೆರದಿರುತ್ತವೆ; ಉಷ್ಣವಾದರೆ ತಮ್ಮಿಂದ ತಾವೇ ಮುಚ್ಚಿಕೊಳ್ಳುತ್ತವೆ. ಆ ತೂತು ಗಳಲ್ಲಿ ಹವೆಯೊಳಗಿಂದ ತಮಗೆ ಬೇಕಾದ ವಾಯುವನ್ನು ಹೀರಿ ಕೊಂಡು ಬೇಡಾದಂಥ ತಮ್ಮೊಳಗಿನ ವಾಯುವನ್ನು ಹೊರಗೆ ಬಿಡುವ ಗುಣವುಂಟು. ಆದದರಿಂದ ಆ ತೂತುಗಳು ಮನುಷ್ಯ ರಂತೆ ಶ್ವಾಸೋಚ್ಛ್ವಾಸ ಬಿಡುತ್ತವೆಂದರೂ ಸಾಗುವದು.

ಗಿಡಗಳು ಬಹಳ ಇದ್ದರೆ, ದೇಶದೊಳಗಿನ ಹವೆಯು ತಂಪಾ ಗುತ್ತದೆ. ಗಿಡಗಳಿಲ್ಲದ ದೇಶದಲ್ಲಿ ಶೆಕೆ ಬಹಳ. ಗಿಡಗಳೊಳಗಿಂದ ಹಗಲು ಹಿತಕರ ವಾಯು, ರಾತ್ರಿ ಅಹಿತಕರ ವಾಯು ಹೊರ ಬೀಳುತ್ತದೆ. ಬಹಳ ಗಿಡಗಳಿದ್ದಲ್ಲಿ ಮಳೆ ಹೆಚ್ಚು ಬೀಳುತ್ತದೆ.

ಎಲೆಗಳು ಹಸುರಾಗುವದಕ್ಕೆ ಸೂರ್ಯನ ಬೆಳಕು ಅವಶ್ಯ ವಾಗಿ ಬೇಕು. ನೆರಳಲ್ಲಿ ಗಿಡಗಳನ್ನು ಹಚ್ಚಿದರೆ, ಎಲೆಗಳು ನಿಸ್ಸಾ ರವಾಗಿ ಬೆಳ್ಳಗಾಗುತ್ತವೆ. ಎಲೆಗಳು ಬಹಳ ಬೆಳಕು ಇರುವ ಕಡೆ ಗೆ ಯಾವಾಗಲೂ ತಮ್ಮ ಒಳಮೈ ಮಾಡಿಕೊಂಡು ಇರುತ್ತವೆ. ಎಷ್ಟೋ ಮರಗಳಿಗೆ ಟೊಂಗೆಗಳೂ ಎಲೆಗಳೂ ಬಹಳ ಇರುವದ ರಿಂದ ಅವುಗಳ ನೆರಳು ದಟ್ಟವಾಗಿ ಬೀಳುತ್ತದೆ.

ವಾಡಿಕೆಯಾಗಿ ಟೊಂಗೆಗಳ ಕುಡಿಯಲ್ಲಿ ಮೊಗ್ಗೆಗಳಾಗುವವು. ಮೊಗ್ಗೆಯ ಬುಡದಲ್ಲಿ ತುಂಬು ಇರುತ್ತದೆ; ಒಳಗೆ ಹೂವಿನ ಸಣ್ಣ ಸಣ್ಣ ಪಕಳಿಗಳು ಒಂದಕ್ಕೊಂದು ಹೊಂದಿ ಮುದುಡಿಕೊಂಡು ಇರು ತ್ತವೆ. ಆ ಮೊಗ್ಗೆಯೇ ಮುಂದೆ ಅರಳಿ ಹೂವು ಆಗುತ್ತದೆ. ಹೂ ವಿನ ನಡುವೆ ಸಣ್ಣ ಸಣ್ಣ ತಂತುಗಳು ಇರುವವು. ಅದರೊಳಗಿಂದ ಜೇನನೊಣಗಳು ಜೇನತುಪ್ಪ ಒಯ್ದು ಕೂಡ ಹಾಕುತ್ತವೆ. ಕಾಯಿ ಆಗದಂಥ ಗಿಡಗಳ ಹೂವಿನ ನಡುವೆ ಬೀಜವಿರುತ್ತದೆ. ಹೂವಿನ ಪಕಳಿಗಳು ಉದುರಿ, ಅದರ ತುಂಬಿನಲ್ಲಿ ಕಾಯಿ ಆಗುವದು.

ಆ ಕಾಯಿಗಳು ಬಿಸಿಲಿನಿಂದ ಬೇರೆ ಬೇರೆ ರೀತಿಯಿಂದ ಹಣ್ಣಾಗುವವು. ಅವುಗಳೊಳಗಿನ ಬೀಜಗಳು ಬಿತ್ತಲಿಕ್ಕೆ ಬರುತ್ತವೆ.

ಭೂಮಿಯೂ ಹವೆಯೂ ಗೊಬ್ಬರವೂ ಒಂದೇ ಪ್ರಕಾರದವು ಇದ್ದರೂ, ಬೇರೆ ಬೇರೆ ಜಾತಿಯ ಗಿಡಗಳನ್ನು ಹಾಕಿದರೆ, ಆಯಾ ಗಿಡಗಳಲ್ಲಿರುವ ಹಿತಕಾರಕ, ವಿಷಕಾರಕ ಗುಣಗಳು ಹ್ಯಾಗೆ ಉಂಟಾಗುತ್ತವೆಂಬದು ನಮಗೆ ತಿಳಿಯದು.

---

## ೨೪ನೇ ಪಾಠ.

### ಕದಿಯುವ ಇಚ್ಛೆಯನ್ನು ತಿರುಗಿಸಿದ್ದು.

ಒಂದು ದಿನ ಸದಾಶಿವನೂ ರಾಮನೂ ಎಂಬ ಇಬ್ಬರು ಅಣ್ಣತಮ್ಮಂದಿರು ತಿರುಗಾಡುತ್ತ ಒಂದು ತೋಟಕ್ಕೆ ಹೋಗಿ ಅಲ್ಲಿಯ ಮಾವಿನ ತೋಪಿನೊಳಗಿಂದ ಹಾದು ಬರುತ್ತಿದ್ದರು. ಮಾವಿನ ಗಿಡಗಳು ಕಾಯಾಗಿ ಒರಗಿದ್ದವು. ಆ ಕಾಯಿಗಳು ಪಾಡಿಗೆ ಬಂದು ಕೆಲಕೆಲವು ಹಣ್ಣುವರಿದು ಸೊಂಪಾಗಿ ತೋರುತ್ತಿದ್ದವು.

ಅವುಗಳನ್ನು ನೋಡಿ ರಾಮನು—ಸದಾಶಿವಾ, ಎಂಥಾ ಉತ್ಕೃಷ್ಟ ಹಣ್ಣುಗಳು ಆಗಿವೆ ನೋಡಿದಿಯಾ? ತೋಟದೊಳಗೆ ಯಾರೂ ಇಲ್ಲ, ಕೆಲವು ಹಣ್ಣುಗಳನ್ನು ಕೊಯ್ದುಕೊಂಡು ಹೋಗುವ ಬಾ, ಎಂದು ಅಂದನು.

ಸದಾಶಿವನು—ಛೀ, ಅಂಥಾ ಮಾತು ಆಡಬೇಡ, ಅವೇನು ನಮ್ಮವೇ? ಹೆರವರ ತೋಟದೊಳಗೆ ಬಂದು ಅವರ ಹಣ್ಣುಹಂಪಲಗಳನ್ನು ಹರಕೊಂಡು ಹೋಗುವದು ಸರಿಯಲ್ಲ.

ರಾಮ—ಹೆರವರವು ಆದರೇನಾಯಿತು? ಹಣ್ಣುಗಳು ಬಹಳಾಗಿವೆ; ಇವುಗಳೊಳಗಿನವು ಕೆಲವು ಹಣ್ಣು ಹೋದರೆ, ತೋಟದವರಿಗೆ ತಿಳಿಯದು. ಅವರೇನು ಎಣಿಸಿರುತ್ತಾರೋ?

ಸದಾಶಿವ—ಬಹಳಾಗಿವೆ ಸರಿ; ಆದರೆ ಅವುಗಳೊಳಗಿನ ಹಣ್ಣುಗಳನ್ನು ನಾವು ತಕ್ಕೊಳ್ಳಬಾರದು; ಯಾಕಂದರೆ ಹೆರವರ ಒಡವೆಯನ್ನು ಒಡೆಯನಿಗೆ ತಿಳಿಸದೆ ತಕ್ಕೊಂಡರೆ, ಕಳವು ಮಾಡಿದ ಹಾಗೆ ಆಗುತ್ತದೆ. ಕೆಲವು ದಿವಸಗಳ ಹಿಂದೆ ಪೋಲಿಸ ಜವಾನರು ಒಬ್ಬ ತುಡುಗನನ್ನು ಹಿಡಕೊಂಡು ನಮ್ಮ ಬಾಗಿಲ ಮುಂದೆ ಹಾದು ಹೋಗುತ್ತಿದ್ದರು; ಆಗ ತಂದೆ ಹೇಳಿದ್ದು ಮರತಿಯಾ?

ರಾಮು—ತಂದೆ ಹೇಳಿದ್ದು ನನಗೆ ನೆನಪಾಗಲೊಲ್ಲದು, ನೀನೇ ಹೇಳು.

ಸದಾಶಿವ—ಮೊದಲು ಜನರು ಸಣ್ಣ ಸಣ್ಣ ತಪ್ಪುಗಳನ್ನು ಮಾಡುತ್ತಾರೆ; ಅವು ದಕ್ಕಿದವಂದರೆ, ಅವುಗಳಿಗಿಂತ ಹೆಚ್ಚಿನ ತಪ್ಪು ಮಾಡಹತ್ತುತ್ತಾರೆ. ಹೀಗೆ ಮಾಡುತ್ತ ಮಾಡುತ್ತ ಕಡೆಗೆ ಅವರು ದೊಡ್ಡ ದೊಡ್ಡ ಅಪರಾಧಗಳನ್ನು ಮಾಡಲಿಕ್ಕೆ ಅಂಜುವದಿಲ್ಲ, ಎಂದು ತಂದೆ ಹೇಳಿದ್ದಿಲ್ಲವೇ? ಮತ್ತು ಈಗ ಈ ತೋಟದ ಒಡೆಯನು ನಮ್ಮನ್ನು ನೋಡದಿದ್ದರೂ ಸರ್ವಜ್ಞನಾದ ದೇವರು ಯಾವಾಗಲೂ ನಮ್ಮನ್ನು ನೋಡುತ್ತಿರುತ್ತಾನೆ. ಇದನ್ನು ನೀನು ಅರಿಯಾ? ಅಂದನು.

ರಾಮನು ಅಣ್ಣನ ಮಾತುಗಳನ್ನು ಕೇಳಿ ತಾನು ಕದಿಯಲಿಚ್ಛಿಸಿದ ಬಗ್ಗೆ ಮನದೊಳಗೆ ನಾಚಿಕೊಂಡನು. ಮೊದಲು ಮಾವಿನ ಹಣ್ಣುಗಳನ್ನು ಕೊಯ್ಯಲಿಕ್ಕೆ ಹವಣಿಸುತ್ತಿದ್ದವನು ದೇವರು ಯಾವಾಗಲೂ ತಮ್ಮನ್ನು ನೋಡುತ್ತಾನೆಂಬ ಮಾತು ನೆನಪಾದ ಕೂಡಲೆ ಪಾಪಕ್ಕೆ ಅಂಜಿ ಹಿಂದಕ್ಕೆ ಸರಿದನು. ಈ ಮೇರೆಗೆ ಅವರಿಬ್ಬರು ಮಾತಾಡುವದನ್ನು ತೋಟಿಗನು ಬೇಲಿಯ ಮರೆಗೆ ನಿಂತುಕೊಂಡು ಕೇಳಿ ಆಶ್ಚರ್ಯ ಪಟ್ಟು, ಮುಂದೆ ಬಂದು ಕೆಲವು ಚಲೋ ಚಲೋ ಮಾವಿನ ಹಣ್ಣುಗಳನ್ನು ಆರಿಸಿ ಕೊಯ್ದು ಸದಾಶಿವನಿಗೆ ಸಂತೋಷದಿಂದ ಕೊಟ್ಟನು. ಸದಾಶಿವನು ಅವುಗಳನ್ನು ತಕ್ಕೊಂಡು ತನ್ನ ಮಾತಿಗೆ ತಮ್ಮನು ಪಶ್ಚಾತ್ತಾಪಗೊಂಡನೆಂದು ಅವುಗಳಲ್ಲಿ ಅರ್ಧ ಹಣ್ಣುಗಳನ್ನು ಅವನಿಗೆ ಕೊಟ್ಟನು.

## ೨೫ನೇ ಪಾಠ.

### ನಾಯಿ.



ನಾಯಿಗಳು ಎಲ್ಲ ನಾಡುಗಳಲ್ಲುಂಟು; ದಕ್ಷಿಣ ಪಾಸಿಫಿಕ ಮಹಾಸಾಗರದೊಳಗಿನ ಕೆಲವು ನಡುಗಡ್ಡೆಗಳಲ್ಲಿ ಮಾತ್ರ ಇಲ್ಲ. ಆಫ್ರಿಕಾ ಖಂಡದೊಳಗಿನ ಕಾಂಗೋಪ್ರಾಂತದಲ್ಲಿಯೂ, ಕೇಪ ಆಫ್‌ಗುಡ್‌ಹೋಪದಲ್ಲಿಯೂ, ಅಮೇರಿಕಾ ಖಂಡದಲ್ಲಿಯೂ, ನ್ಯೂ ಹಾಲಂಡದಲ್ಲಿಯೂ ಕಾಡನಾಯಿಗಳು ಇರುತ್ತವೆ.

ನಾಯಿಗಳ ಮೈಕಟ್ಟು ಚಂದವು; ಇವುಗಳ ಮೋರೆಯು ಮೇಲೆ ಚಪಲತನದ ಚಿಹ್ನ ತೋರುವದು. ಕೆಲವು ನಾಯಿಗೆ ಜುಪ್ಪಳು, ಕೆಲವುಗಳಿಗೆ ಕೂದಲು ಇರುತ್ತವೆ. ಜೂಲು ನಾಯಿಗೆ ಉದ್ದ ಕೂದಲು ಇರುವವು. ನಾಯಿಗಳ ಮೈಬಣ್ಣ ಹಲವು ತರದ್ದು ಇರುತ್ತದೆ. ನಿಲುವಿಕೆಯಲ್ಲಿ ಎಲ್ಲ ಒಂದೇ ಸವನೆ ಇರುವದಿಲ್ಲ, ಹಿರಿದೂ ಕಿರಿದೂ ಇರುತ್ತವೆ.

ಜಾಣತನ, ತಿಳುವಳಿಕೆ, ನಂಬಿಗೆಗಳು ನಾಯಿಗಳಲ್ಲಿ ಉಂಟು; ಸಾಕಿದ ಒಡೆಯನ ಮಾತು ಕೇಳುತ್ತ ಅವನಿಗೆ ಒಳಿತು ಮಾಡುವ ಗುಣವು ನಾಯಿಗಳಲ್ಲಿ ಇದ್ದ ಹಾಗೆ ಮಿಕ್ಕಾದ ಪ್ರಾಣಿಗಳಲ್ಲಿ ಇಲ್ಲ. ಒಡೆಯನ ಮೋರೆಯ ಕಡೆಗೂ ಮಾತಿನ ಕಡೆಗೂ ನಾಯಿಗಳ ಲಕ್ಷ್ಯವಿರುತ್ತದೆ. ಎಚ್ಚರದಿಂದ ಹಗಲೂ ಇರುಳೂ ಒಡೆಯನ ಬಾಗಿಲ ಕಾಯ್ದು, ಅವನ ಒಡವೆಗಳನ್ನು ಯಾರಿಗೂ ಒಯ್ಯಗೊಡು ವದಿಲ್ಲ; ಗುರ್ತು ಅರಿಯದವರು ಯಾರಾದರೂ ಬಂದರೆ, ಅವರ ಮೈಮೇಲೆ ಹೋಗುತ್ತವೆ; ಗುರ್ತುಳ್ಳವರ ಧ್ವನಿ ಕೇಳಿದ ಕೂಡಲೆ ತಿಳಿದು ಸುಮ್ಮನೇ ಇರುತ್ತವೆ. ಸಾಕಿದವನು ಎಷ್ಟು ಹೊಡಿದರೂ ಸುಮ್ಮನೇ ಹೊಡಿಸಿಕೊಂಡು ಮನಸ್ಸಿನೊಳಗೆ ಶಿಟ್ಟು ಸಹ ಹಿಡಿ ಯುವದಿಲ್ಲ. ಇವುಗಳಿಗೆ ನೆನಪು ಚನ್ನಾಗಿ ಇರುತ್ತದೆ; ಇವು ಕಲಿ ಸಿದ ಹಾಗೆ ಕಲಿಯುವವು, ಚನ್ನಾಗಿ ಈಸುತ್ತವೆ. ಇವು ಶಿಟ್ಟಿಗೆ ದ್ದಾಗ ಬೊಗಳುತ್ತವೆ; ಗುರುಗುಟ್ಟುತ್ತವೆ. ಒಮ್ಮೊಮ್ಮೆ ದುಃಖ ದಿಂದ ಅಳುವವು.

ಆಫ್ರಿಕಾ ಖಂಡದೊಳಗಿನ ಕಾಡನಾಯಿಗಳು ದನಗಳನ್ನೂ ಚಿಗರೆಗಳನ್ನೂ ಕುರಿಗಳನ್ನೂ ಕೊಂದು ತಿನ್ನುತ್ತವೆ. ಅವು ಬಹು ತೀವ್ರ ಓಡುವವು, ಏನು ಮಾಡಿದರೂ ಕೈಗೆ ಶಿಗುವದಿಲ್ಲ. ಇವು ಬಹು ತಿನಸಗೂಳಿಗಳು. ಇವು ತೊಪ್ಪಲ ತಿನ್ನುವದಿಲ್ಲ. ಹೊಟ್ಟೆ ಕಡಿಯುವಾಗ ಮಾತ್ರ ಔಷಧವೆಂದು ಕರಿಕೆಯನ್ನು ತಿಂದು ಕಾರಿ ಕೊಳ್ಳುತ್ತವೆ. ಒಮ್ಮೊಮ್ಮೆ ಕೂಳು ದೊರೆಯದಾಗ ಹಾಗೇ ಎಷ್ಟೋ ದಿವಸ ಉಪವಾಸವಿರುತ್ತವೆ; ಆದರೂ ಆಗಾಗ್ಗೆ ಅವುಗಳಿಗೆ ನೀರು ಮಾತ್ರ ಬೇಕು. ಇವು ಬೆಕ್ಕುಗಳ ಹಾಗೆ ತುದಿನಾಲಿಗೆಯಿಂದ ಲೊಚಲೊಚ ನೀರು ಕುಡಿಯುತ್ತವೆ. ಇವು ಹೆಚ್ಚಿಗೆ ನಿದ್ರೆ ಮಾಡು ವದಿಲ್ಲ; ಏನಾದರು ತುಸು ಸಪ್ಪಳವಾದ ಕೂಡಲೆ ಎಚ್ಚರವಾಗುತ್ತವೆ.

ಹೆಣ್ಣು ನಾಯಿಗಳು ವರ್ಷದೊಳಗೆ ಎರಡು ಸಾರೆ ಈಯು ತ್ತವೆ. ಸರತಿಗೆ ನಾಲ್ಕೆಂಟು ಕುನ್ನಿಗಳು ಹುಟ್ಟುವವು. ಹುಟ್ಟು

ವಾಗ ಕುನ್ನಿಗಳು ಕಣ್ಣು ಮುಚ್ಚಿರುತ್ತವೆ; ಹತ್ತು ದಿವಸಗಳಾದ ಬಳಿಕ ಕಣ್ಣು ತೆರೆದು, ಒಂದೆರಡು ತಿಂಗಳಿಗೆ ಚನ್ನಾಗಿ ಓಡಾಡ ಹತ್ತುತ್ತವೆ. ಇವುಗಳ ಬೆಳುವಣಿಗೆ ಎರಡು ವರ್ಷಗಳ ತನಕ; ಇವು ಹತ್ತು ಹದಿನಾಲ್ಕು ವರ್ಷ ಬಾಳುತ್ತವೆ.

ಬೇಟೆಯಾಡುವ ಕೆಲಸಕ್ಕೆ ನಾಯಿಗಳು ಬೇಕೇ ಬೇಕು. ನಾಯಿಯು ಮನುಷ್ಯನಿಗೆ ನಂಬಿಗೆಯ ಸೇವಕನೆಂದರೂ ಜೀವದ ಗೆಳೆಯನೆಂದರೂ ಸಲ್ಲುವದು. ಮನುಷ್ಯರ ಬೆನ್ನಹತ್ತಿ ಬೆಂಗಾವಲದ ಆಳಿನ ಹಾಗೆ ಬೇಕಾದತ್ತ ಆನಂದದಿಂದ ತಿರುಗಾಡುವ ಪ್ರಾಣಿಯು ಇದೊಂದೇ ಸರಿ. ಕುರುಬರ ನಾಯಿಗಳು ಕುರೀ ಹಿಂಡು ಕಾಯುತ್ತವೆ. ಉತ್ತರ ಧ್ರುವದ ಕಡೆಯ ನಾಡುಗಳೊಳಗಿನ ನಾಯಿಗಳು ಗಡ್ಡೆಗಟ್ಟಿದ ನೀರ ಮೇಲೆ ಬಂಡಿಗಳನ್ನು ಎಳೆದೊಯ್ಯುತ್ತವೆ. ಕೆಲವು ತರದ ನಾಯಿಗಳು ನೀರೊಳಗೆ ಮುಳುಗಿದ ಮನುಷ್ಯರನ್ನು ಕಡೆಗೆ ತೆಗೆಯುತ್ತವ. ರೂಸ ದೇಶದಲ್ಲಿ ನಾಯಿಯ ತೊಗಲಿನಿಂದ ಬಟ್ಟೆಗಳನ್ನು, ಕೂದಲುಗಳಿಂದ ಆಭರಣಗಳನ್ನು ಮಾಡುತ್ತಾರೆ. ನಾಯಿಗಳಲ್ಲಿ ಇಷ್ಟು ಒಳ್ಳೇ ಗುಣಗಳಿದ್ದಾಗ್ಯೂ ಇವುಗಳನ್ನು ಮುಟ್ಟುವದೂ ಸಾಕುವದೂ ಹಿಂದೂ ಜನರೊಳಗೆ ಹಲವರ ಮನಸ್ಸಿಗೆ ಬರುವದಿಲ್ಲ.

---

## ೨೬ನೇ ಪಾಠ.

### ಒಂದು ನಾಯಿಯ ಜಾಣತನ.

ಕೆಲವರು ಕಳ್ಳರು ಕೂಡಿ ಒಂದು ರಾತ್ರಿ ಒಬ್ಬ ಸಾವುಕಾರನ ಮನೆಯ ಕನ್ನ ಕೊರೆದು ಸಿಕ್ಕ ಬದುಕು ತಕ್ಕೊಂಡು ಹೋಗಿ ಒಂದು ಹೊಲದೊಳಗೆ ಹುಗಿದಿಟ್ಟರು. ಆದರೆ ಆ ಸಾವುಕಾರನು ಒಂದು ನಾಯಿ ಸಾಕಿದ್ದನು. ಅದು ಆ ಕಳ್ಳರಿಗೆ ತಿಳಿಯಗೊಡದೆ ಅವರ ಬೆನ್ನ ಹಿಂದಿಂದೆ ಹೋಗಿ ಆ ಬದುಕು ಹುಗಿದಿಡುವದನ್ನು ನೋಡಿ

ಮನಸ್ಸಿನೊಳಗೆ ಗೊತ್ತು ಇಟ್ಟುಕೊಂಡು ಮನೆಗೆ ಬಂತು. ಮರು ದಿನ ಬೆಳಿಗ್ಗೆ ಸಾವುಕಾರನು ಎದ್ದು ನೋಡುತ್ತಾನೇ, ಕಳ್ಳರು ಕನ್ನಾ ಕೊರೆದು ಬದುಕೆಲ್ಲ ತಕ್ಕೊಂಡು ಹೋಗಿದ್ದರು. ಅದರಿಂದ ಅವ



ನು ಎದೆ ಎದೆ ಬಡಕೊಳ್ಳಹತ್ತಿದನು; ಆ ಗದ್ದಲಕ್ಕೆ ನೆರೆಹೊರೆಯ ವರೆಲ್ಲರು ನೆರದರು ಆಗ ಆ ನಾಯಿ ಬಂದು ಬಾಯಿಂದ ಅವನ ಧೋತರ ಸೆರಗು ಹಿಡಿದು ಎಳೆಯ ಹತ್ತಿತು, ಆದರೆ ಅದರ ಭಾವ

ಆ ಸಾವುಕಾರನಿಗೆ ತಿಳಿಯಲಿಲ್ಲ. ನೆರೆದವರಲ್ಲಿ ಒಬ್ಬನು ನಾಯಿಯ ಕಡೆ ನೋಡಿ, ಇದಕ್ಕೆ ಏನೋ ಗೊತ್ತು ಇದ್ದಂತೆ ಕಾಣುತ್ತದೆ; ಎಲ್ಲಿಗೆ ಕರಕೊಂಡು ಹೋಗುತ್ತದೋ ಅಲ್ಲಿಗೆ ಹೋಗಬೇಕು ಎಂದನು. ಆತನ ಮಾತು ಕೇಳಿ ಎಲ್ಲರು ಅದರ ಹಿಂದಿಂದೆ ಹೊರಟರು. ನಾಯಿ ಆ ಹೊಲಕ್ಕೆ ಹೋಗಿ ಬದುಕು ಇಟ್ಟ ನೆಲ ಕೆದರಹತ್ತಿತು. ಆದನ್ನು ಕಂಡು ಅವರು ಗುದ್ದಲೀ ತಂದು ಅಗಿದು ನೋಡಲಾಗಿ, ಅಲ್ಲಿ ಎಲ್ಲ ಬದುಕು ಶಿಕ್ಕಿತು.

---

## ೧೭ ನೇ ಪಾಠ.

### ಸಾಲೆಯೊಳಗಿನ ಹುಡುಗ.

ಚಿಕ್ಕಂದಿನಲ್ಲಿ ಮಕ್ಕಳು ಕೆಟ್ಟ ಕೆಲಸಗಳನ್ನು ಮಾಡಿದಾಗ ನೋಡಿ ತಾಯಿತಂದೆಗಳು ಸುಮ್ಮನೆ ಬಿಟ್ಟರೆ, ಮಕ್ಕಳಿಗೆ ಅವರೇ ದುಷ್ಟತನ ಕಲಿಸಿದ ಹಾಗೆ ಆಗುತ್ತದೆ.

### ಕಥೆ.

ಸಾಲೆಯಲ್ಲಿ ಕಲಿಯುತ್ತ ಕುಳಿತಾಗ ಒಬ್ಬ ಹುಡುಗನಿಗೆ ಸಮೀಪದಲ್ಲಿ ಬರೆಯುವ ಹುಡುಗನ ಕಾಲ ಸರಪಳಿಯು ಶಿಕ್ಕಿತು. ಅದನ್ನು ತಂದು ಆ ಹುಡುಗನು ತನ್ನ ತಾಯಿಯ ಕೈಯೊಳಗೆ ಕೊಟ್ಟನು. ಆಕೆ ಅದನ್ನು ನೋಡಿ ಹಿರ್‍ರನೆ ಹಿಗ್ಗಿ ಮಗನಿಗೆ ಒಂದು ಕಬ್ಬಿನ ಗಣಿಕೆಯನ್ನು ಕೊಟ್ಟಳು. ಅವನು ತಾನು ಮಾಡಿದ ಕೆಲಸ ತಾಯಿಯ ಮನಸ್ಸಿಗೆ ಬಂತೆಂದು ತಿಳಿದು, ದಿನಾಲೂ ಇದಕ್ಕಿಂತ ದೊಡ್ಡ ದೊಡ್ಡ ಒಡವೆಗಳನ್ನು ಕದಿಯಹತ್ತಿದನು. ಹೀಗೆ ಮಾಡುತ್ತ ದೊಡ್ಡವನಾದ ಬಳಿಕ ಒಂದು ದಿನ ಕಳವಿನ ಒಡವೆ ಸಹಿತ ಶಿಕ್ಕನು. ಬಳಿಕ ಸರಕಾರದವರು ಅವನಿಗೆ ಬೆನ್ನ ಮೇಲೆ ಫಟಕೇ ಹೊಡೆಯುವ ಶಿಕ್ಷೆಯನ್ನು ನಿರ್ಣಯಿಸಿದರು. ಆ ಮೇಲೆ ಅವನನ್ನು ಊರ ನಡುವೆ ಒಂದು

ಪ್ರಸಿದ್ಧ ಸ್ಥಳಕ್ಕೆ ಒಯ್ದು ಅವನ ಬೆನ್ನ ತೆಗಸಿ ಘಟಿಕೇ ಹೊಡಿಯುವಾಗ ತಾಯಿ ಮಗನ ಸಂಕಟ ನೋಡಿ ಅಳಹತ್ತಿದಳು. ಆಕೆಯನ್ನು ಕಂಡು ಅವನು—ತಾಯಿಾ, ನೀನು ಕಲಿಸಿದ ಕೃತ್ಯದ ಪರಿಣಾಮವಿದು! ಸರಪಳಿ ತಂದು ಕೊಟ್ಟಾಗಲೇ ನೀನು ನನ್ನ ಮೋರೆ ಮೋರೆ ಬಡಿದಿದ್ದರೆ, ಈ ಗತಿಗೆ ನಾನು ಯಾಕೆ ಬರುತ್ತಿದ್ದೆನು!

---

## ೨೮ ನೇ ಪಾಠ.

## ಉತ್ತರ ಅಮೇರಿಕದ ಇಂದಿಯನನೂ ಕಳವಿಲಿ ಹೋದ ಮಾಂಸವೂ.

ಒಂದು ದಿನ ಉತ್ತರ ಅಮೇರಿಕದೊಳಗಿನ ಒಬ್ಬ ಇಂದಿಯನನು ಜಿಗರೀ ಮಾಂಸವನ್ನು ಒಂದು ಗಿಡಕ್ಕೆ ತೂಗಹಾಕಿ, ತಿರುಗಾಡಲಿಕ್ಕೆ ಹೊರಗೆ ಹೋಗಿದ್ದನು. ತಿರಿಗಿ ತನ್ನ ಗುಡುಸಲಿಗೆ ಬರುವಷ್ಟರಲ್ಲಿ ಆ ಮಾಂಸವನ್ನು ಯಾರೋ ಕದ್ದುಕೊಂಡು ಒಯ್ದಿದ್ದರು. ಬಳಿಕ ಅವನು ಆ ಸ್ಥಳದೊಳಗೆ ನಾಲ್ಕೂಕಡೆಯಲ್ಲಿ ಹುಡುಕಿ, ಕಡೆಗೆ ಅಡವಿಯೊಳಗೆ ಕಳ್ಳನ ಹೆಜ್ಜೆ ಹಿಡಿಯುತ್ತ ಹೋದನು.

ಆಗ ದಾರಿಯಲ್ಲಿ ಎದುರಿಗೆ ಬರುವವರನ್ನು ನೋಡಿ—ಏನಯ್ಯಾ, ಒಬ್ಬ ಬೆಳ್ಳನ್ನ ಗಿಡ್ಡ ಮುದುಕನು ಸಣ್ಣ ತುಬಾಕಿಯನ್ನು ಹಿಡಕೊಂಡು ಸಂಗಡ ಒಂದು ಮೊಂಡ ಬಾಲದ ಗಿಡ್ಡ ನಾಯಿಾ ಕರಕೊಂಡು ಹೋಗುವದನ್ನು ನೀವು ಕಂಡಿರೋ? ಎಂದು ಅವನು ಕೇಳಿದನು. ಅವರು ನೋಡಿದೆವೆಂದು ಹೇಳಿದರು. ನನ್ನ ಮಾಂಸವನ್ನು ಕದ್ದೊಯ್ದವನು ಅವನೇ ಎಂದು ಆ ಇಂದಿಯನನು ಅವರಿಗೆ ಹೇಳಿದನು. ಈ ಮಾತು ಕೇಳಿ, ಹಾದಿಕಾರರು—ಆ ಕಳ್ಳನನ್ನು ನೀವು ಎಂದೂ ನೋಡಿದ ಹಾಗೆ ಕಾಣುವದಿಲ್ಲ, ಆದರೂ ಇದ್ದಕ್ಕಿದ್ದ ಹಾಗೆ ಆತನ ಗುರ್ತು ಹೇಳಿದಿರಿ; ನಿಮಗೆ ಹ್ಯಾಗೆ ತಿಳಿಯಿತು? ಎಂದು ಕೇಳಿದರು.

ಇಂದಿಯನನು—ನಾನು ನೆಲದ ಮೇಲೆ ನಿಂತು ಆ ಮಾಂಸವನ್ನು ಇಟ್ಟ ಸ್ಥಳಕ್ಕೆ ಆತನ ಕೈ ನಿಲಕದ್ದರಿಂದ ಆತನು ಒಂದರ ಮೇಲೊಂದು ಕಲ್ಲು ಒಟ್ಟಿ ಅದರ ಮೇಲೆ ನಿಂತು ಆ ಮಾಂಸವನ್ನು ತಕ್ಕೊಂಡಿದ್ದಾನೆ; ಅದರಿಂದ ಅವನು ಗಿಡ್ಡನೆಂದು ತಿಳುಕೊಳ್ಳುತ್ತೇನೆ. ಅವನ ಹೆಜ್ಜೆಗಳು ಒಂದಕ್ಕೊಂದು ಬಹು ಹತ್ತರ ಮೂಡಿರುವದರಿಂದ ಅವನು ಮುದುಕನಿರಬೇಕೆಂದು ತಿಳಿಯುತ್ತೇನೆ. ಹೆಬ್ಬೊಟ್ಟು ಮೂಡಿಲ್ಲ; ಅದರಿಂದ ಆತನು ಬಿಳೇ ಮನುಷ್ಯನಿರಬಹುದು. ಯಾಕಂದರೆ ಇಂದಿಯನರು ನಡೆಯುವಾಗ ಹೆಬ್ಬೊಟ್ಟು ಮೇಲಕ್ಕೆ ಎತ್ತುವದಿಲ್ಲ. ಅವನು ತನ್ನ ತುಬಾಕಿಯನ್ನು ಒಂದು ಗಿಡಕ್ಕೆ ಆನಿಸಿಟ್ಟಿದ್ದನು; ಅದರ ಬಾಯಿ ತಗಲಿ ಆ ಗಿಡಕ್ಕೆ ಕಚ್ಚು ಬಿದ್ದದೆ. ಅದರಿಂದ ಅವನ ತುಬಾಕಿ ಸಣ್ಣದಿರಬಹುದೆಂದು ತಿಳಿಯುತ್ತೇನೆ. ಅವನ ನಾಯಿಯ ಹೆಜ್ಜೆಗಳು ಸಣ್ಣವಾಗಿಯೂ ಒಂದಕ್ಕೊಂದು ಸಮೀಪವಾಗಿಯೂ ಇರುವದರಿಂದ ಅದು ಗಿಡ್ಡ ನಾಯಿ ಎಂದು ತಿಳುಕೊಂಡೆನು. ಆ ನಾಯಿ ಮಣ್ಣೊಳಗೆ ಕೂತದ್ದರಿಂದ ಅದರ ಮೊಂಡ ಬಾಲವು ಮೂಡಿದೆ; ಅದರಿಂದ ಅದು ಮೊಂಡ ಬಾಲದ್ದು ಇರಬಹುದೆಂದು ತಿಳಿಯ ಬಂತು ಎಂದು ಹೇಳಿದನು.

---

## ೨೮ನೇ ಪಾಠ.

### ಸಕ್ಕರೆ.

ಸಕ್ಕರೆಯನ್ನು ಕಬ್ಬಿನ ರಸದಿಂದ ಮಾಡುತ್ತಾರೆ. ಸಕ್ಕರೆಯೊಳಗೆ ಕಲ್ಲಸಕ್ಕರೆ ಪುಡಿಸಕ್ಕರೆ ಎಂದು ಎರಡು ತರವುಂಟು. ಕಲ್ಲಸಕ್ಕರೆ ಹರಳು ಹರಳೂ, ಬೆಣಚುಗಲ್ಲಿನ ಹಾಗೆ ಸ್ವಲ್ಪ ಬೆಳ್ಳಗೆ ಇರುತ್ತದೆ; ಬಾಯೊಳಗೆ ಹಾಕಿಕೊಂಡರೆ, ಆ ಹರಳು ಕರಗಿ ನೀರಾಗುವದು. ಕಲ್ಲಸಕ್ಕರೆಯೊಳಗೆ ಕಾಲ್ಪೀ ಕಲ್ಲಸಕ್ಕರೆ, ಗಡಿಗೀ ಕಲ್ಲಸಕ್ಕರೆ ಎಂದು ಎರಡು ತರವುಂಟು. ಗಡಿಗೀ ಕಲ್ಲಸಕ್ಕರೆ ತುಸು

ಕೆಂಪು. ಪುಡಿಸಕ್ಕರೆಯಲ್ಲಿ ಚಿನ್ನೀ, ರಾಜಾಪುರೀ, ಎಳಗುಡೀ, ಹುರಿ ಸಕ್ಕರೆ, ಮಗುದುಮ್ಮಿ ಎಂದು ಹಲವು ತರವುಂಟು. ಈ ದೇಶದಲ್ಲಿ ಸ್ಸಾಧಾರಣವಾಗಿ ಸಕ್ಕರೆ ಮಾಡುವ ಹದವು ಹ್ಯಾಗಂದರೆ—


ಮೊದಲು ಪಡದೊಳಗಿನ ಕಬ್ಬು ಮುರಿಯುತ್ತಾರೆ. ಬಳಿಕ ಅವುಗಳನ್ನು ಸುಲಿದು, ಅವುಗಳ ಸೋಗೀ ಕಡಿದು, ಗಾಣಕ್ಕೆ ಹಾಕಿ ರಸವನ್ನು ತೆಗೆಯುತ್ತಾರೆ. ಆ ಮೇಲೆ ಆ ರಸವನ್ನು ಕಬ್ಬಿಣದ ಕೊಪ್ಪರಿಗೆಯೊಳಗೆ ಹಾಕಿ ಒಲೆಯ ಮೇಲೆ ಇಟ್ಟು ಬುಡಕ್ಕೆ ಉರೀ ಹಚ್ಚಿ, ರಸವು ದಟ್ಟವಾಗುವ ತನಕ ಕುದಿಸುತ್ತಾರೆ. ಆ ರಸವನ್ನು ತುಸು ಕುದಿಸಿದರೆ ಕಾಕವಿಯಾಗುವದು; ಅದಕ್ಕೂ ಹೆಚ್ಚು ಕುದಿಸಿದರೆ ರಾಪವಾಗುವದು; ಪೂರಾ ಬೆಯಿಸಿದರೆ ಬೆಲ್ಲವಾಗುವದು. ಸಕ್ಕರೆ ಮಾಡಬೇಕಾದರೆ, ಆ ಪಾಕದೊಳಗೆ ದಿಂಡಲ ಬೂದಿಯನ್ನಾಗಲಿ, ರಾಗೀ ಹಿಟ್ಟು ಆಗಲಿ ಹಾಕುತ್ತಾರೆ. ಅದರಿಂದ ಪಾಕದೊಳಗಿನ ಕಸರು ಮೇಲಕ್ಕೆ ಬರುವದು; ಅದನ್ನು ಸವಟುಗಳಿಂದ ತೆಗೆದು ಚೆಲ್ಲುತ್ತಾರೆ; ಹೀಗೆ ಮಾಡುವದರಿಂದ ಪಾಕವು ಸ್ವಚ್ಛವಾಗುವದು. ಪೂರ್ಣ ಅಡಿಗೆಯಾದ ಬಳಿಕ ಆ ಪಾಕವನ್ನು ತಿಕ್ಕಿ ತಿಕ್ಕಿ ಒಣಗಿಸಿದರೆ ಸಕ್ಕರೆಯಾಗುತ್ತದೆ. ಪಾಕದೊಳಗಿನ ಕಸರು ತೆಗತೆಗದ ಹಾಗೆ ಸಕ್ಕರೆ ಹೆಚ್ಚು ಬೆಳ್ಳಗಾಗುವದು.

ಎಳಗುಡೀ ಸಕ್ಕರೆ ಚಿಕ್ಕೋಡಿ, ನಿಪ್ಪಾಣಿ ಮುಂತಾದ ಊರುಗಳಲ್ಲಿ ಹುಟ್ಟುತ್ತದೆ. ಮಗುದುಮ್ಮಿ ಸಕ್ಕರೆ ಖಾನಾಪುರ, ಹಾನಗಲ್ಲು, ಎಲ್ಲಾಪುರ ಮುಂತಾದ ಸ್ಥಳಗಳಲ್ಲಿ ಆಗುತ್ತದೆ. ಇನ್ನೊಂದು ಪ್ರಕಾರದ ಮಗುದುಮ್ಮಿ ಸಕ್ಕರೆ ಬಳ್ಳಾರಿ, ಕೊಯಿಮುತ್ತೂರುಗಳಲ್ಲಿ ಆಗುವದು. ನೀಲಗಿರಿ, ಕಲಕತ್ತೆಗಳಲ್ಲಿ ಸಕ್ಕರೆಯನ್ನು ಸ್ವಚ್ಛ ಮಾಡುವ ಕಾರಖಾನೆಗಳುಂಟು. ವಸಯಿ, ರಾಜಾಪುರ, ಪಟ್ಟಣ ಮುಂತಾದ ಸ್ಥಳಗಳಲ್ಲಿ ಸಕ್ಕರೆಯನ್ನು ಮಾಡುತ್ತಾರೆ; ಆದರೆ ಅದು ಬಹಳ ಚೆಲೋದಲ್ಲ. ಉತ್ಕೃಷ್ಟವಾದ ಸಕ್ಕರೆಯು ಬಂಗಾಲ, ಚೀನ, ಅಮೇರಿಕಗಳಲ್ಲಿ ಆಗುತ್ತದೆ. ಅಲ್ಲಿ ಸಕ್ಕರೆ ಮಾಡುವ ಯಂತ್ರಗಳುಂಟು; ಆ ಯಂತ್ರ

ಗಳಿಂದ ಸಾವಿರಾರು ಖಂಡಗ ಕಲ್ಲಸಕ್ಕರೆಯನ್ನೂ ಪುಡಿಸಕ್ಕರೆಯನ್ನೂ ಮಾಡುತ್ತಾರೆ; ಬಳಿಕ ಅದನ್ನು ಸಂದುಕಗಳೊಳಗಾಗಲಿ, ಚೀಲುಗಳೊಳಗಾಗಲಿ ತುಂಬಿ ಹಡಗದೊಳಗೆ ಹಾಕಿ ಮಾರಾಟದ ಸಲುವಾಗಿ ದೂರ ದೂರ ದೇಶಕ್ಕೆ ಕಳಿಸುತ್ತಾರೆ. ಔಷಧಗಳೊಳಗೂ ಪಕ್ವಾನ್ನಗಳೊಳಗೂ ಬಹುತರವಾಗಿ ಸಕ್ಕರೆ ಹಾಕುತ್ತಾರೆ. ಸಾಧಾರಣವಾಗಿ ಸಕ್ಕರೆಯು ಎಲ್ಲರಿಗೂ ಬೇಕಾದ ಪದಾರ್ಥವು. ಸವಿ ಪದಾರ್ಥಗಳೊಳಗೆ ಇದೇ ಹೆಚ್ಚಿನದು. ಕಬ್ಬಿನ ರಸದ ಹೊರ್ತು ತಾಳೇ ಮರದ ರಸದಿಂದಲೂ, ಜೋಳದ ದಂಟಿನ ರಸದಿಂದಲೂ, ಬೇರೆ ವನಸ್ಪತಿಗಳ ರಸದಿಂದಲೂ ಸಕ್ಕರೆಯನ್ನು ಮಾಡುತ್ತಾರೆ. ಆದರೆ ಅದು ಕಬ್ಬಿನ ರಸದಿಂದಾದ ಸಕ್ಕರೆಯಷ್ಟು ಸವಿಯಲ್ಲ.

## ೩೦ನೇ ಪಾಠ.

### ಕತ್ತೆ.



ಕತ್ತೆಗಳೂ ಕುದುರೆಗಳೂ ಒಂದೇ ವರ್ಗದೊಳಗಿನವು; ಅವುಗಳ ಹೋಲುವಿಕೆಯಾದರೂ ಹಾಗೇ ಉಂಟು. ಇವುಗಳ ಮೂಲಸ್ಥಾನವು ಏಶಿಯಾ ಖಂಡದ ಮಧ್ಯಭಾಗವು. ತಾರ್ತರೀ ದೇಶದೊಳಗಿನ ಗುಡ್ಡಗಾಡುಗಳಲ್ಲಿಯೂ, ಇರಾಣ ಅರ್ಬಸ್ಥಾನಗಳ ಅಡವಿಗಳಲ್ಲಿಯೂ ಕಾಡುಗತ್ತೆಗಳು ಹಿಂಡುಗಟ್ಟಿ ತಿರುಗುತ್ತವೆ. ಮಳೆಗಾ

ಲದ ಕೊನೆಯಲ್ಲಿ ಸಾವಿರಾರು ಕಾಡುಗತ್ತೆಗಳು ಹಿಂದುಸ್ತಾನದೊಳಗೆ ಬಂದು ಕಾರ್ತಿಕ ಮಾಸದಲ್ಲಿ ಕಚ್ಛ, ಗುಜರಾಥ ನಾಡುಗಳೊಳಗೆ ಅಡ್ಡಾಡಿ, ಚೈತ್ರ ಮಾಸದಲ್ಲಿ ತಾರ್ತರೀ ದೇಶಕ್ಕೆ ತಿರಿಗಿ ಹೋಗುತ್ತವೆ. ದಕ್ಷಿಣ ಅಮೇರಿಕದೊಳಗಿನ ಅಡವಿಗಳಲ್ಲಿ ಕಾಡುಗತ್ತೆಗಳು ಬಹಳ ಉಂಟು. ಅವು ಅಲ್ಲಿಯವರಿಗೆ ಬಹಳ ತೊಂದರೆ ಕೊಡುತ್ತವೆ.

ಕತ್ತೆಯ ಕಿವಿ ಮಾತ್ರ ಕುದುರೆಯ ಕಿವಿಗಿಂತ ಉದ್ದ, ಜೋತಾಡುತ್ತಿರುತ್ತವೆ. ಸಾಕಿದ ಕತ್ತೆಗಳಿಗಿಂತ ಕಾಡುಗತ್ತೆಗಳು ದೊಡ್ಡವು, ಚಂದವಿರುತ್ತವೆ. ಇವುಗಳ ಮೈಮೇಲಿನ ಕೂದಲು ಬೆಳ್ಳಗೆ ಹೊಳೆಯುತ್ತವೆ. ಊರಕತ್ತೆಗಳ ಮೈಬಣ್ಣ ಬೂದಿಯ ಹಾಗೆ ಇರುತ್ತದೆ. ಕತ್ತೆಗಳ ಬೆನ್ನ ಮೇಲೊಂದು, ಹೆಗಲ ಮೇಲೊಂದು ಕರೇ ಕೂದಲ ಪಟ್ಟೆ ಇರುತ್ತದೆ. ಈ ನಾಡೊಳಗಿನ ಸಾಕಿದ ಕತ್ತೆಗಳು ದೊಡ್ಡ ಹೋತಿಗಿಂತ ಎತ್ತರ; ಸ್ಪೇನ ದೇಶದೊಳಗಿನ ಕತ್ತೆಗಳು ಇರಾಣೀ ಕುದುರೆಗಳ ಹಾಗೆ ಏಳು ಗೇಣು ಎತ್ತರವಿರುತ್ತವೆ; ಘಟ್ಟಿತನದಿಂದಲೂ ಆಕಾರದಿಂದಲೂ ಹಾಗೇ ಇರುವವು. ಅವು ಕುದುರೆಗಳಂತೆ ಮನುಷ್ಯರ ಕೆಲಸಕ್ಕೆ ಬೀಳುತ್ತವೆ. ಇಂಥಾ ಕತ್ತೆಗಳು ಒಮ್ಮೊಮ್ಮೆ ಸಾವಿರ ರೂಪಾಯಿ ತನಕ ಬೆಲೆಗಾಣುತ್ತವೆ.

ಕತ್ತೆಗಳು ಸಭ್ಯವಾಗಿ, ಕಷ್ಟಗಳನ್ನು ತಾಳುವವಾಗಿ, ತಿಪ್ಪಿಯ ಮೇಲಿನ ಕಸಕಡ್ಡಿಗಳನ್ನು ತಿಂದು ಬದುಕುವವು. ಕತ್ತೆಯ ಧ್ವನಿ ಬಹು ಕರ್ಕಶವು.

ಅಡವೀ ಕತ್ತೆಗಳ ಕಿವಿ ಬಹು ತೀಪ್ರ ಕೇಳುತ್ತವೆ; ಮತ್ತು ಅವುಗಳಿಗೆ ವಾಸನೆಯಾದರೂ ಬೇಗ ತಿಳಿಯುತ್ತದೆ. ಅದರಿಂದ ಅವು ಮನುಷ್ಯರ ಕೈಗೆ ಬೇಗ ಸಿಗುವದಿಲ್ಲ. ಇವು ಶಿಟ್ಟಿಳ್ಳವಾದಾಗ್ಯೂ ಒಮ್ಮೆ ಬೆನ್ನ ಮೇಲೆ ಒಜ್ಜೆ ಹೇರಿದ ಬಳಿಕ ಸುಮ್ಮನೇ ಹಾದೀ ಹಿಡಿದು ಹೋಗುತ್ತವೆ. ಅವು ತಮ್ಮ ಹಿಂಡಿನೊಳಗೆ ಕುದುರೆಗಳನ್ನು ಬರಗೊಡುವದಿಲ್ಲ. ಕುದುರೆಗಳಂತೆ ಕತ್ತೆಗಳಾದರೂ ತುಸು ನಿದ್ರೆ

ಮಾಡುತ್ತವೆ; ದಣಿದಿದ್ದರೆ ನೆಲದ ಮೇಲೆ ಬಿದ್ದುಕೊಂಡು ನಿದ್ರೆ ಮಾಡುವವು.

ಅಡವೀ ಕತ್ತೆಗಳು ಸೌಳು ಗಿಡಗಳನ್ನೂ, ಕಹಿ ಗಿಡಗಳನ್ನೂ, ಬಿರಸು ಹುಲ್ಲನ್ನೂ ತಿನ್ನುತ್ತವೆ. ಅವುಗಳಿಗೆ ಕುಡಿಯುವದಕ್ಕೆ ನೀರು ಮಾತ್ರ ನಿರ್ಮಲವಿರಬೇಕು.

ಕತ್ತೆಗಳು ಗಬ್ಬಾಗಿ ಹನ್ನೆರಡು ತಿಂಗಳಿಗೆ ಈಯುತ್ತವೆ. ಸರತಿಗೊಂದು ಮರಿ ಹುಟ್ಟುವದು. ಅವು ಮೂವತ್ತು ವರ್ಷ ಬದುಕುವವು. ಅವುಗಳ ಬೆಳವಣಿಗೆ ನಾಲ್ಕು ವರ್ಷ.

ಕತ್ತೆಗಳು ಬಡ ಮಂದಿಗೆ ಒಜ್ಜೆ ಹೇರುವದಕ್ಕೆ ಬರುತ್ತವೆ. ಸಾಮರ್ಥ್ಯಕ್ಕಿಂತ ಹೆಚ್ಚಿನ ಒಜ್ಜೆ ಇದ್ದರೂ ಅದನ್ನು ಹೊತ್ತುಕೊಂಡು ಸುಮ್ಮನೇ ಹೋಗುತ್ತವೆ. ಗುಡ್ಡದೊಳಗಿಂದಲೂ ಕಲ್ಲದಾರಿಯಿಂದಲೂ ಒಜ್ಜೆ ಹೊತ್ತುಕೊಂಡು ಹೋಗಬೇಕಾದರೆ, ಕುದುರೆಗಳಿಗಿಂತ ಕತ್ತೆಗಳೇ ಬೇಕು. ಹಲವು ಬೇನೆಗಳಿಗೆ ಕತ್ತೆಯ ಹಾಲು ಹಾಕುತ್ತಾರೆ.

---

## ೩೧ನೇ ಪಾಠ.

### ಹೋಳಕರ ಮಲ್ಹಾರರಾಯನೂ, ಚಿತ್ರಗಾರನೂ.

ಒಂದು ದಿವಸ ಹೋಳಕರ ಮಲ್ಹಾರರಾಯನು ತನ್ನ ಓಲಗದಲ್ಲಿ ಕುಳಿತಾಗ ಮಾತಿಗೆ ಮಾತು ಹೊರಟು, ಈ ಪಟ್ಟಣಕ್ಕೆ ಒಬ್ಬ ಮೇಲಾದ ಚಿತ್ರಗಾರನು ಬಂದಿದ್ದಾನೆಂದು ಒಬ್ಬ ಗೃಹಸ್ಥನು ಹೇಳಿದನು. ಅದನ್ನು ಕೇಳಿ ಹೋಳಕರನು—ಆ ಚಿತ್ರಗಾರನನ್ನು ನಮ್ಮ ಅರಮನೆಗೆ ಕರಕೊಂಡು ಬಾ ಎಂದು ಹೇಳಿದನು. ಮರುದಿನ ಆ ಗೃಹಸ್ಥನು ಆ ಚಿತ್ರಗಾರನನ್ನು ಕರೆದೊಯ್ದನು. ಆವಾಗ—ನಮ್ಮ ತಸಬೀರು ಬರೆಯುವಿಯಾ? ಎಂದು ಹೋಳಕರನು ಕೇಳಲು, ಆತನು—ಬರಕೊಂಡು ಬರುವೆನು ದೇವರು ಎಂದು ಹೇಳಿದನು.

ಒಳ್ಳೇದು, ಯಾವಾಗ ತರುವಿ? ಎಂದು ಕೇಳಿದ್ದಕ್ಕೆ—ನಾಳೆಗೇ ತರುವೆನು ದೇವರು ಎಂದು ಹೇಳಿ ಅಪ್ಪಣೆ ತಕ್ಕೊಂಡು ಹೊರಟುಹೋದನು. ಬಳಿಕ ಮನೆಗೆ ಬಂದು ಮನಸ್ಸಿನೊಳಗೆ—ತಸಬೀರು ಬರೆದು ನಾಳೆಗೇ ತರುತ್ತೇನೆಂದು ಒಪ್ಪಿಕೊಂಡಂತು ಬಂದೆನು; ಆದರೆ ಆತನದೊಂದು ಕಣ್ಣು ಕುರುಡದೆ, ಅದರ ಹಾಗೆಯೇ ಚಿತ್ರದಲ್ಲಿ ಬರೆದರೆ, ಒಂದು ವೇಳೆ ಆತನು ಸಿಟ್ಟಿಗೆದ್ದು ನನ್ನ ತಲೆ ಹೊಡಿಸುತ್ತಾನೆಲ್ಲಿಯೋ? ಎಂದು ಮನದೊಳಗೆ ಅಳದು ಹಾಕುತ್ತಾ ಕುಳಿತನು. ಅಷ್ಟರೊಳಗೆ ಅವನ ಮಗಳು ಅಲ್ಲಿಗೆ ಬಂದು ಇದನ್ನೆಲ್ಲ ಕೇಳಿಕೊಂಡು—ಅಯ್ಯಾ, ಇದಕ್ಕೆ ಯಾಕೆ ಇಷ್ಟು ಚಿಂತೆ ಮಾಡುತ್ತೀರಿ? ಅವನು ಗುರಿ ಹೊಡಿಯುತ್ತಾನೆ ಅನ್ನುವ ಹಾಗೆ ಚಿತ್ರವ ಬರೆಯಿರಿ, ಅಂದರೆ ಆಯಿತು. ಗುರಿ ಹೊಡೆಯುವಾಗ ಯಾರಾದರು ಒಂದು ಕಣ್ಣು ಮುಚ್ಚೇ ಮುಚ್ಚುತ್ತಾರೆ. ಈ ಮೇರಿಗೆ ಮಗಳು ಹೇಳಿದ ಹಂಚಿಕೆಗೆ ಆತನು ಸಂತೋಷ ಪಟ್ಟು, ಅದರಂತೆಯೇ ಚಿತ್ರ ಬರೆದು ಮರುದಿವಸ ಹೋಳಕರನಿಗೆ ಒಯ್ದು ಕೊಟ್ಟನು. ಅದನ್ನು ನೋಡಿ ಹೋಳಕರನು ಬಹು ಆನಂದ ಪಟ್ಟು, ಆತನಿಗೆ ಬೇಕಾದಷ್ಟು ಹಣ ಕೊಟ್ಟು ಕಳುಹಿದನು.

---

## ೩೨ನೇ ಪಾಠ.

### ಕಿವಡಿಯೂ ಮೂಕಿಯೂ ಆದ ತಾಯಿ.

ನೂರಾರು ವರ್ಷದ ಮುಂಚೆ ವಿಲಾಯತಿಯಲ್ಲಿ ಒಬ್ಬ ಧೊರಿ ಇದ್ದನು; ಆತನಿಗೆ ಹುಟ್ಟಗಿವಡಿಯೂ ಮೂಕಿಯೂ ಆದ ಒಬ್ಬ ಮಗಳು ಇದ್ದಳು. ಆಕೆ ಹರೆಯಕ್ಕೆ ಬಂದ ಕೂಡಲೆ ಅವಳನ್ನು ಅವಳ ತಂದೆ ಮದುವೆ ಮಾಡಿಕೊಟ್ಟನು. ಮದುವೆಯಾಗುವಾಗ ಮದುಮಗಳು ಅನ್ನತಕ್ಕದ್ದನ್ನೆಲ್ಲ ಆಕೆ ಸನ್ನೆಗಳಿಂದ ತಿಳಿಸಿದಳು;

ಆಕೆಗೆ ಹೇಳತಕ್ಕ ಮಾತುಗಳನ್ನೆಲ್ಲಾ ಮದುಮಗನೂ ಪುರೋಹಿತನೂ ಸನ್ನೆಗಳಿಂದ ತಿಳಿಸಿದರು.

ಮುಂದೆ ಕೆಲವು ವರುಷಗಳ ತರುವಾಯ ಆಕೆಗೆ ಒಂದು



ಕೂಸು ಹುಟ್ಟಿತು; ಅದನ್ನು ಆಕೆ ಬಹು ಪ್ರೀತಿಯಿಂದ ಜೋಪಾನ ಮಾಡುತ್ತಿದ್ದಳು. ಒಂದು ದಿನ ಆ ಕೂಸು ತೊಟ್ಟಿಲೊಳಗೆ ಮಲಗಿದಾಗ ಮನೆಯ ತೊತ್ತು ತೊಟ್ಟಿಲ ಬಿಟ್ಟು ತುಸು ದೂರ ಏನೋ ಕೆಲಸ ಮಾಡುತ್ತಿದ್ದಳು. ಅಷ್ಟರೊಳಗೆ ಆ ಮೂಕಿ ಮನಸ್ಸಿನೊಳಗೆ ಏನೋ ಯೋಚಿಸಿಕೊಂಡು, ಸಪ್ಪಳ ಮಾಡದೆ ಮೆಲ್ಲನೆ ಆ ತೊಟ್ಟಿಲ ಹತ್ತರ ಹೋದಳು; ಅದನ್ನು ಕಂಡು, ಮುಂದೆ ಈಕೆ ಏನು ಮಾಡುತ್ತಾಳೆ ನೋಡಬೇಕೆಂದು ಆ ತೊತ್ತು ಅತ್ತಕಡೆಗೇ ನೋಡುತ್ತ ನಿಂತುಕೊಂಡಳು.

ಅಷ್ಟರೊಳಗೆ ಆ ಮೂಕಿಯು ಮೊದಲು ತೊಟ್ಟಿಲೊಳಗೆ ಹಣಿಕಿ ನೋಡಿ ಕೂಸಿಗೆ ಗಡದು ನಿದ್ದೆ ಹತ್ತಿದ್ದನ್ನು ತಿಳಿದು, ತನ್ನ ಸೆರಗಿನೊಳಗೆ ಮುಚ್ಚಿಕೊಂಡು ತಂದದ್ದೊಂದು ಕಲ್ಲು ಹೊರಗೆ ತೆಗೆದಳು. ಅದನ್ನು ಕಂಡು, ಕೂಸಿನ ತಲೆಯ ಮೇಲೆ ಕಲ್ಲು ಚಲ್ಲಿ ಈಕೆ ಆದನ್ನು ಕೊಲ್ಲುತ್ತಾಳೋ ಏನೋ ಎಂದು ಆ ತೊತ್ತು ಹೆದರಿದಳು.

ಮೂಕರು ಮೋಸಗಾರರಿರುತ್ತಾರೆಂದು ಹೆಡ್ಡರು ತಿಳಿಯು ತ್ತಾರೆ. ಅದರಂತೆಯೇ ಈ ತೊತ್ತಾದರು ತಿಳುಕೊಂಡಳು. ಅಗ ಹಾಗೆ ತಿಳುಕೊಳ್ಳುವದಕ್ಕೆ ತಕ್ಕ ಕಾರಣವೂ ಇತ್ತು.

ಆದದರಿಂದ ಆಕೆ ಓಡುತ್ತ ಹತ್ತರ ಬಂದು ಆ ಮೂಕಿಯು ಕೈ ಹಿಡಿಯುವಷ್ಟರೊಳಗೇ ಆಕೆ ಮೇಲಕ್ಕೆ ಕೈಯೆತ್ತಿ ಕಸುವಿನಿಂದ ಆ ಕಲ್ಲು ನೆಲಕ್ಕೆ ಅಪ್ಪಳಿಸಿದಳು. ಆ ಸಪ್ಪಳಕ್ಕೆ ಕೂಸು ಅಡಬಡಿಸಿ ಎಚ್ಚತ್ತಿತು. ಅದನ್ನು ಕಂಡು ಆ ತಾಯಿಗೆ ಬಹಳ ಆನಂದವಾ ಯಿತು. ಆನಂದದ ಭರದಿಂದ ಆಕೆ ಆಕಾಶದ ಕಡೆಗೆ ಕೈಯೆತ್ತಿ ದೇವರನ್ನು ಮನಸ್ಸಿನೊಳಗೆ ಕೊಂಡಾಡಿದಳು.

ದುರ್ದೈವದಿಂದ ತನಗೆ ಇಲ್ಲದ ಇಂದ್ರಿಯಗಳನ್ನು ದೇವರು ತನ್ನ ಕೂಸಿಗೆ ಕೊಟ್ಟಿದ್ದಾನೋ ಇಲ್ಲವೋ ನೋಡಬೇಕೆಂದು ಆಕೆ ಯ ಮನದೊಳಗೆ ಇತ್ತು. ಅವು ಉಂಟೆಂಬದಾಗಿ ತಿಳುಕೊಂಡು ಆಕೆಯು ದೇವರ ಉಪಕಾರವನ್ನು ನೆನಿಸಿದಳು. ಆಕೆಯ ಜಾಣತ ನದ ಬಗ್ಗೆ ಈ ತರದ ಹಲವು ಮಾತುಗಳು ಉಂಟು; ಆದರೆ ಈ ಮಾತು ಬಹಳ ಮನೋರಂಜಕವಿದ್ದದರಿಂದ ಇಲ್ಲಿ ಬರೆದಿದ್ದೇವೆ.

---

## ೩೩ನೇ ಪಾಠ.

### ಜಾಜೀಕಾಯಿಯ ಗಿಡ.

ಏಸಿಯಾ ಖಂಡದ ಪೂರ್ವಕ್ಕೆ ಮಲಕ್ಕಾ ನಡುಗಡ್ಡೆಗಳಲ್ಲಿ ಜಾಜೀಕಾಯಿಯ ಗಿಡಗಳು ಹುಟ್ಟುತ್ತವೆ. ಆ ನಡುಗಡ್ಡೆಗಳಲ್ಲಿ ಬಾಂಡಾ ಎಂಬದರಲ್ಲಿ ಆ ಗಿಡಗಳು ಬಹಳ. ಅಲ್ಲಿಯ ಹಾಗೆ ಮತ್ತೆಲ್ಲಿಯೂ ಆಗುವದಿಲ್ಲ. ಈ ದೇಶದಲ್ಲಿ ಕೆಲವು ಸ್ಥಳಗಳಲ್ಲಿ ಜಾಜೀಕಾಯಿಯ ಗಿಡಗಳು ಉಂಟು; ಆದರೆ ಅಲ್ಲಿಯ ಹಾಗೆ ಕಾಯಿ ಆಗುವದಿಲ್ಲ.

ಜಾಜೀಕಾಯಿಯ ಗಿಡಗಳು ಬಹು ಚಂದ, ಶ್ರಾವಣದಿಂದ

ಭಾದ್ರಪದದ ತನಕ ಹಣ್ಣಾಗುತ್ತವೆ. ಆ ಹಣ್ಣು ಹಳದೀ ಬಣ್ಣದವು; ಹಣ್ಣಿನ ಸುತ್ತು ಜಾಪತ್ರಿ ಇರುವದು; ಅದರ ಬಣ್ಣ ನಸುಗೆಂಪು, ಜಾಜೀಕಾಯಿಯ ಮೇಲೆ ಚಿಪ್ಪು ಇರುತ್ತದೆ. ಪಕ್ವವಾದ ಮೇಲೆ ಹಣ್ಣು ಉದರಿಸಿಕೊಂಡು, ಮೇಲಿನ ಚಿಪ್ಪು ತೆಗೆದು ಒಳಗಿನ ಪತ್ರೀ ಎಬ್ಬಿಸಿಕೊಂಡು ಬಿಸಲೊಳಗೆ ಒಣಗಿಸುತ್ತಾರೆ.

ಮಲಕ್ಕಾ ನಡುಗಡ್ಡೆಗಳನ್ನು ದಚ್ಚರು ಆಳುತ್ತಾರೆ. ಅವರು ಅಲ್ಲಿ ತೋಟಿಗರ ಕೈಯಿಂದ ಜಾಜೀಕಾಯಿಯ ಗಿಡಗಳನ್ನು ಹಚ್ಚಿಸಿ ಬೆಳಿಸುವರು. ಅವರು ಪೂರ್ವದಲ್ಲಿ ಜಾಜೀಕಾಯಿ ಬಹಳ ಬೆಳದರೆ ಅಗ್ಗವಾಗುವವೆಂದು, ಮಾರಾಟಕ್ಕೆ ಬೇಕಾದಷ್ಟು ಇಟ್ಟುಕೊಂಡು ಉಳಿದ ಕಾಯಿಗಳನ್ನು ಸುಡಿಸಿಬಿಡುತ್ತಿದ್ದರಂತೆ. ನೋಡಿರಿ, ಹಣದಾಶೆಗಾಗಿ ಮಾಡಿದ ದುಷ್ಟತನ.

---

## ೩೪ನೇ ಪಾಠ.

### ಆಜ್ಞೆ.

ತಂದೆ—ಮಗಳೇ, ಆಜ್ಞೆಯೆಂದರೇನು, ಬಲ್ಲಿಯಾ?

ಮಗಳು—ಬಲ್ಲೆನಯ್ಯಾ; ಆಜ್ಞೆಯೆಂದರೆ ಅಪ್ಪಣೆ. ಇದನ್ನು ಮಾಡು, ಅದನ್ನು ಮಾಡಬೇಡ ಎಂದು ಹಿರಿಯರು ಕಿರಿಯರಿಗೆ ಹೇಳುವದೇ ಆಜ್ಞೆ ಎಂದು ನಮ್ಮ ಅಯ್ಯನವರು ನಮಗೆ ಹೇಳಿದ್ದಾರೆ.

ತಂ.—ಒಳ್ಳೇದು ಮಗಳೇ, ನೀನು ನನ್ನ ಅಪ್ಪಣೆಯನ್ನು ಪಾಲಿಸುವಿಯಾ?

ಮ.—ಪಾಲಿಸುವೆನಯ್ಯಾ. ಹೆತ್ತವರ ಮಾತು ಕೇಳಬೇಕೆಂದು ನಮ್ಮ ಅಯ್ಯನವರು ಆಗಾಗ್ಗೆ ಹೇಳುತ್ತಾರೆ.

ತಂ.—ನೀನು ನಿನ್ನ ಮನಸ್ಸಿನೊಳಗೆ ಮಾಡಬೇಕೆಂದು ಬಯಿಸಿದ್ದನ್ನು ಮಾಡಬೇಡೆಂದರೆ ಕೇಳುವಿಯಾ?

ಮ.—ಕೇಳುವೆನಯ್ಯಾ. ನಿಮ್ಮ ಅಪ್ಪಣೆಗಿಂತ ನನ್ನ ಮನಸ್ಸಿಗೆ ಬಂದದ್ದು ಒಳ್ಳೇದಾದೀತೇ?

ತಂ.—ನಿನ್ನ ಮನಸ್ಸಿಗೆ ಬಾರದ್ದನ್ನು ಮಾಡಬೇಕೆಂದು ಹೇಳಿದರೆ ಹ್ಯಾಗೆ?

ಮ.—ಅದನ್ನೂ ಮಾಡುವೆನು. ಅದರಿಂದ ಒಳಿತಾಗಲಿ, ಕೇಡಕಾಗಲಿ, ನನಗೆ ನಿಮ್ಮ ಅಪ್ಪಣೆಯೇ ಮಾನ್ಯವು.

ತಂ.—ಮತ್ತೂ ಯಾರ್ಯಾರ ಅಪ್ಪಣೆ ಪಾಲಿಸಬೇಕು, ತಂಗಮ್ಮಾ?

ಮ.—ವಿದ್ಯ ಕಲಿಸುವ ಅಯ್ಯನವರ ಅಪ್ಪಣೆಯನ್ನೂ, ಒಡೆಯನ ಅಪ್ಪಣೆಯನ್ನೂ, ಅರಸನ ಅಪ್ಪಣೆಯನ್ನೂ ಪಾಲಿಸಬೇಕು.

ತಂ.—ನೀನು ಹೇಳಿದ್ದೆಲ್ಲ ಸರಿ, ಆದರೆ ಇವರ ಹೊರ್ತು ಮತ್ತೂ ಯಾರ ಆಜ್ಞೆ ಪಾಲಿಸುವ ಹಾಗಿಲ್ಲವೋ?

ಮ.—ಇದ್ದೀತಯ್ಯಾ, ಅದು ಮಾತ್ರ ನನಗೆ ತಿಳಿಯದು; ನೀವೇ ದಯೆಮಾಡಿ ಹೇಳಬೇಕು.

ತಂ.—ಮಗಳೇ, ನಿನ್ನ ಧ್ಯಾನಕ್ಕೆ ಬರಬೇಕು, ಯಾಕೆ ಬರಲೊಲ್ಲದೋ ತಿಳಿಯದು. ಒಳ್ಳೇದು, ಹೇಳುತ್ತೇನೆ, ಕೇಳು. ನಮ್ಮನ್ನು ಹುಟ್ಟಿಸಿದಾತನು ದೇವರು; ಯಾವಾಗಲೂ ಸಲಹುವಾತನು ಆತನೇ; ಆದದರಿಂದ ನಾವು ಮೊದಲು ಆತನ ಆಜ್ಞೆಯನ್ನು ಪಾಲಿಸಬೇಕು.

ಮ.—ಸೈ ಸೈ ಅಯ್ಯಾ, ಇದನ್ನು ನಾನು ಮರೆತಿದ್ದೆನು. ನನಗೆ ನೆನಪು ಇದ್ದಿಲ್ಲ. ಇನ್ನು ಮೇಲೆ ಈ ಮಾತು ನಾನು ಮರೆಯುವದಿಲ್ಲ.

---


## ೩೫ನೇ ಪಾಠ.

### ಕುದುರೆ.

ಕುದುರೆಗಳು ಬಹಳ ಚಳಿಯ ಪ್ರದೇಶಗಳ ಹೊರ್ತು ಬಹುತರವಾಗಿ ಎಲ್ಲ ನಾಡುಗಳಲ್ಲಿ ಉಂಟು. ಇವುಗಳ ಮೂಲಸ್ಥಾನವು ಏಸಿಯಾ ಖಂಡವು.

ಎಲ್ಲ ನಾಡುಗಳ ಕುದುರೆಗಳೊಳಗೆ ಅರಬಸ್ಥಾನದ ಕುದುರೆಗಳು ಮೇಲು. ಅವು ಬಹಳ ಚಂದವಿರುತ್ತವೆ; ಅವುಗಳಲ್ಲಿ ದಿಟ್ಟತನವೂ ಚುರುಕುತನವೂ ವಿಶೇಷ.


ಕುದುರೆಗಳು ಐಗೇಣಿನಿಂದ ಎಂಟು ಗೇಣಿನ ತನಕ ಎತ್ತರವಿರುತ್ತವೆ ಪಶುಗಳೊಳಗೆ ಕುದುರೆಯ ಹಾಗೆ ಚಂದವೂ ಘಟ್ಟಿಯೂ



ಯಾವವೂ ಅಲ್ಲ. ಇದರ ಕಣ್ಣು ದೊಡ್ಡವು, ಕಿವಿ ಯಾವಾಗಲೂ ನಿಗರಿರುತ್ತವೆ; ಆದದರಿಂದ ಇದರ ಮೋರೆ ಬಹು ಚಂದ ಕಾಣಿಸುತ್ತದೆ. ಇದರ ತಲೆ ಕುತ್ತಿಗೆಗಳ ಮೇಲೆ ಉದ್ದಗೂದಲು ಇರುತ್ತವೆ; ಬಾಲದ ಮೇಲಿನ ಕೂದಲು ಚವರಿಯಂತೆ ಒಪ್ಪುವವು. ಕುದುರೆಗಳ ಕೊಳಗು ಅಖಂಡವು, ಕಾಲು ಸಣ್ಣವಾಗಿ ಘಟ್ಟಿ ಇರುವದರಿಂದ ಅವು ತೀವ್ರ ನಡೆಯುತ್ತವೆ. ಬಿಳೇವು, ಕರೇವು, ಮಸಕ, ಬೂದಿಬಣ್ಣದವು, ಕೆಂಪು, ಎಣ್ಣೆಗೆಂಪು, ಜರ್ದಾ, ಸಾರಂಗ ಎಂಬದಾಗಿ ಹಲವು ಬಣ್ಣದ ಕುದುರೆಗಳುಂಟು. ಕೆಲವು ಕುದುರೆಗಳ ಮೈಮೇಲೆ ತರತರದ ಚಿಕ್ಕಿಗಳು ಇರುತ್ತವೆ.

ಕುದುರೆಗಳು ಕಡಿವಾಣಕ್ಕೆ ಅಳುಕುತ್ತವೆ; ಎಷ್ಟು ದಣುವಾದರೂ ಅವು ತಾಳಿಕೊಳ್ಳುವವು. ಅವು ಕಲಿಸಿದಂತೆ ಕಲಯುವವು. ಅರಬರು ಕುದುರೆಗಳನ್ನು ಮಕ್ಕಳಂತೆ ಪಾಲಿಸುತ್ತ ತಮ್ಮ ಗುಡಾರಗಳೊಳಗೇ ಕಟ್ಟಿಕೊಳ್ಳುತ್ತಾರೆ.

ಸಾದಾ ನಡಿಗೆ, ದುಡಕಿ, ನಾಗಾಲೋಟಗಳೆಂಬದಾಗಿ ಕುದುರೆಗಳಿಗೆ ಮೂರು ಹುಟ್ಟನಡಿಗೆಗಳು; ಇವುಗಳ ಹೊರ್ತು ಕಲಿಸಿದ



ಹಾಗೆ ತರತರದ ನಡಿಗೆಗಳನ್ನು ಕಲಿಯುತ್ತವೆ. ಕುದುರೆಗಳು ಒದರಿದರೆ, ಹ್ಯಾಕರಿಸುತ್ತವೆ ಅನ್ನುತ್ತಾರೆ.

ದಕ್ಷಿಣ ಅಮೇರಿಕದೊಳಗಿನ ದೊಡ್ಡ ದೊಡ್ಡ ಬೈಲುಗಳಲ್ಲಿ ಕಾಡುಗುದುರೆ ಬಹಳ. ಸೈಬೀರಿಯಾ ದೇಶದ ತೆಂಕಣ, ಚಿನಾಯಿ ತಾರ್ತರಿ, ಆಫ್ರಿಕಾ ಖಂಡ ಮುಂತಾದ ನಾಡುಗಳಲ್ಲಿ ಕಾಡುಗುದುರೆಗಳು ಹಿಂಡುಗಟ್ಟಿ ತಿರುಗುತ್ತವೆ. ಅವು ಗಿಡದ ಗುಂಪಿನೊಳಗೂ ಗುಡ್ಡಗಾಡಿನಲ್ಲಿಯೂ ಮಾತ್ರ ಇರುವದಿಲ್ಲ; ಇಳಕಲ ಬೈಲೊಳಗೆ ಇರುತ್ತವೆ. ಅವುಗಳಲ್ಲಿ ಮುಖ್ಯವಾದದ್ದೊಂದು ಕುದುರೆ ಹಿಂಡಿನ ಮುಂದೆ ಇರುತ್ತದೆ; ಅದರ ಸೂಚನೆಯಂತೆ ಎಲ್ಲ ಕುದುರೆಗಳು ನಡಕೊಳ್ಳುವವು. ಏನಾದರು ಹೆದರಿಕೆಯ ಸುಳುವು ಕಂಡರೆ, ಆ ಮುಂದಿನ ಕುದುರೆ ಹ್ಯಾಕರಿಸಿ ಉಳಿದ ಕುದುರೆಗಳಿಗೆ ತಿಳಿಸುತ್ತದೆ, ಕೂಡಲೆ ಅವು ಓಡಿ ಹೋಗುವವು.

ಕುದುರೆಗಳು ಹುಲ್ಲು ಮೇಯುತ್ತವೆ; ಅದು ದೊರೆಯದಾಗ ಗಿಡದ ಚಿಗುರುಗಳನ್ನು ತಿನ್ನುವವು; ಕರಿಕೆಯ ಮೊಳಕೆಗಳನ್ನು ಸಹ ಮೇದು ಬದುಕುತ್ತವೆ; ಅವುಗಳಿಗೆ ಕುಡಿಯಲಿಕ್ಕೆ ನೀರು ಬಹಳ ಬೇಕು. ಅವು ದನಗಳಂತೆ ಮೆಲಕಾಡಿಸುವದಿಲ್ಲ; ಮೊದಲು ದವಡಿಗಳಿಂದ ನುರಿಸಿ, ಆ ಮೇಲೆ ನುಂಗುತ್ತವೆ. ಅವು ಹಲವು ತರದ ಕಾಳು ತಿನ್ನುತ್ತವೆ.

ಕುದುರೆಗಳು ಗಬ್ಬಾಗಿ, ಹನ್ನೊಂದು ತಿಂಗಳಿಗೆ ಈಯುತ್ತವೆ. ಸರತಿಗೆ ಹೆಣ್ಣಾಗಲಿ, ಗಂಡಾಗಲಿ ಒಂದು ಮರಿ ಹುಟ್ಟುವದು. ಕುದುರೆಗಳು ಮೂವತ್ತು ವರ್ಷ ಬದುಕುತ್ತವೆ. ಕುದುರೆಗಳ ಹಲ್ಲು ನೋಡಿ ಅವುಗಳ ವಯಸ್ಸು ಹೇಳುತ್ತಾರೆ. ಅವುಗಳ ಬೆಳವಣಿಗೆ ನಾಲ್ಕು ವರ್ಷ.

ಹತ್ತಿ ಪ್ರಯಾಣ ಮಾಡುವದಕ್ಕೂ, ರಥಕ್ಕೆ ಹೂಡುವದಕ್ಕೂ, ಒಜ್ಜೆಯನ್ನು ಹೇರುವದಕ್ಕೂ, ಕುದುರೆಯ ಹಾಗೆ ಮನುಷ್ಯರ ಕೆಲಸಕ್ಕೆ ಬೀಳುವ ಪಶುಗಳು ಬೇರೆ ಯಾವವೂ ಇಲ್ಲ.

# ೩೬ನೇ ಪಾಠ.

## ಸ್ಲೇಟು.

ಮುಂಚೆ ಸಾಲೆಯ ಹುಡುಗರು ಹಲಗೆಯ ಮೇಲೆ ಕೆಮ್ಮಣ್ಣು ಹಾಕಿ, ಬಿದರ ಲೆಕ್ಕಣಿಕೆಯಿಂದ ಬರೆಯುತ್ತಿದ್ದರು. ಆದರೆ ಇತ್ತಿತ್ತ ಸ್ಲೇಟುಗಳ ಮೇಲೆ ಬರೆಯಹತ್ತಿದ್ದಾರೆ.

ಸ್ಲೇಟುಗಳು ಕಲ್ಲಿನವು; ಹಲಗೆಗಳಿಗಿಂತ ನುಣುಪು ಇರುತ್ತವೆ; ಅವುಗಳ ಮೇಲೆ ಅದೇ ಜಾತಿಯ ಕಲ್ಲಿನ ಪೆನಸಲಿನಿಂದ ಬರೆಯುತ್ತಾರೆ. ಸ್ಲೇಟುಗಳು ಸಾಧಾರಣವಾಗಿ ಕಪ್ಪು ಇರುತ್ತವೆ; ಅವುಗಳ ಮೇಲೆ ಬರೆದ ಅಕ್ಷರಗಳು ಚನ್ನಾಗಿ ಎದ್ದು ಕಾಣಿಸುವವು.

ಸ್ಲೇಟಿನ ಕಲ್ಲುಗಳನ್ನು ಕಣಿಗಳೊಳಗಿಂದ ಅಗಿದು ತೆಗೆಯುತ್ತಾರೆ; ಈ ಕಲ್ಲು ಬಹಳ ಮಿದುವು; ಆದರೂ ತಾಳುತ್ತವೆ. ಈ ಕಲ್ಲುಗಳೊಳಗೆ ಪದರುಗಳು ಇರುವದರಿಂದ ಸುಲಭವಾಗಿ ಕೊರೆದು ಹಲಗೆ ಮಾಡುತ್ತಾರೆ. ಬಳಿಕ ಉಜ್ಜುಗೊರಡು ಆಡಿಸಿ ಆ ಹಲಗೆಗಳನ್ನು ನುಣುಪು ಮಾಡಿ ಚೌಕಟ್ಟಿನೊಳಗೆ ಕೂಡ್ರಿಸುವರು. ವ್ಯಾಪಾರಸ್ಥರು ಯುರೋಪ ಖಂಡದಿಂದಲೂ ಚೀನದಿಂದಲೂ ಸ್ಲೇಟುಗಳನ್ನು ಮಾರಾಟಕ್ಕೆ ತರಿಸುತ್ತಾರೆ. ಇಂಗ್ಲಂಡದಲ್ಲಿ ಮನೆಗಳ ಮೇಲೆ ಹಂಚು ಹಾಕುವಂತೆ ಸ್ಲೇಟುಗಳನ್ನು ಹಾಕುತ್ತಾರೆ.

ಹಿಂದುಸ್ತಾನದೊಳಗೂ ಸ್ಲೇಟಿನ ಕಣಿಗಳು ದೊರಕಿದ್ದಾವೆ. ಇದರ ವ್ಯಾಪಾರ ಪ್ರತಿ ವರ್ಷ ಸಾವಿರಾರು ರೂಪಾಯಿ ತನಕ ಆಗುತ್ತದೆ.

ಕಲಾದಗಿ, ರತ್ನಾಗಿರಿ, ಸಾವಂತವಾಡಿ, ಮಾಲವಣ, ಗೋವೆ ಮುಂತಾದ ಊರುಗಳ ಸಮೀಪದಲ್ಲಿಯೂ, ವಿಜಾಪೂರ ಜಿಲ್ಲೆಯಲ್ಲಿಯೂ ಒಂದು ತರದ ಸ್ಲೇಟುಗಳು ಕಣಿಗಳೊಳಗೆ ದೊರಕುತ್ತವೆ. ಆದರೆ ಅವೇನು ಅಷ್ಟು ಚೆಲೋ ಸ್ಲೇಟುಗಳಲ್ಲ. ಈ ಕಲ್ಲುಗಳಿಂದ ಬಟ್ಲ, ಬೋಗುಣಿ, ತಪೇಲಿ, ಭಕ್ಕರಿಹಂಚು, ತಾಟು ಮುಂತಾದ ಪಾತ್ರೆಗಳನ್ನು ಮಾಡುತ್ತಾರೆ. ಈ ಪಾತ್ರೆಗಳಿಗೆ ಕಲಗಡಿಗೆ, ಕಲಪರ್ಟಿಗಳೆನ್ನುವರು; ಇವು ಕಿಲುಬುವದಿಲ್ಲ.

## ೩೭ನೇ ಪಾಠ.

### ಸಿಟ್ಟು ಕಳೆಯುವ ಹಂಚಿಕೆ.

ಒಂದು ಹಳ್ಳಿಯೊಳಗೆ ಒಬ್ಬ ಕೂಲಿಕಾರನು ಬಹಳ ಸಿಟ್ಟಿನವನಿದ್ದನು. ಅವನು ಅಷ್ಟಕ್ಕೆ ಇಷ್ಟಕ್ಕೆ ಸಿಟ್ಟಿಗೆದ್ದ ಕೂಡಲೆ ಅವನ ಹೆಂಡತಿ ಎದುರುತ್ತರ ಕೊಡುವಳು; ಅದರಿಂದ ಅವನು ಮತ್ತಿಷ್ಟು ಸಿಟ್ಟಿಗೆದ್ದು ಅವಳನ್ನು ಆಗಾಗ್ಗೆ ಬಡಿಯುವನು; ಆದದರಿಂದ ಅವಳು ಬಹಳ ಕಷ್ಟದಿಂದ ಸಂಸಾರ ಮಾಡುತ್ತಿದ್ದಳು. ಅವರ ನೆರೆಮನೆಯಲ್ಲಿ ಒಬ್ಬ ಮುದುಕಿ ಇದ್ದಳು. ಆಕೆ ಬಹಳ ಜಾಣಳಿದ್ದದರಿಂದ ಮಂದಿಯ ಸ್ವಭಾವಗಳನ್ನು ತಿಳುಕೊಂಡು, ಎಲ್ಲ ಕೆಲಸಗಳ ಬಗ್ಗೆ ಹಿಂದೆ ಮುಂದೆ ನೋಡಿ ಚನ್ನಾಗಿ ವರ್ತಿಸುತ್ತಿದ್ದಳು. ಒಂದು ದಿನ ಗಂಡನು ಬಹಳ ಬಡಿದದರಿಂದ ಆ ಪ್ರಾಣಿಯು ನೆರೆಮನೆಯ ಮುದಕೀ ಮನೆಗೆ ಹೋಗಿ—ಅಮ್ಮಾ, ನನ್ನ ಗಂಡನು ದಿನಾಲು ನನ್ನನ್ನು ಬಡಿಯುತ್ತಾನೆ; ಮನೆಯೊಳಗೆ ನನ್ನ ಜೀವಕ್ಕೇನು ಸುಖವಿಲ್ಲ. ಎಷ್ಟಂತ ಬಡತಾ ತಾಳಲಿ! ಈ ಬಡತದ ಕಾಲೊಳಗೇ ಹಿಂದಕ್ಕೊಮ್ಮೆ ಬೇನೇ ಬಿದ್ದಿದ್ದೆನು. ಇದಕ್ಕಿನ್ನೇನು ಮಾಡಲಿ? ತಾಯಿ, ನೀನಾದರು ಒಂದು ಹಂಚಿಕೆ ಹೇಳು! ಎಂದು ಬೇಡಿಕೊಂಡಳು.

ಆ ಮುದಕಿಗೆ ಆ ಗಂಡಹೆಂಡರ ಸ್ವಭಾವವು ಗೊತ್ತು ಇತ್ತು; ಅದರಿಂದ—ಒಳ್ಳೇದು, ನೋಡುವಾ ಎಂದು ತನ್ನ ಆಳು ಕರೆದು, ಒಂದು ತಂಬಿಗೆಯೊಳಗೆ ಬಾವೀ ನೀರು ತುಂಬಿಕೊಂಡು ಬಾ ಎಂದು ಹೇಳಿದಳು. ಆ ಮನುಷ್ಯನು ಬಾವಿಗೆ ಹೋಗಿ ನೀರು ತುಂಬಿಕೊಂಡು ಬಂದ ಬಳಿಕ, ಆ ಜಾಣ ಮುದಕಿ ಆಕೆಗೆ ತಿಳಿಯಗೊಡದೆ ಒಂದು ಸೆರೆ ಉಪ್ಪು ತಂದು ಆ ನೀರೊಳಗೆ ಚೆಲ್ಲಿ, ಔಷಧ ಹಾಕಿದೆನೆಂದು ಹೇಳಿ ಅದನ್ನು ಆಕೆಯ ಕೈಯೊಳಗೆ ಕೊಟ್ಟಳು. ಬಳಿಕ ನಿನ್ನ ಗಂಡನು ಸಿಟ್ಟಿಗೆದ್ದಾಗ ನೀನು ಈ ಔಷಧವನ್ನು ಬಾಯ ತುಂಬಾ ಹಾಕಿಕೊಂಡು ಕೂಡ್ರು, ಅಂದರೆ ಅವನು ನಿನ್ನನ್ನು ಬಡಿಯುವ

ದಿಲ್ಲ, ಹಾಗೂ ಅವನ ಶಿಟ್ಟು ಸಹ ಬೇಗ ಇಳಿಯುವದು ಎಂದು ಆಕೆಗೆ ಹೇಳಿದಳು. ಆಕೆ—ಇಷ್ಟು ಆದರೆ ಸಾಕು, ತಾ ನಮ್ಮವ್ವಾ, ಎಂದು ಆ ಮುದಕಿಯ ಉಪಕಾರ ನೆನಿಸಿ, ನೀನು ಹೇಳಿದಂತೆ ಮಾಡುವೆನೆಂದು ಹೇಳಿ ಅದನ್ನು ತಕ್ಕೊಂಡು ತನ್ನ ಮನೆಗೆ ಹೋದಳು.

ಬಳಿಕ ಮರುದಿವಸ ಗಂಡನಿಗೆ ಶಿಟ್ಟು ಬಂದದ್ದನ್ನು ಕಂಡು ಹೆಂಡತಿಯು ಆ ಔಷಧವನ್ನು ಬಾಯ ತುಂಬಾ ಹಾಕಿಕೊಂಡು ಕುಳಿತಳು. ಆಗ ಆಕೆ ಎದುರುತ್ತರ ಕೊಡದಿದ್ದದರಿಂದ ಅವನು ಆಕೆಯನ್ನು ಬಡಿಯಲಿಲ್ಲ. ಇದೇ ಮೇರೆಗೆ ಮಾಡಿದ್ದರಿಂದ ಎಂಟು ದಿನ ಆಕೆಗೆ ಬಡತ ಬೀಳಲಿಲ್ಲ. ಮುಂದೆ ಔಷಧವು ತೀರಿದ್ದರಿಂದ ಆಕೆ ಪುನಃ ಆ ನೆರೆಮನೆಯ ಮುದಕಿಯ ಬಳಿಗೆ ಬಂದು—ಅವ್ವಾ, ನೀನು ಕೊಟ್ಟ ಔಷಧವೆಲ್ಲ ತೀರಿತು, ಅದು ಮನೆಯೊಳಗೆ ಇರುವ ತನಕ ನನಗೆ ಬಡತ ಬೀಳಲಿಲ್ಲ, ನೀನು ಹೇಳಿದ್ದೆಲ್ಲ ನಿಜವು. ದಯೆ ಮಾಡಿ ಇನ್ನಷ್ಟು ಔಷಧ ಕೊಟ್ಟರೆ, ನಿನಗೆ ಪುಣ್ಯ ಬಂದೀತು ಎಂದು ಹೇಳಿಕೊಂಡಳು. ಮುದಕಿ—ಇನ್ನು ನಿನಗೆ ಔಷಧ ಬೇಡ. ಭಾವೀ ನೀರೊಳಗೆ ಉಪ್ಪು ಹಾಕಿ ಔಷಧವೆಂದು ನಿನಗೆ ಕೊಟ್ಟಿದ್ದೆನು. ಅದರಿಂದೇನೂ ನಿನ್ನ ಗಂಡನ ಶಿಟ್ಟು ಹೋಗಲಿಲ್ಲ. ಆಕೆ—ಹಾಗಾದರೆ ಅವ್ವಾ, ನೀನು ಕೊಟ್ಟ ನೀರು ಬಾಯೊಳಗಿರುವ ತನಕ ಗಂಡನು ಯಾಕೆ ಹೊಡೆಯಲಿಲ್ಲ? ಮುದಕಿ—ಆ ಹಂಚಿಕೆ ನಿನಗೆ ಇನ್ನೂ ತಿಳಿಯಲಿಲ್ಲ, ಹೇಳುತ್ತೇನೆ, ಕೇಳು. ಮೊದಲು ನಿನ್ನ ಗಂಡನು ಶಿಟ್ಟಿಗೆದ್ದು ಮಾತಾಡಿದ ಕೂಡಲೇ ನೀನು ಬಾಯ ಮಾಡಿ ಮಾತಾಡುತ್ತಿದ್ದಿ. ಅದರಿಂದ ಹೆಚ್ಚಿಗೆ ಶಿಟ್ಟಿಗೆದ್ದು ಅವನು ನಿನ್ನನ್ನು ಹೊಡಿಯುತ್ತಿದ್ದನು. ಆದರೆ ನಿನ್ನ ಬಾಯೊಳಗೆ ನೀರು ಇದ್ದಾಗ ನೀನು ಮಾತಾಡಲಾರದೆ ಸುಮ್ಮನೆ ಇರುತ್ತಿದ್ದಿ. ಈಹೊತ್ತಿನಿಂದ ಗಂಡನಿಗೆ ಶಿಟ್ಟು ಬಂದಾಗ ನೀನು ಸುಮ್ಮನೇ ನಾಲಿಗೆ ಬಿಗಿ ಹಿಡಿದುಕೊಂಡು ಇರು, ತಿರಿಗಿ ಮಾತಾಡಬೇಡ. ಹೀಗೆ ಮಾಡಿದರೆ ಅವನ ಶಿಟ್ಟು ಇಳಿಯುವದು,

ನಿನಗೂ ಲತ್ತೆ ಬೀಳಲಿಕ್ಕಿಲ್ಲ. ಸೌಮ್ಯತನದಿಂದ ನಡಕೊಂಡರೆ, ನಿನ್ನ ಮೇಲೆ ಗಂಡನು ಪ್ರೀತಿ ಮಾಡುವನು ಎಂದು ಬುದ್ಧೀ ಹೇಳಿ ಆಕೆಯನ್ನು ಮನೆಗೆ ಕಳಿಸಿದಳು.

---

## ೩೮ನೇ ಪಾಠ.

## ಒಳ್ಳೇ ಬುದ್ಧಿ.



ಒಬ್ಬ ಗೃಹಸ್ಥನಿಗೆ ರಾಮಚಂದ್ರನೆಂಬ ಒಬ್ಬ ಎಂಟು ವರ್ಷದ ಮಗನಿದ್ದನು. ಅವನು ಚಿಕ್ಕವನಿದ್ದಾಗ್ಯೂ ಒಳ್ಳೇ ಬುದ್ಧಿವಂತನಿದ್ದನು. ಸಾಲೆಯಲ್ಲಿ ಸಂಗಡ ಕಲಿಯುವ ಎಲ್ಲ ಹುಡುಗರಿಗಿಂತ ಅವನು ಸಣ್ಣವನಿದ್ದಾಗ್ಯೂ ವಿದ್ಯೆಯಿಂದ ಅವರೊಳಗೆ ಮೇಲು ಇದ್ದನು.

ಆ ಹುಡುಗನ ಬಾಯಿಂದ ಕೆಟ್ಟ ಶಬ್ದಗಳೇ ಹೊರಡುತ್ತಿದ್ದಿಲ್ಲ; ಅವನು ಎಂದೂ ಕೆಟ್ಟ ಕೆಲಸ ಮಾಡುತ್ತಿದ್ದಿಲ್ಲ; ಯಾವಾಗಲೂ ಎಲ್ಲ ಹುಡುಗರ ಕೂಡ ಪ್ರೀತಿಯಿಂದ ನಡಕೊಳ್ಳುತ್ತಿದ್ದನು. ಆದದರಿಂದ ಸಾಲೆಯೊಳಗಿನ ಎಲ್ಲ ಹುಡುಗರಿಗೂ ಗುರುಗಳಿಗೂ ಅವನು ಬಹು ಪ್ರಿಯಕರನಾಗಿದ್ದನು. ಅವನು ಸಾಲೆಯಲ್ಲಿ ಮೂರು ವರ್ಷ ಚನ್ನಾಗಿ ಕಲಿತನು. ಕಲಿತದ್ದರಲ್ಲಿ ಅವನ ಜಾಣತನವನ್ನು ಕಂಡು ತಾಯಿತಂದೆಗಳು ಅವನ ಮೇಲೆ ಬಹಳ ಪ್ರೀತಿ ಮಾಡಹತ್ತಿದರು.

ಒಂದು ದಿನ ಅವನು ಸಾಲೆಯಿಂದ ಮನೆಗೆ ಬಂದ ಬಳಿಕ ಅವನ ತಂದೆಯು ಅವನಿಗೆ ಏನಾದರು ಕೊಂಡು ತಿನ್ನು ಎಂದು ನಾಲ್ಕು ದುಡ್ಡು ಕೊಟ್ಟನು. ಆ ರೊಕ್ಕಾ ತಕ್ಕೊಂಡು ಆನಂದದಿಂದ ಅವನು ಪೇಟೆಯ ಹಾದೀ ಹಿಡಿದು ಹೋಗುವಾಗ ಮನದೊಳಗೆ ಆಲೋಚಿಸಿದ್ದೇನಂದರೆ—ಈ ರೊಕ್ಕಾ ಕೊಟ್ಟು ಏನು ಕೊಳ್ಳಬೇಕು? ಆಟದ ಒಡವೆಗಳಂತು ನನಗೆ ಬೇಡ; ಬೆಂಡು ಬತ್ತಾಸು ಕೊಂಡರೆ ತಿಂದು ಹೋಗುತ್ತವೆ; ಇದೂ ಪ್ರಯೋಜನವಲ್ಲ. ಆದರೆ ಕಾಗದ ಗಳನ್ನು ಕೊಳ್ಳಬೇಕು, ನಾನು ಮನೆಯೊಳಗಿದ್ದಾಗ ಕಲಿತದ್ದನ್ನೆಲ್ಲ ಆ ಕಾಗದಗಳ ಮೇಲೆ ಬರೆದು ಇಟ್ಟುಕೊಳ್ಳುವೆನು, ಹಾಗೆ ಮಾಡಿ ದರೆ, ಕಲಿತದ್ದು ಘಟ್ಟಿಯಾದೀತು.

ಈ ಮೇರೆಗೆ ಆಲೋಚಿಸುತ್ತ ಪೇಟೆಯೊಳಗೆ ಹೋಗಿ ಕಿಸೆಯೊ ಳಗೆ ಕೈ ಹಾಕಿ ನೋಡಲು, ರೊಕ್ಕವಿದ್ದಿಲ್ಲ. ಕಿಸೆಗೆ ಒಂದು ತೂತು ಬಿದ್ದಿತ್ತು. ಅದರೊಳಗಿಂದ ಅವು ಎಲ್ಲಿಯೋ ಬಿದ್ದು ಹೋಗಿದ್ದವು. ಅದನ್ನು ನೋಡಿ ಆತನು ಅಳುತ್ತ, ಬಂದ ದಾರೀ ಹಿಡಿದು ರೊಕ್ಕಾ ಹುಡುಕುತ್ತ ಹಿಂದಕ್ಕೆ ತಿರುಗಿದನು. ಆಗ ಒಬ್ಬ ದೊರೆಯು ಅದೇ ದಾರಿಯಿಂದ ಬರುವಾಗ ಇವನನ್ನು ಕಂಡು,—ಎಲಾ ಹುಡುಗಾ, ಯಾಕೆ ಅಳುತ್ತೀ? ನನ್ನ ಸಂಗಡ ಬಾ, ಅಂದನು. ಆ ಮಾತು ಕೇಳಿ ರಾಮಚಂದ್ರನು ಮೋರೆಯೆತ್ತಿ ಕಣ್ಣು ಒರಸಿಕೊಳ್ಳುತ್ತ ದೊರೆಯ ಮೋರೆಯನ್ನು ನೋಡಿ ಅಂಜಿ ಸುಮ್ಮನಾಗಿ ಆತನ ಬೆನ್ನಹತ್ತಿ ಹೋದನು.

ಮನೆಗೆ ಹೋದ ಬಳಿಕ ದೊರೆಯು—ನೀನು ಯಾಕೆ ಅಳು ತ್ತಿದ್ದಿ? ಎಂದು ರಾಮಚಂದ್ರನನ್ನು ಕೇಳಿದನು. ರಾಮಚಂದ್ರನು— ಈಹೊತ್ತು ಸಾಲೆಯಿಂದ ನಾನು ಮನೆಗೆ ಬಂದ ಬಳಿಕ ನಮ್ಮ ತಂ ದೆಯು ನನಗೆ ನಾಲ್ಕು ದುಡ್ಡು ಕೊಟ್ಟಿದ್ದನು, ಅವುಗಳನ್ನು ಕಿಸೆ ಯೊಳಗೆ ಹಾಕಿಕೊಂಡು ಕಾಗದ ಕೊಳ್ಳಬೇಕೆಂದು ಪೇಟೆಗೆ ಬಂದು ಕಿಸೆಯೊಳಗೆ ಕೈ ಹಾಕಿ ನೋಡುತ್ತೇನೆ, ಆ ರೊಕ್ಕ ಎಲ್ಲಿಯೋ

ಬಿದ್ದು ಹೋಗಿದ್ದವು; ಅದರ ಸಲುವಾಗಿ ಅಳುತ್ತಿದ್ದೆನು, ಸ್ವಾಮಿ, ಎಂದು ಹೇಳಿದನು. ದೊರೆಯು ಆ ಹುಡುಗನ ಮಾತು ಕೇಳಿ ಸಂತೋಷದಿಂದ ಅವನಿಗೆ ಎಂಟು ದುಡ್ಡು ಕೊಟ್ಟು,—ಕಾಗದವಾಗಲಿ ನಿನಗೆ ಬೇಕಾದದ್ದು ಮತ್ತೇನಾದರು ಆಗಲಿ ಕೊಂಡುಕೋ ಎಂದು ಹೇಳಿದನು. ಆಗ ರಾಮಚಂದ್ರನು ಆ ರೊಕ್ಕಾ ತಕ್ಕೊಂಡು ಹಿಗ್ಗಿ, ಕಣ್ಣು ಒರಸಿಕೊಳ್ಳುತ್ತ ದೊರೆಗೆ ಸಲಾಮು ಮಾಡಿ, ಪೇಟೆಗೆ ಹೋಗಿ ಕಾಗದಗಳನ್ನು ಕೊಂಡು, ತಿರಿಗಿ ಮನೆಗೆ ಬಂದು, ಆದ ಸಂಗತಿಯನ್ನೆಲ್ಲ ತಂದೆತಾಯಿಗಳಿಗೆ ಹೇಳಿದನು. ಅದನ್ನು ಕೇಳಿ ಅವರಿಗೆ ಬಹಳ ಆನಂದವಾಯಿತು.

---

## ೩೮ನೇ ಪಾಠ.

### ದಾಲ್‌ಚಿನ್ನೆ.

ಸಿಂಹಲ ದ್ವೀಪದಲ್ಲಿ ದಾಲ್‌ಚಿನ್ನೆಯ ಗಿಡಗಳು ಬಹಳ. ಅಲ್ಲಿ ಈ ಗಿಡದ ದೊಡ್ಡ ದೊಡ್ಡ ಹಳುವುಗಳುಂಟು. ಅಲ್ಲಿಯ ಜನರು ದಾಲ್‌ಚಿನ್ನೆಯ ತೋಟಾ ಚನ್ನಾಗಿ ಬಲಿಸುತ್ತಾರೆ. ಮೂರು ವರ್ಷದ ಗಿಡವಾದ ಕೂಡಲೆ ಅದರ ತೊಗಟೇ ಸುಲಿದು ಬಿಸಲೊಳಗೆ ಒಣಗಿಸುತ್ತಾರೆ; ಅದೇ ದಾಲ್‌ಚಿನ್ನೆ. ಈ ಗಿಡದ ಬೇರುಗಳಿಂದಲೂ ಕಾಯಿಗಳಿಂದಲೂ ಎಣ್ಣೇ ತೆಗೆಯುತ್ತಾರೆ; ಆದರೆ ಕಾಯಿ ಎಣ್ಣೆ ಮಾತ್ರ ಚಲೋದು. ಅದು ಆರಿದ ಬಳಿಕ ಮೇಣದ ಹಾಗೆ ಘಟ್ಟಿಯಾಗುತ್ತದೆ. ಮುಂಚೆ ಈ ನಡುಗಡ್ಡೆಯ ಅರಸರ ಸಲುವಾಗಿ ಇದೇ ಮೇಣದ ಬತ್ತಿಗಳನ್ನು ಮಾಡುತ್ತಿದ್ದರು.

ಡಚ್ಚ ಜನರು ಈ ನಡುಗಡ್ಡೆಯನ್ನು ಆಳುವಾಗ ಬೇರೆ ಜನರಿಗೆ ಈ ದಾಲ್‌ಚಿನ್ನೆಯ ವ್ಯಾಪಾರ ಮಾಡಗೊಡುತ್ತಿದ್ದಿಲ್ಲ. ತಾವೇ ಗುತ್ತಿಗೆ ಮಾಡಿಕೊಂಡು ಬೇಕಾದ ಹಾಗೆ ತುಟ್ಟಿ ಮಾರಿ ಬಹಳ ಹಣಾ ಗಳಿಸುವರು. ಈ ನಡುಗಡ್ಡೆಯು ಇಂಗ್ಲಿಷರ ಕೈವಶವಾದಂ

ದಿನಿಂದ ಅಲ್ಲಿ ಬೇಕಾದವರು ದಾಲ್‌ಚಿನ್ನಿಯ ವ್ಯಾಪಾರ ಮಾಡು ತ್ತಾರೆ. ಸಿಂಹಲ ದ್ವೀಪದಲ್ಲಿ ಇವೇ ಕಟ್ಟಿಗೆಗಳನ್ನು ಉರೀ ಹಚ್ಚು ತ್ತಾರೆ. ಇತ್ತಿತ್ತ ಜಮೇಕಾ ಎಂಬ ನಡುಗಡ್ಡೆಯಲ್ಲಿಯೂ ಜನರು ಈ ಗಿಡಗಳನ್ನು ಹಚ್ಚಲಾರಂಭಿಸಿದ್ದಾರೆ.

ದಾಲ್‌ಚಿನ್ನಿಯು ಮಸಾಲೆಗೂ ಔಷಧಕ್ಕೂ ಬರುತ್ತದೆ. ವಾಂತಿಗಾಗಲಿ ಪಿತ್ತಕ್ಕಾಗಲಿ ದಾಲ್‌ಚಿನ್ನಿಯ ಕಷಾಯ ಕುಡಿಯುತ್ತಾರೆ. ವಾತವಾಗಿದ್ದರೆ, ಅದರ ಎಣ್ಣಿ ಹಚ್ಚಿಸಿ ತಿಕ್ಕಿಸುತ್ತಾರೆ. ಈ ಮೇರೆಗೆ ದಾಲ್‌ಚಿನ್ನಿಯ ಗಿಡದಿಂದ ಅನೇಕ ಪ್ರಯೋಜನಗಳುಂಟು. ದಾಲ್‌ಚಿನ್ನಿಯು ಸಿಂಹಲದ್ವೀಪದಿಂದ ಪರನಾಡುಗಳಿಗೆ ಹೋಗುತ್ತದೆ; ಈ ವ್ಯಾಪಾರದಿಂದ ಅಲ್ಲಿ ಸಾವಿರಾರು ಮಂದೀ ಹೊಟ್ಟೆ ತುಂಬುತ್ತದೆ.

---

## ೪೦ನೇ ಪಾಠ.

### ಒಂಟಿ.

ಅರಬಸ್ಥಾನದೊಳಗಿನ ಉಷ್ಣ ಅರಣ್ಯಾಗಳೇ ಒಂಟೆಗಳ ಮೂಲ ಸ್ಥಾನವು. ಅರಬೀ ದೇಶದ ಒಂಟೆಗಳ ಬೆನ್ನ ಮೇಲೆ ಒಂದೇ ಡುಬರಿ ಇರುವದು. ಎರಡು ಡುಬರಿಗಳುಳ್ಳ ಒಂಟೆಗಳು ತಾರ್ತರೀ ದೇಶದ ಅಡವಿಗಳಲ್ಲಿಯೂ, ಹಿಂದುಸ್ಥಾನ ಚೀನ ದೇಶಗಳ ನಡುವಿನ ಬೈಲುಗಳಲ್ಲಿಯೂ ಇರುತ್ತವೆ. ಒಂಟೆಯ ತಲೆ ಸಣ್ಣದು; ಕಿವಿ ಕಿರಿಯವು; ಗೋಣು ಸಣ್ಣಗೆ ಉದ್ದವಾಗಿ ಬಿಲ್ಲಿನಂತೆ ಡೊಂಕ ಇರುವದು. ಶರೀರವು ಎತ್ತರವಿದ್ದರೂ ತೆಳ್ಳಗೆ ಇರುತ್ತದೆ. ಕಾಲು ಸಣ್ಣಗೆ ಇರುತ್ತವೆ. ಅಂಗಾಲು ಹರವಾಗಿ ಬಹು ಮೆತ್ತಗೆ ಇರುತ್ತವೆ. ಅವುಗಳ ತೊಗಲು ಘಟ್ಟಿಯಾಗಿ ಹಿಗ್ಗುವಂಥಾದಿರುವದು. ಒಂಟೆಗಳಿಗೆ ಎತ್ತಿನ ಹಾಗೆ ಎರಡು ಕೊಳಗಗಳುಂಟು; ಅವುಗಳ ಕಾಲುಗಳಿಗೂ ಎದೆಗೂ ಗಂಟುಗಳಿರುತ್ತವೆ. ಆ ಗಂಟುಗಳನ್ನು ನೆಲಕ್ಕೆ ಊರಿ

ಅದು ಕೂತುಕೊಳ್ಳುವದು. ಸಿಬೀರಿಯಾ ದೇಶದಲ್ಲಿ ಬಿಳೇ ಒಂಟೆಗಳು ಅವೆ.



ಒಂಟೆಯು ಉಸುಬಿನ ಬೈಲೊಳಗೆ ನಡೆಯುವಾಗ ತನ್ನ ಮೂಗಿನೊಳಗೆ ಗಾಳಿಗೆ ಹಾರಿದ ಉಸುಬು ಹೊಗಬಾರದೆಂದು ಹೊರಳೆಗಳನ್ನು ಮುಚ್ಚಿಕೊಳ್ಳುತ್ತದೆ. ಅದರ ಹೊಟ್ಟೆಯೊಳಗೆ ಅನ್ನ ಇಟ್ಟುಕೊಳ್ಳುವದೊಂದು ಚೀಲ ಇರುವದು. ತನಗೆ ಬೇಕಾದಾಗ ಆ ಚೀಲದೊಳಗಿನ ಅನ್ನವನ್ನು ಬಾಯೊಳಗೆ ತಿರುಗಿಸಿ ತಕ್ಕೊಂಡು ಮೆಲಕಾಡಿಸುತ್ತದೆ. ಮತ್ತೊಂದು ಚೀಲದೊಳಗೆ ನೀರು ಇಟ್ಟುಕೊಂಡು ನೂರಾರು ಹರದಾರಿ ನೀರು ಕುಡಿಯದೆ ನಡೆಯುವದು.

ಏಳೆಂಟು ದಿನ ಕೂಳೂ ನೀರೂ ಇಲ್ಲದೆ ಒಂಟೆಗಳು ಸಮಾಧಾನ ದಿಂದ ಇರುತ್ತವೆ.

ಒಂಟೆಗಳು ಗಿಡದ ಎಲೆಗಳನ್ನು ತಿಂದು ಬದುಕುವವು; ಮುಳ್ಳು ಗಿಡಗಳು ದೊರೆದರೆ, ಬಹು ಪ್ರೀತಿಯಿಂದ ತಿನ್ನುವವು. ಗಿಡಗಳು ಇಲ್ಲದ ಹಾಳು ಅಡವಿಗಳಲ್ಲಿ ಮಾತ್ರ ಸದುಕವೆಂಬ ಕಾಳುಗಳನ್ನೂ ಅವರಿಗಳನ್ನೂ ತಿಂದು ಕಾಲ ಕಳೆಯುವವು.

ಹೆಣ್ಣು ಒಂಟೆಯು ಗಬ್ಬಾಗಿ ಹನ್ನೆರಡು ತಿಂಗಳಿಗೆ ಈಯುತ್ತದೆ. ಸರತಿಗೆ ಒಂದು ಮರಿ ಹುಟ್ಟುವದು. ಮರಿಯು ಹನ್ನೆರಡು ತಿಂಗಳ ತನಕ ತಾಯಿಯ ಮೊಲೆ ಕುಡಿಯುವದು. ಇವುಗಳ ಬೆಳವಣಿಗೆ ಐದು ವರ್ಷ. ಇವು ನಾಲ್ವತ್ತು ಐವತ್ತು ವರ್ಷ ಬಾಳುತ್ತವೆ.

ಅರಬಸ್ಥಾನದೊಳಗೆ ಒಂಟೆಗಳು ಇಲ್ಲದಿದ್ದರೆ, ಅರಬರಿಗೆ ಮತ್ತೊಂದು ಊರಿಗೆ ಹೋಗಲಿಕ್ಕೂ, ವ್ಯವಹಾರ ಉದ್ಯೋಗಗಳನ್ನು ಮಾಡಲಿಕ್ಕೂ, ಹೊಟ್ಟೆ ತುಂಬಿಕೊಳ್ಳಲಿಕ್ಕೂ ಅನುಕೂಲವಾಗುತ್ತಿದ್ದಿಲ್ಲ. ತಮ್ಮ ದೇಶದಲ್ಲಿ ಒಂಟೆಗಳು ಇದ್ದದ್ದೊಂದು ದೇವರ ದಯೆ ಎಂದು ಅವರು ನೆನಸುತ್ತಾರೆ.

ಅರಬರು ಒಂಟೆಯ ಹಾಲು ಕುಡಿಯುವರು. ಒಂಟೆಯ ಕೂದಲುಗಳಿಂದ ಬಟ್ಟೆಗಳನ್ನು ನೇಯುವರು. ಅರಬರು ಒಂಟೆಗಳ ಮೇಲೆ ಕೂತುಕೊಂಡು ಅರಣ್ಯದೊಳಗಿಂದ ದಿನಕ್ಕೆ ೭೦ ಹರದಾರೀ ತನಕ ಹೋಗುವರು. ಡೇರೆ, ಗುಡಾರ ಮುಂತಾದ ದಂಡಿನ ಸಾಮಾನುಗಳನ್ನು ಒಂಟೆಯ ಮೇಲೆ ಹೇರುತ್ತಾರೆ. ತಾರ್ತರೀ ದೇಶದೊಳಗೆ ಒಂಟೆಗಳನ್ನು ಬಂಡಿಗೆ ಹೂಡುತ್ತಾರೆ. ಒಂಟೆಗಳು ಸ್ವಲ್ಪ ಆಹಾರ ತಿಂದು ಬಹಳ ಕೆಲಸ ಮಾಡುತ್ತವೆ.

ಒಬ್ಬ ಕವಿಯು ಒಂಟೆಯನ್ನು ಅಡವೀ ನಾವು ಎಂದು ವರ್ಣಿಸಿದ್ದಾನೆ.

## ೪೧ನೇ ಪಾಠ.

### ಕಾಡಹಂದಿಯೂ ತೋಳವೂ.

ಒಂದು ಕಾಡಹಂದಿಯು ಈದಿತ್ತು. ಅದರ ಮರಿಗಳನ್ನು ಒಂದು ತೋಳವು ಕಂಡು, ಈ ಎಳೆ ಮರಿಗಳೊಳಗೆ ಒಂದಾದರೂ ತನಗೆ ದೊರಕಿದರೆ ನೆಟ್ಟಗಾದೀತು ಎಂಬ ಕಾಂಕ್ಷೆಯಿಂದ ಹೊಂಚು ಹಾಕಿತ್ತು. ಈದ ಹಂದಿಯು ತನ್ನ ಮರಿಗಳನ್ನು ಅಗಲದೆ ಕಾಯುತ್ತ ಇದ್ದದರಿಂದ ತೋಳಗೆ ಸಂಧಿ ಸಾಧಿಸಲಿಲ್ಲ. ಆಗ ಅದು ಈ ಹಂದಿಗೆ ತನ್ನ ಮೇಲೆ ನಂಬಿಗೆ ಹುಟ್ಟುವ ಹಾಗೆ ಮಾಡಬೇಕೆಂದು ಅದರ ಸಮೀಪಕ್ಕೆ ಹೋಗಿ,—ಅಪ್ಪನವರೇ, ನೀವು ಒಳಿತಾಗಿದ್ದೀರೋ? ಒಂದೇ ಕಡೆಯಲ್ಲಿ ಕುಳಿತು ಕುಳಿತು ನಿಮಗೆ ಬಹಳ ಬೇಸರ ಬಂದಿದ್ದೀತು; ಹೊರಗೆ ಅಡ್ಡಾಡಿ ಬರುವ ಅಪೇಕ್ಷೆ ಆಗಿದ್ದೀತು; ಆದರೆ ಸಂತೋಷದಿಂದ ಅಡ್ಡಾಡಿ ಬರಬೇಕು. ಈ ಕೂಸುಗಳ ಚಿಂತೆ ಬಿಡಿರಿ, ನಾನು ಇವುಗಳನ್ನು ಜತನದಿಂದ ಕಾಯುತ್ತ ಹತ್ತರ ಕುಳಿತಿರುತ್ತೇನೆ, ಅನ್ನಲು ಈ ಮಾತಿಗೆ ಆ ಹಂದಿಯು—ಮಹಾರಾಯಾ, ತಮ್ಮ ಮೆಹರ್ಬಾನಗಿ ಇದ್ದರೆ, ತಿರಿಗಿ ಈ ಸ್ಥಲಕ್ಕೆ ತಾವು ಬರಬಾರದು, ಹಾಗೂ ನನಗೆ ಮೋರೆ ತೋರಿಸಬಾರದು, ಎಂದು ಅದನ್ನು ಹೊರಗೆ ಹಾಕಿತು.

---

## ೪೨ನೇ ಪಾಠ.

### ಸಂಗ್ರಹ ಮಾಡುವ ಬಗ್ಗೆ.

ಒಬ್ಬ ಒಕ್ಕಲಮಗನ ತೋಟದೊಳಗೆ ಒಂದು ಇರಿವೆಯ ಹುತ್ತ ಇತ್ತು; ಅದರೊಳಗೆ ಎಷ್ಟೋ ಇರಿವೆಗಳು ಇರುತ್ತಿದ್ದವು. ಅವು ಮಳೆಗಾಲ ಹೋದ ಬಳಿಕ ಎಂಟು ತಿಂಗಳ ವರೆಗೆ ಮುಂ

ಜಾನೆ ಹೊರಬಿದ್ದು ಸಂಜೆ ತನಕ ಕಾಳುಗಳನ್ನು ಕೂಡಹಾಕುತ್ತಿದ್ದವು.

ಅದೇ ಹುತ್ತಿನ ಹತ್ತರ ಹೂವಿನ ಗಿಡದ ಸಾಲುಗಳು ಇದ್ದವು; ಅಲ್ಲಿಗೆ ಬೇಸಿಗೆಯಲ್ಲಿ ಹಲವು ನೊಣಗಳು ಬಂದು, ತುಸು



ಹೊತ್ತು ಈ ಹೂವಿನ ಮೇಲೆ, ತುಸು ಹೊತ್ತು ಆ ಹೂವಿನ ಮೇಲೆ ಕೂತು, ಸೊಗಸಿನಿಂದ ಇತ್ತ ಅತ್ತ ಹಾರಾಡುತ್ತ ಹೊತ್ತುಗಳೆಯುತ್ತಿದ್ದವಲ್ಲದೆ ತಮ್ಮ ಹಿತದ ಕೆಲಸವನ್ನೇನೂ ಮಾಡಿಕೊಳ್ಳುತ್ತಿದ್ದಿಲ್ಲ.

ಆ ಒಕ್ಕಲಿಗನಿಗೆ ಒಬ್ಬ ಮಗನಿದ್ದನು. ಅವನು ತಂದೆಯ ಸಂಗಡ ತೋಟಕ್ಕೆ ಹೋಗಿ ಅಲ್ಲಿ ಇರಿವೆಗಳ ರೀತಿಯನ್ನೂ ನೊಣಗಳ ರೀತಿಯನ್ನೂ ದಿನಾಲು ನೋಡುತ್ತ ಕೂತುಕೊಳ್ಳುತ್ತಿದ್ದನು. ಒಂದು ದಿನ ತಂದೆಗೆ ಆ ಹುಡುಗನು—ಅಯ್ಯಾ, ಈ ಇರಿವೆಗಳು ಎಂಥಾ ತಿಳಿಗೇಡಿಗಳು ನೋಡಿರಿ! ಇವು ನೊಣಗಳ ಹಾಗೆ ಆಡಿ ಸುಖಪಡದೆ, ಹಗಲೆಲ್ಲ ದುಡಿದು ದುಡಿದು ಕಷ್ಟ ಪಡುತ್ತವೆ. ಇರಿವೆಗಳಿಗಿಂತ ನೊಣಗಳು ಬುದ್ಧಿಯುಳ್ಳವು. ಯಾಕಂದರೆ, ಇವು ತಮಗೆ ದೊರಕಿದ ದಿನ ತಿಂದು ಸ್ವಸ್ಥವಿರುತ್ತವೆ, ಮರುದಿನದ ಚಿಂತೆಯನ್ನೇ ಮಾಡುವದಿಲ್ಲ, ಎಂದನು.

ಹೀಗೆ ಇರ ಇರುತ್ತ ಬೇಸಿಗೆ ಹೋಗಿ ಮಳೆಗಾಲ ಬಂತು. ಆಗ ಒಂದು ದಿನ ಮೋಡಗವಿದು ಮಳೆ ಸುರಿಯಹತ್ತಿದರಿಂದ ಸೂರ್ಯನು ಕಾಣದ ಹಾಗಾದನು; ಗಾಳಿ ಬಿಟ್ಟದರಿಂದ ಬಹಳ ಚಳಿಯಾಗಹತ್ತಿತು. ಆ ಹೊತ್ತು ಆ ಹುಡುಗನು ತಂದೆಯ ಕೂಡ ತೋಟಕ್ಕೆ

ಹೋಗಿ ನೋಡಲು, ಒಂದೂ ಇರಿವೆ ಇದ್ದಿಲ್ಲ. ನೊಣಗಳೆಲ್ಲಾ ನೆಲದ ಮೇಲೆ ಬಿದ್ದಿದ್ದವು. ಅವುಗಳನ್ನು ನೋಡಿ ಆ ಹುಡುಗನು—ಅಯ್ಯಾ, ಅವೆಲ್ಲ ಇರಿವೆಗಳು ಎಲ್ಲಿಗೆ ಹೋದವು? ಇಲ್ಲಿ ಒಂದೂ ಕಾಣಿಸುವದಿಲ್ಲ, ಎಂದನು.

ತಂದೆಯು—ತಮ್ಮಾ, ಅವು ತಮ್ಮ ಹುತ್ತಿನೊಳಗೆ ಸುಖದಿಂದ ಇದ್ದಾವು, ಎಂದನು.

ಮಗನು—ಅವು ಜೀವದಿಂದ ತಮ್ಮ ಹುತ್ತಿನೊಳಗೆ ಸುಖರೂಪದಿಂದ ಇದ್ದದ್ದುಂಟಾದರೆ, ನೊಣಗಳಿಗಿಂತ ಇರಿವೆಗಳು ಬುದ್ಧಿಯುಳ್ಳವೆಂಬುವದಕ್ಕೆ ಅಡ್ಡಿ ಇಲ್ಲ.

ತಂದೆಯು—ಹೌದು, ಅವು ತಮ್ಮ ಹುತ್ತಿನೊಳಗೆ ಕ್ಷೇಮದಿಂದ ಅವೆ, ಮಳೆಗಾಲ ತೀರುವ ತನಕ ಸಾಕಾಗುವಷ್ಟು ಕಾಳು ಸಹ ಅವುಗಳ ಬಳಿಯಲ್ಲಿ ಉಂಟು. ಮೊದಲು ನೀನು ಹೀಗೆ ಅನ್ನುತ್ತಿದ್ದಿಲ್ಲ. ಈಗ ನೊಣಗಳಿಗಿಂತ ಇರಿವೆಗಳು ಜಾಣತನವುಳ್ಳವೆಂದು ಯಾತರಿಂದ ನಿನಗೆ ತಿಳಿಯಿತು? ಎಂದು ಕೇಳಿದನು.

ಮಗನು—ಮಳೆಗಾಲದೊಳಗೆ ಹೊಟ್ಟೆಗೆ ದೊರೆಯಲಿಕ್ಕಿಲ್ಲವೆಂದು ತಿಳಿದು ಅವು ತಕ್ಕ ಕಾಲದಲ್ಲಿ ದುಡಿದು ಕಾಳು ಕೂಡ ಹಾಕಿದವು; ಅದರಿಂದ ಈಗ ಅವು ಸುಖದಿಂದ ತಮ್ಮ ಮನೆಯೊಳಗೆ ಇದ್ದಾವೆ. ನೊಣಗಳು ಕೈಲಾಗದವು, ಆದದರಿಂದ ಬೇಸಿಗೆಯಲ್ಲಿ ಮನೆಮಾರುಗಳನ್ನು ಮಾಡಿಕೊಳ್ಳಲಿಲ್ಲ, ಕಾಳು ಕೂಡ ಹಾಕಲಿಲ್ಲ, ಅದರಿಂದ ಈಗ ಅವು ಸತ್ತುಹೋದವು. ಈ ಕಾರಣದಿಂದ ನನಗೆ ಹೀಗೆ ತಿಳಿಯಿತು, ಎಂದನು.


ತಂದೆಯು—ಮಗನೇ, ನೋಡು! ಸೋಮಾರಿಗಳಿಗೆ ದುಃಖವೆಷ್ಟು! ದುಡಿಯುವವರಿಗೆ ಸುಖವೆಷ್ಟು! ಇಷ್ಟರಿಂದ ತಿಳಿಯೆಂದನು.

ಮಗನು—ಅಯ್ಯಾ, ಇಂದಿನಿಂದ ನಾನು ಸೋಮಾರಿಯಾಗಲಿಕ್ಕಿಲ್ಲ; ಮನಸ್ಸುಗೊಟ್ಟು ನನ್ನ ಕೆಲಸವನ್ನು ಮಾಡುತ್ತ ಹೋಗುವೆನು, ಎಂದನು.

ತಂದೆಯು — ಮಗನೇ, ಈಹೊತ್ತು ನಿನಗೆ ಹುಟ್ಟಿದ ಬುದ್ಧಿ ಕಡೆತನಕ ಇದ್ದರೆ, ಬಹು ಪ್ರಯೋಜನವಾಗುವದು. ಸಣ್ಣವರೂ ದೊಡ್ಡವರೂ ಇರಿವೆಗಳ ಹಾಗೆ ಯಾವಾಗಲೂ ಉದ್ಯೋಗದಲ್ಲಿರಬೇಕು; ನೊಣಗಳ ಹಾಗೆ ಆಡಿ ಸುಮ್ಮನೇ ಹೊತ್ತುಗಳೆಯಬಾರದು. ಮುಂದೆ ಬರುವ ಸಂಕಟಗಳನ್ನು ನೀಗುವದಕ್ಕಾಗಿ ಮೊದಲೇ ಎಚ್ಚರಗೊಳ್ಳುವವರು ಇರಿವೆಗಳ ಹಾಗೆ ಜಾಣರಾಗುತ್ತಾರೆ. ಎಚ್ಚರಗೊಳ್ಳದವರು ನೊಣಗಳ ಹಾಗೆ ಬುದ್ಧಿಗೇಡಿಗಳಾಗುತ್ತಾರೆ.

## ೪೩ನೇ ಪಾಠ.

### ಮುದಕನೂ ಅವನ ಕುದುರೆಯೂ.



ಒಬ್ಬ ಮುದಕನು ಮಗನನ್ನು ಸಂಗಡ ಕರಕೊಂಡು, ಸಂತೆಯೊಳಗೆ ತನ್ನ ಕುದುರೆಯನ್ನು ಮಾರಲಿಕ್ಕೆ ಹಿಡಿಯಬೇಕೆಂದು

ಒಯ್ಯುತ್ತಿದ್ದನು. ದಾರಿಯಲ್ಲಿ ಒಬ್ಬ ಹಾದಿಕಾರನು ಅವನನ್ನು ನೋಡಿ—ಈತನು ಎಂಥಾ ಹುಚ್ಚನು ನೋಡಿರಿ! ಕುದುರೆಗೆ ದಣ ವಾಗಬಾರದೆಂದು ಅದನ್ನು ಕೈಯೊಳಗೆ ಹಿಡಕೊಂಡು ನಡೆಯು ತ್ತಾನೆ, ಎಂದನು. ಅದನ್ನು ಕೇಳಿ ಮುದಕನು ಮಗನನ್ನು ಕುದು ರೆಯ ಮೇಲೆ ಕೂಡ್ರಿಸಿ, ತಾನು ಹಿಂದಿನಿಂದ ಕುದುರೆ ಹೊಡೆಯುತ್ತ ನಡೆದನು.

ತುಸು ಮುಂದಕ್ಕೆ ಹೋಗುವಷ್ಟರಲ್ಲಿ ಮತ್ತೊಬ್ಬನು ಆ ಹುಡು ಗನನ್ನು ನೋಡಿ,—ಸೈ ಸೈ, ಇದ್ದರಿಂಥಾ ಮಕ್ಕಳಿರಬೇಕು! ಮುಪ್ಪಿನ ತಂದೆಯನ್ನು ನಡಿಸುತ್ತ ಕಾಮಣ್ಣನ ಹಾಗೆ ಕುದುರೆಯ ಮೇಲೆ ಕೂತುಕೊಂಡು ಹೋಗಲಿಕ್ಕೆ ನಿನಗೆ ನಾಚಿಕೆ ಬರುವದಿಲ್ಲವೋ? ಎಂದನು. ಈ ಮಾತು ಕೇಳಿ ತಂದೆಯು ಮಗನನ್ನು ಇಳಿಸಿ, ತಾನು ಕುದುರೆಯ ಮೇಲೆ ಕುಳಿತನು. ಸ್ವಲ್ಪ ಮುಂದಕ್ಕೆ ಹೋಗಲಾಗಿ ಮೂರನೆಯವನೊಬ್ಬನು ಅವನನ್ನು ನೋಡಿ,—ಮಗನ ಜೀವ ಕ್ಕಿಂತ ಈ ಮುದಕನ ಜೀವ ಹೆಚ್ಚಿನದಿದ್ದೀತೇ? ಓಡಿ ಓಡಿ ಹುಡುಗ ದಣಿದರೂ ಇವನಿಗೆ ಎಚ್ಚರವೇ ಇಲ್ಲ, ಕುದುರೆಯ ಮೇಲೆ ಕೂತು ಕೊಂಡು ತನ್ನ ಸಡಗರದೊಳಗೇ ಹೋಗುತ್ತಾನೆ, ಎಂದನು. ಆ ಮಾತು ಕೇಳಿ ಮುದಕನು ಮಗನನ್ನು ಸಹಾ ತನ್ನ ಹಿಂದೆ ಕುಳ್ಳಿರಿಸಿ ಕೊಂಡನು.

ಬಳಿಕ ನಾಲ್ಕನೆಯವನೊಬ್ಬನು ಅವರನ್ನು ಕಂಡು,—ಈ ಕು ದುರೆ ನಿಮ್ಮದೋ, ಹೆರವರದೋ? ಎಂದು ಕೇಳಿದನು. ಅದಕ್ಕೆ ಮುದಕನು—ಅಯ್ಯಾ, ಮನೆಯ ಕುದುರೆ, ಹೆರವರದು ಯಾಕಾ ದೀತು ಅಂದನು. ಅದನ್ನು ಕೇಳಿ ಹಾದಿಕಾರನು—ಅದರ ನಡು ಮುರದೀತೆಂಬ ಎಚ್ಚರವಿಲ್ಲದೆ ಇಬ್ಬರೂ ಕೂತುಕೊಂಡದ್ದರಿಂದ ಇದು ಹೆರವರ ಕುದುರೆಯಾದೀತೆಂದು ನಾನು ಕೇಳಿದೆನು, ಕಂಡಿಯಾ! ನೀವಿಬ್ಬರು ಇದನ್ನು ಹತ್ತಿಕೊಂಡು ಹೋಗುವದಕ್ಕಿಂತ ಇದನ್ನೇ ನೀವು ಸಹಜ ಹೊತ್ತುಕೊಂಡು ಹೋಗಬಹುದು,


ಎಂದನು. ಆ ಮುದಕನು—ಒಳ್ಳೇದಯ್ಯಾ, ಇದೂ ಯಾಕಾಗ ಬಾರದು? ಎಂದು ಇಬ್ಬರೂ ಇಳಿದು, ಕುದುರೆಯ ನಾಲ್ಕೂ ಕಾಲು ಕೂಡಿಸಿ ಕಟ್ಟಿ, ನಡುವೆ ಒಂದು ಕೋಲು ಹಾಕಿ, ಇಬ್ಬರೂ ಹೆಗಲ ಮೇಲೆ ಹೊತ್ತುಕೊಂಡು ಕಂದಕದ ಮೇಲಿಂದ ಸಂತೆಯ ದಾರೀ ಹಿಡಿದು ನಡೆದರು. ಈ ಹುಚ್ಚಾಟ ನೋಡಿ ಸುತ್ತುಮುತ್ತಿನ ಮಂದಿ ಓಡಿ ಬಂದು ಹಿಂಡುಗಟ್ಟಿ ನೆರೆಯಿತು. ಅಷ್ಟರೊಳಗೆ ಅದು ಚಟ ಪಟನೆ ಒದ್ದಾಡಿ, ಕೋಲು ಮುರಿದು, ಕಂದಕದೊಳಗೆ ಬಿದ್ದು ಸತ್ತು ಹೋಯಿತು. ಕಂಡ ಕಂಡವರನ್ನೆಲ್ಲ ಸಮಾಧಾನ ಮಾಡು ವದಕ್ಕಾಗಿ ಆ ಮುದಕನು ಮಾಡಿದ ಯತ್ನವು ಕೈಗೂಡಲಿಲ್ಲ; ಕಡೆಗೆ ತಾನೇ ಮಾನಗೇಡಿಯಾಗಿ ಕುದುರೆ ಕಳಕೊಂಡು ಮನೆಗೆ ಹೋದನು.

---

## ೩೩ನೇ ಪಾಠ.

## ಪ್ರಾಮಾಣಿಕ ವರ್ತಕನು.

ಚೀನ ದೇಶದಲ್ಲಿ ಒಬ್ಬ ವರ್ತಕನು ಪ್ರಾಮಾಣಿಕತನದ ಬಗ್ಗೆ ಪ್ರಸಿದ್ಧನಾಗಿದ್ದನು. ಆತನ ಮನೆಗೆ ಒಂದು ದಿನ ಒಬ್ಬ ಬೇರೂರ ವರ್ತಕನು ಬಂದು, ಆತನ ಬಳಿಯಲ್ಲಿ ಎರಡು ಸಾವಿರ ರೂಪಾ ಯಿಯ ಬೆಳ್ಳೀ ಗಟ್ಟಿಗಳನ್ನು ಇಟ್ಟು—ನಾನು ತಿರಿಗಿ ಬರುವ ತನಕ ಇವು ನಿನ್ನ ಹತ್ತರ ಇರಲಿ ಎಂದು ಹೇಳಿ, ತನ್ನ ಊರಿಗೆ ಹೋದನು. ಕೆಲವು ದಿವಸಗಳ ತರುವಾಯ ಅಲ್ಲಿ ಆತನು ಒಮ್ಮಿಂದೊಮ್ಮೆ ಏನೋ ಆಗಿ ಸತ್ತನು. ಮುಂದೆ ಮೂರು ವರ್ಷ ತನಕ ಆ ಪ್ರಾಮಾ ಣಿಕ ವರ್ತಕನು ಆತನ ದಾರೀ ನೋಡಿದನು. ಆದರೂ ಆತನು ತಿರಿಗಿ ಬಾರದ್ದರಿಂದ ಇಷ್ಟು ದಿವಸವಾದರೂ ಅವನು ಯಾಕೆ ಬರಲಿ ಲ್ಲೆಂಬ ವಿಚಾರಕ್ಕೆ ಒಳಗಾಗಿ, ಕಡೆಗೆ ಅವನ ಗೊತ್ತುಹಚ್ಚಲಿಕ್ಕೆ



ತನ್ನ ಆಳನ್ನು ಆತನ ಊರಿಗೆ ಕಳಿಸಿದನು. ಆ ಆಳು ಹೋಗಿ ಗೊತ್ತುಹಚ್ಚಿ, ಆತನು ಸತ್ತನೆಂತಲೂ, ಮನೆಯೊಳಗೆ ಆತನ ಹೆಂಡತಿಯೂ ಹದಿನೈದು ಹದಿನಾರು ವರ್ಷದ ಒಬ್ಬ ಮಗನೂ ಉಂಟೆಂತಲೂ ಸುದ್ದೀ ತಂದನು. ಅದನ್ನು ಕೇಳಿ ಆ ವರ್ತಕನು ಪತ್ರ ಬರೆದು ಆ ಹುಡುಗನನ್ನು ತನ್ನ ಮನೆಗೆ ಕರಿಸಿಕೊಂಡು, ಆ ಬೆಳ್ಳೀ ಗಟ್ಟಿಗಳನ್ನು ಅವನಿಗೆ ತೋರಿಸಿ,—ಈ ಬದುಕು ನಿನ್ನದು, ತಕ್ಕೊಂಡು ಹೋಗು ಎಂದು ಹೇಳಿದ್ದನು. ಇದನ್ನು ಕೇಳಿ ಆ ಹುಡುಗನು ಆಶ್ಚರ್ಯ

ಗೊಂಡು, ವರ್ತಕನ ಮೋರೆಯನ್ನು ಮಿಕಿಮಿಕಿ ನೋಡುತ್ತ ಸುಮ್ಮನೇ ನಿಂತುಕೊಂಡನು. ಆವಾಗ ಆ ವರ್ತಕನು ಮುಂಚಿನ ವೃತ್ತಾಂತವನ್ನೆಲ್ಲ ಹೇಳಿ, ಆ ಬೆಳ್ಳೀ ಗಟ್ಟಿಗಳನ್ನು ಅವನಿಗೆ ಕೊಟ್ಟು ಕಳುಹಿದನು.

ಇಂಥಾ ಪ್ರಾಮಾಣಿಕತನದಿಂದ ನಡೆದದ್ದರಿಂದ ಆ ವರ್ತಕನ ಮಕ್ಕಳು ಸದ್ಗುಣಿಗಳೂ ಜಾಣರೂ ಆದರು. ಅವರಲ್ಲಿ ಒಬ್ಬನು ಚೀನ ದೇಶದೊಳಗೆ ಮುಖ್ಯ ಮಂತ್ರಿಯಾದನು. ಈತನು ಆ ಕಾರಭಾರವನ್ನು ಬಹು ಜಾಣತನದಿಂದ ಸಾಗಿಸಿದನು. ಈಗ ಸಹ ಆತನ ಮೊಮ್ಮಕ್ಕಳೂ ಮರಿಮಕ್ಕಳೂ ಆ ನಾಡೊಳಗೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುತ್ತಿದ್ದಾರೆ. ಪ್ರಾಮಾಣಿಕತನದಿಂದ ಅವನಿಗೆ ಎಷ್ಟು ಲಾಭಗಳಾದವು ನೋಡಿರಿ!

---

## ೪೫ನೇ ಪಾಠ.

## ನರಿಯು.

ನರಿಯೂ ನಾಯಿಯೂ ಒಂದೇ ವರ್ಗದವು; ನರಿಗಳು ಸುಮಾರು ಎಡೂವರೆ ಫೂಟು ನಿಡಿದು, ಒಂದೂವರೆ ಫೂಟು ಎತ್ತರ ಇರುವವು. ನರೀ ಮೈಬಣ್ಣ ಕೆಂದು; ಬೆನ್ನ ಮೇಲೆ ಕರೇ ಪಟ್ಟೆ ಇರುತ್ತದೆ; ಕಿವಿಗಳು ನಿಗರಿರುತ್ತವೆ; ಬಾಲದ ತುದಿಗೆ ದಟ್ಟ ಕೂದಲು ಇರುತ್ತವೆ. ಮೋರೆ ಸೀರ, ಉದ್ದಕ್ಕೆ ಹಾದಿರುತ್ತದೆ.

ಅದರ ಮೋರೆಯ ಮೇಲೆ ಹೆದರಿದ ಕಳೆ ಇರುವದು. ನಾಯಿ ನರಿಗಳ ಸ್ವಭಾವ ಒಂದೇ. ಸಾಕಿದ ನರೀ ಮರಿಗಳು ನಾಯಿಗಳಂತೆ ಮನುಷ್ಯರ ಈಲಾಗಿ, ನಾಯಿಗೆ ಅಂಜದೆ ಅವುಗಳ ಕೂಡ ಆಡುತ್ತವೆ. ನರಿಗಳು ಅಡವಿಯೊಳಗೆ ಮರದ ಹೊದರುಗಳಲ್ಲಿಯೂ ಗುದ್ದುಗಳಲ್ಲಿಯೂ ಇರುತ್ತವೆ. ಹಗಲೆಲ್ಲ ಅಡಗಿಕೊಂಡು ಇರುಳು



ಆಹಾರ ಹುಡುಕುವದಕ್ಕೆ ಹೊರಬೀಳುವವು. ನೂರಾರು ನರಿಗಳು ಹಿಂಡುಗಟ್ಟಿಕೊಂಡು ಬೇಟೆಯಾಡುತ್ತವೆ; ಹುಗಿದ ಹೆಣಗಳನ್ನು ಕೆದರಿ ತೆಗೆದು ತಿನ್ನುವವು.

ನರಿಗಳು ಹಗಲು ಒದರುವದಿಲ್ಲ. ಇರುಳು ಮಾತ್ರ ಒಂದು ಕೂಗಿದರೆ ಸಾಕು, ಯಾವತ್ತು ಕೂಗಹತ್ತಿ ಕಲಕಲಾಟ ಎಬ್ಬಿಸುತ್ತವೆ.

ಹೆಣ್ಣು ನರಿಯು ವರ್ಷದೊಳಗೆ ಒಂದು ಸಾರಿ ಮರೀ ಹಾಕುತ್ತದೆ; ಸರತಿಗೆ ನಾಲ್ಕೈದು ಮರಿಗಳು ಹುಟ್ಟುವವು.

# ೪೬ನೇ ಪಾಠ.

## ವೈಜನಾಥನ ಜಾತ್ರೆ.

### ನಾರಾಯಣನೂ ಮಹಾದೇವನೂ.



ಮಹಾದೇವ—ನಾರಾಯಣಾ, ನಾಳೆ ಹಬ್ಬದ ದಿವಸ ವೈಜನಾಥನ ಜಾತ್ರೆಗೆ ಹೋಗಬೇಕೆಂದು ನಾವೆಲ್ಲರು ನಿಶ್ಚಯ ಮಾಡಿದ್ದೇವೆ. ನೀನು ನಮ್ಮ ಸಂಗಡ ಬರುತ್ತೀಯಾ?

ನಾರಾಯಣ—ನಾನು ಇಂದಿಗೂ ವೈಜನಾಥನ ಗುಡ್ಡಾ ನೋಡಿಲ್ಲ. ನನ್ನ ಮನಸ್ಸಿನೊಳಗೂ ಹೋಗಬೇಕೆಂಬುವದು ಬಹು

ದಿವಸದಿಂದದೆ. ಈ ಜಾತ್ರೆ ಬಹಳ ಚಂದವಾಗುತ್ತದೆಂದು ಕೇಳು ತ್ತೇನೆ.

ಮಹಾದೇವ—ಓಹೋ, ಚಂದವೆಷ್ಟಂತ ಹೇಳಲಿ! ಈ ದಿವಸ ದೊಳಗೆ ಅಡಿವೆಲ್ಲ ಹಚ್ಚಗೆ ಒಪ್ಪುತ್ತದೆ. ಅಲ್ಲಲ್ಲಿಗೆ ನೀರು ನೆಳಲುಂಟು. ಸಾವಿರಾರು ಮಂದಿ ಸಡಗರದಿಂದ ಜಾತ್ರೆಗೆ ಹೋಗುತ್ತಿರುತ್ತಾರೆ. ಕೆಲವರು ರಥದೊಳಗೆ, ಕೆಲವರು ಕುದುರೇ ಮೇಲೆ, ಹಲವರು ನಡೆ ಯುತ್ತ ಹೋಗುತ್ತಾರೆ. ಗುಡಿಯ ಸುತ್ತುಮುತ್ತು ಗುಡಾರಗಳನ್ನು ಹೊಡೆದು, ಅಂಗಡೀ ಹಚ್ಚಿರುತ್ತಾರೆ. ಜನರು ಬೇಕಾದ ಹಣ್ಣುಹಂ ಪಲಗಳನ್ನೂ, ಬೆಂಡುಬತ್ತಾಸುಗಳನ್ನೂ ಕೊಂಡುಕೊಳ್ಳುತ್ತಾರೆ. ಗುಡ್ಡದ ಮೇಲೆ ಎಷ್ಟೋ ಜನರು ಆಡ್ಡಾಡುತ್ತಾರೆ. ಈ ಮೇರೆಗೆ ಸೊಗಸಿನಿಂದ ಅಲ್ಲಿ ಸಂಜೆ ತನಕ ಹೊತ್ತುಗಳೆದು, ಬಳಿಕ ತಿರುಗಿ, ತಮ್ ತಮ್ಮ ಮನೆಯ ಹಾದೀ ಹಿಡಿಯುತ್ತಾರೆ.

ನಾರಾಯಣ—ಒಳ್ಳೇದು, ನಾನೂ ನಿಶ್ಚಯವಾಗಿ ಬರುತ್ತೇನೆ. ನನ್ನನ್ನು ಬಿಟ್ಟು ಹೋಗಬೇಡ ಕಂಡಿಯಾ? ನಾಳೆ ನಿನ್ನ ದಾರೀ ನೋ ಡುತ್ತ ಮನೆಯೊಳಗೇ ಇರುತ್ತೇನೆ.

ಮಹಾದೇವ—ಒಳ್ಳೇದು, ಹಾಗಾದರೆ ನಾವು ಹೊರಟ ಕೂ ಡಲೇ ನಿನ್ನನ್ನು ಕರೆಯ ಕಳುಹುತ್ತೇವೆ; ಆದರೆ ಒಂದು ಮಾತು ಕೇಳತಕ್ಕದ್ದದೆ—ನಾವೆಲ್ಲರು ಒಂದು ಬಾಡಿಗೆಯ ಬಂಡೀ ಮಾಡು ತ್ತೇವೆ; ಇದಲ್ಲದೆ ಅಲ್ಲಿ ಹಣ್ಣುಹಂಪಲ ಬೆಂಡುಬತ್ತಾಸು ಮುಂತಾ ದವುಗಳನ್ನು ತಕ್ಕೊಳ್ಳುವೆವು; ಅದರ ಸಲುವಾಗಿ ನಿನ್ನ ಪಾಲಿಗೆ ಸುಮಾರು ನಾಲ್ಕು ಆಣೆ ಬಂದೀತು, ಅದಕ್ಕೆ ಹ್ಯಾಗೆ ಮಾಡುತ್ತೀ?

ನಾರಾಯಣ—ಇದು ನನ್ನಿಂದ ಆಗದ ಮಾತು; ಯಾಕಂ ದರೆ ನನ್ನ ಹತ್ತರ ಒಂದು ದುಡ್ಡು ಸಹ ಇಲ್ಲ, ನಾಲ್ಕು ಆಣೆ ರೊಕ್ಕಾ ಎಲ್ಲಿಂದ ತರಲಿ?

ಮಹಾದೇವ—ಏನಂದೀ, ನಿನ್ನ ಹತ್ತರ ರೊಕ್ಕವಿಲ್ಲವೋ? ನಿನ್ನ ತಾಯಿ ನಿನಗೆ ರೊಕ್ಕಾ ಕೊಡುವದಿಲ್ಲೇನು?

ನಾರಾಯಣ—ಹದಿನೈದು ದಿನಕ್ಕೊಮ್ಮೆ ಸಾಲೆಯ ಅಯ್ಯನ ವರಿಗೆ ಕೊಡಲಿಕ್ಕೆ ಒಂದು ದುಡ್ಡು ಕೊಡುತ್ತಾಳೆ. ತಿನ್ನುವದಾಗಲಿ ಬೇರೆ ಏನಾದರೂ ಆಗಲಿ ನನಗೆ ಬೇಕಾದರೆ, ತಾನೇ ಅದನ್ನು ಕೊಂಡು ಕೊಡುವಳು. ನನ್ನ ಕೈಯೊಳಗೆ ಆಕೆ ರೊಕ್ಕಾ ಕೊಡುವದಿಲ್ಲ; ನನಗೂ ಅವು ಬೇಕಾಗುವದಿಲ್ಲ.

ಮಹಾದೇವ—ತಾಯಿ ರೊಕ್ಕಾ ಇಡುವ ಸ್ಥಳ ನಿನಗೆ ಗೊತ್ತು ಇಲ್ಲವೇ? ನಾಲ್ಕು ಆಣೆ ರೊಕ್ಕಾ ಎಬ್ಬಿಸು, ಆಕೆಗೇನೂ ತಿಳಿಯದು. ನಿನಗೆ ಅಲ್ಲಿ ಶಿಗದಿದ್ದರೆ, ಯಾರ ಬಳಿಯಲ್ಲಾದರು ಕೈಗಡ ಇಸಕೋ, ಅಂದರೆ ಆಯಿತು.

ನಾರಾಯಣ—ಎಲಾ ಮಹಾದೇವಾ, ನೀನು ನನಗೆ ಇಂಥಾ ಕೆಟ್ಟ ಬುದ್ಧೀ ಹೇಳುತ್ತೀಯಾ? ತಾಯಿಗೆ ತಿಳಿಸದೆ·ನಾನು ಆಕೆಯ ರೊಕ್ಕಾ ಹಿಡಿಯಲೀ? ಇದು ತುಡುಗು ಮಾಡಿದ ಹಾಗೆ ಆಗುವದಿಲ್ಲವೋ? ತುಡುಗು ಮಾಡಬಾರದೆಂತಲೂ, ಸುಳ್ಳು ಹೇಳಬಾರದೆಂತಲೂ ನಮ್ಮ ಅಯ್ಯನವರು ನಮಗೆ ಯಾವಾಗಲೂ ಹೇಳುತ್ತಾರೆ; ಅದನ್ನು ನಾವು ಕಿವಿಗೊಟ್ಟು ಕೇಳುತ್ತೇವೆ. ಹೀಗಿದ್ದು ನಾವು ಇಂಥಾ ಕೆಟ್ಟ ಕೆಲಸ ಮಾಡಿದರೆ, ಅಯ್ಯನವರು ಹೇಳಿ ಫಲವೇನು? ನಾವು ಕೇಳಿ ಫಲವೇನು? ಒಮ್ಮೆ ತುಡುಗು ದಕ್ಕಿದರೆ, ಮುಂದೆ ಅದರ ಸವಿ ಹತ್ತುತ್ತದೆ. ನಾನು ರೊಕ್ಕಾ ಕದಿಯುವದು ತಾಯಿಗೆ ತಿಳಿದರೆ, ಆಕೆ ನನ್ನನ್ನು ಬಡಿದಾಳು, ಮುಂದೆ ನನ್ನ ಮೇಲೆ ಪ್ರೀತಿ ಮಾಡಳು. ಇದರ ಸಲುವಾಗಿ ಮಹಾದೇವಾ, ನೀನು ನನಗೆ ಇಂಥಾ ಮಾತು ಕಲಿಸಬೇಡ. ಕೊಡಲಿಕ್ಕೆ ನನ್ನ ಕೈಯೊಳಗೆ ರೊಕ್ಕ ವಿಲ್ಲದ್ದರಿಂದ, ನಾನು ಬಂಡಿಯೊಳಗೂ ಕೂಡ್ರುವದಿಲ್ಲ, ಬೆಂಡುಬತ್ತಾಸುಗಳನ್ನೂ ತಿನ್ನುವದಿಲ್ಲ; ಆದರೆ ಹೀಗೆ ಮಾಡಿದರೆ, ಚಾತ್ರೆಯ ನೋಡದ ಹಾಗಾದೀತೇನು?

ಮಹಾದೇವ—ಒಳ್ಳೇದು, ಇರಲಿ, ನೀನು ಅಂದಂತೆಯೇ ಆಗಲಿ; ಆದರೆ ನಾವು ಬಂಡಿಯೊಳಗೆ ಕೂತುಕೊಂಡು ಹೋಗುವಾಗ ನಮ್ಮ

ಬಂಡಿಯು ಕೂಡ ನಿನ್ನಿಂದ ಹ್ಯಾಗೆ ನಡೆಯುವದಾದೀತು? ನಾವು ಮುಂದೆ ಹೋಗುವೆವು; ನೀನು ಹಿಂದೆ ಉಳಿಯುವಿ. ನಮಗೂ ನಿನಗೂ ತಪ್ಪುಗಂಟಾದೀತು. ಬಳಿಕ ಮಂದಿಯ ದಟ್ಟಣೆಯೊಳಗೆ ನೀನೆಲ್ಲಿ, ನಾವೆಲ್ಲಿ, ನಿನಗೆ ತೋರಿಸುವವರ್ಯಾರು?

ನಾರಾಯಣ—ಹಾಗಾದರೆ ನಿಮ್ಮ ಕೂಡ ಬರುವದು ತರವಲ್ಲ. ನನ್ನ ಹಾಗೆ ನಡೆಯುತ್ತ ಹೋಗುವವರ ಸಂಗಡ ನಾನು ಹೋಗುವೆನು. ಆದರೆ ನೀನು ನನಗೆ ಬುದ್ಧೀ ಹೇಳಿದಂತೇ ಇನ್ನೊಬ್ಬರಿಗೆ ಹೇಳಿದರೆ, ನಿನ್ನನ್ನು ಯಾರೂ ನಂಬರು.

---

## ೪೭ನೇ ಪಾಠ.

### ಚಂದನ.

ಚಂದನದ ಗಿಡಗಳು ಚೀನ ದೇಶದಲ್ಲಿಯೂ ಮಲಿಯಾಳ ಪ್ರಾಂತದಲ್ಲಿಯೂ ಬಹಳ. ಬೇರೆ ಕೆಲವು ನಾಡುಗಳಲ್ಲಿ ಈ ಗಿಡಗಳು ಬೆಳೆಯುತ್ತವೆ; ಆದರೆ ಮೇಲಾದ ಚಂದನವು ಮೇಲೆ ಹೇಳಿದ ಎರಡು ನಾಡುಗಳಲ್ಲಿ ಹುಟ್ಟುತ್ತದೆ. ಚಂದನದ ಗಿಡಗಳು ಬಹುತರವಾಗಿ ಅಡವಿಗಳಲ್ಲಿ ಬೆಳೆಯುತ್ತವೆ. ಕೆಲಕೆಲವು ಸ್ಥಳಗಳಲ್ಲಿ ಶ್ರೀಮಂತರು ಅವುಗಳನ್ನು ಚಂದಕ್ಕಾಗಿಯೂ ಸುಗಂಧಕ್ಕಾಗಿಯೂ ತಮ್ಮ ತೋಟಗಳಲ್ಲಿ ಹಚ್ಚಿಸುತ್ತಾರೆ.

ಗಿಡವು ಹಳೆದಾದ ಬಳಿಕ ಅದನ್ನು ಕಡಿದು ಕೊರಡುಗಳನ್ನು ಮಾಡಿ ನೆಲದೊಳಗೆ ಹೂಳುತ್ತಾರೆ. ಕೆಲವು ದಿವಸಗಳ ತರುವಾಯ ಅವುಗಳನ್ನು ಹೊರಗೆ ತೆಗದು ಕೆತ್ತಿ, ನೆಟ್ಟಗೆ ಮಾಡುತ್ತಾರೆ. ಚಂದನದ ಕೊರಡುಗಳು ಕೆಂಪಾಗಿಯೂ ತೋಲವಾಗಿಯೂ ಸುಗಂಧವಾಗಿಯೂ ಇದ್ದ ಹಾಗೆ ಹೆಚ್ಚು ಬೆಲೆಗಾಣುತ್ತವೆ.

ಚಂದನದಿಂದ ಪೆಟ್ಟಿಗೆ, ಕರಡಿಗೆ, ಬೀಸಣಿಕೆ ಮುಂತಾದವುಗಳನ್ನು ಮಾಡುತ್ತಾರೆ. ಚೀನದಲ್ಲಿ ಚಂದನದ ಒಡವೆಗಳು ಬಹಳ ಹುಟ್ಟುತ್ತವೆ. ಇದರ ಎಣ್ಣೆಗೆ ಗಂಧದ ಎಣ್ಣೆ ಎಂದೆನ್ನುತ್ತಾರೆ. ಹುರುಕು, ಕಜ್ಜಿ ಹತ್ತಿದರೆ, ಗಂಧದ ಎಣ್ಣೆ ಹಚ್ಚಿಕೊಳ್ಳುವರು. ಮಲಬಾರ ಪ್ರಾಂತದವರು ಲಕ್ಷಗಟ್ಲೆ ಇದರ ವ್ಯಾಪಾರ ಸಾಗಿಸಿ ಹೊಟ್ಟೇ ತುಂಬಿಕೊಳ್ಳುತ್ತಾರೆ.

---

## ೪೮ ನೇ ಪಾಠ.

### ರಾಮನೂ, ರಾಧೆಯೂ.

ಬೇಸಿಗೆಯಲ್ಲಿ ಒಂದು ದಿನ ಸ್ವಾಮಿರಾಯನೆಂಬವನು—ಈ ಹೊತ್ತು ಸಂಜೆಯ ಮುಂದೆ ನಿಮ್ಮಿಬ್ಬರನ್ನು ಊರ ಮುಂದಿನ ಹೂದೋಟಕ್ಕೆ ಕರಕೊಂಡು ಹೋಗುವೆನು, ಎಂದು ತನ್ನ ಮಕ್ಕಳಾದ ರಾಮನಿಗೂ ರಾಧೆಗೂ ಹೇಳಿದ್ದನು. ಮೂರುಸಂಜೆಯಾದ ಕೂಡಲೇ ಸ್ವಾಮಿರಾಯನು ಅಂಗೀ ಮುಂಡಾಸ ಹಾಕಿಕೊಳ್ಳಲಿಕ್ಕೆ ತನ್ನ ಕೋಣೆಯೊಳಗೆ ಹೋದನು; ಆಗ ಆ ಮಕ್ಕಳು ಹೊರಗೆ ಕಟ್ಟೆಯ ಮೇಲೆ ಆಡುತ್ತಿದ್ದರು. ತಂದೆಯ ಕೂಡ ಹೂವಿನ ತೋಟಕ್ಕೆ ಹೋಗುತ್ತೇನೆಂದು ರಾಮನು ಹಿರ್ರನೆ ಹಿಗ್ಗಿ, ಇತ್ತಲಿಂದತ್ತ, ಅತ್ತಲಿಂದಿತ್ತ ಉಲ್ಲಾಸದಿಂದ ಓಡ್ಯಾಡಿ ಹಾರ್‍ಯಾಡುತ್ತಿರುವಾಗ, ಅವನ ಒಲ್ಲಿಯ ಸೆರಗು ತಾಕಿ ಅಲ್ಲಿಟ್ಟಿದ್ದ ಕುಂಡದೊಳಗಿನ ಗಿಡದ ಹೂವು ಕೆಳಗೆ ಬಿತ್ತು. ರಾಧೆಯು ಆ ಹೂವ ಕೈಯೊಳಗೆ ತಕ್ಕೊಂಡು,—ಅಣ್ಣಾ, ಇದೇನು ಮಾಡಿದಿ, ನೋಡು! ಎಂದು ತೋರಿಸುವಷ್ಟರೊಳಗೆ ಸ್ವಾಮಿರಾಯನು ಒಳಗಿಂದ ಬಂದು, ರಾಧೆಯ ಕೈಯೊಳಗಿನ ಹೂವ ಕಂಡು,—ಏನೇ ತಂಗೀ, ಬೀಜಕ್ಕೆ ಬಿಟ್ಟ ಹೂವ ಕೊಯ್ಯುಬೇಕೇ? ಎಂದು ಶಿಟ್ಟು ಮಾಡಿದನು. ರಾಧೆಯು ಗದಗದನೆ ನಡುಗಿ, ಅಯ್ಯಾ, ಶಿಟ್ಟಾಗಬಾರದು! ತಾಳಬೇಕು! ಎಂದು ತಂದೆಗೆ ತಲೆ

ಬಾಗಿ ಹೇಳಿಕೊಂಡಳು. ಸ್ವಾಮಿರಾಯನು ಸಿಟ್ಟು ತಡಕೊಂಡು,— ತಂಗೀ, ಸಿಟ್ಟಿನ ಮಾತಲ್ಲ; ಈಗ ನಾವು ಹೆರವರ ತೋಟಕ್ಕೆ ಹೋಗುವವರು; ಅಲ್ಲಿಯಾದರೂ ನೀನು ಹೀಗೆಯೇ ಹೂವ ಹರಿಯುವಿ. ಆದದರಿಂದ ನಿನ್ನನ್ನು ತೋಟಕ್ಕೆ ಕರಕೊಂಡು ಹೋಗುವದಿಲ್ಲ.

ರಾಧೆಯು ಕೆಳಗೆ ಮೋರೆ ಮಾಡಿಕೊಂಡು ಸುಮ್ಮನೇ ನಿಂತಳು. ಅದನ್ನು ಕಂಡು ರಾಮನು ಸುಮ್ಮನೆ ಇರದೆ, ಕಣ್ಣು ತುಂಬಾ ನೀರ ತಂದು, ತಂದೆಯ ಬಳಿಗೆ ಹೋಗಿ,—ಅಯ್ಯಾ, ಈ ತಪ್ಪು ಮಾಡಿದಾಕೆ ತಂಗಿಯಲ್ಲ; ಓಡ್ಯಾಡುವಾಗ ನನ್ನ ಒಲ್ಲಿ ತಾಕಿ ಆ ಹೂವು ಬಿತ್ತು; ನನ್ನಿಂದ ತಪ್ಪಾಯಿತು. ಆದಕಾರಣ ನನ್ನನ್ನೇ ಮನೆಯೊಳಗೆ ಬಿಟ್ಟು, ತಂಗಿಯನ್ನು ತೋಟಕ್ಕೆ ಕರಕೊಂಡು ಹೋಗಿರಿ ಎಂದು ಹೇಳಿದನು.

ಆಗ ಸ್ವಾಮಿರಾಯನು ಮಕ್ಕಳ ನೀತಿಯನ್ನೂ, ಒಬ್ಬರ ಮೇಲೊಬ್ಬರು ಮಾಡುವ ಮಮತೆಯನ್ನೂ ಕಂಡು ಮನದೊಳಗೆ ಹಿಗ್ಗಿ, ಅವರಿಬ್ಬರನ್ನು ಅಪ್ಪಿಕೊಂಡು ಮುದ್ದಾಡಿ,—ಮಕ್ಕಳಿರಾ, ನೀವಿಬ್ಬರೂ ನನ್ನ ಸಂಗಡ ತೋಟಕ್ಕೆ ಬರ್ರಿ, ಅಂದ ಕೂಡಲೆ ರಾಮನಿಗೂ ರಾಧೆಗೂ ಬಹಳ ಸಂತೋಷವಾಯಿತು. ಇಬ್ಬರೂ ತಂದೆಯ ಕೂಡ ತೋಟಕ್ಕೆ ಹೋದರು. ತೋಟದೊಳಗಿನ ಬಗೆಬಗೆಯ ಬಳ್ಳಿಗಳನ್ನು ನೋಡಿದರು. ಹೂವಿನ ಗಿಡದ ಸಾಲುಗಳೊಳಗಿಂದ ಹೋಗುವಾಗ ರಾಮನೂ ರಾಧೆಯೂ ಅಲ್ಲಿಯ ಹೂಗಳಿಗೆ ಕೈ ಹಚ್ಚದೆ ತಮ್ಮ ಅರಿವೆಗಳನ್ನು ಮುದುಡಿಕೊಂಡು ಅವುಗಳಿಗೆ ತಾಕಗೊಡದೆ ಬಹಳ ಎಚ್ಚರದಿಂದ ನಡೆಯುತ್ತಿದ್ದರು. ಇದನ್ನು ಕಂಡು ಸ್ವಾಮಿರಾಯನು ಬಹಳ ಆನಂದ ಪಟ್ಟನು.

---

# ೪೧ನೇ ಪಾಠ.

## ಒಡೆದ ಕನ್ನಡಿ.

ಒಬ್ಬ ಗೃಹಸ್ಥನಿಗೆ ಶಂಕರ, ಸೀತೆ ಎಂಬ ಇಬ್ಬರು ಮಕ್ಕಳಿದ್ದರು. ಅವರು ಒಂದು ದಿನ ಪಡಸಾಲೆಯೊಳಗೆ ಆಡುತ್ತಿದ್ದರು. ಅಲ್ಲಿ ಒಂದು ಕನ್ನಡಿ ಇಟ್ಟಿತ್ತು; ಅದನ್ನು ಅವರು ನೋಡದೆ, ಆಡುತ್ತಾಡುತ್ತ ಶಂಕರನು ಸೀತೆಯನ್ನು ತುಸು ದಬ್ಬಿದ್ದರಿಂದ, ಆಕೆಯ ಕಾಲು ತಾಕಿ ಆ ಕನ್ನಡಿಯು ಒಡಿಯಿತು. ಆಗ ಸೀತೆ — ಓಹೋ! ಕನ್ನಡೀ ಒಡದಿಯಾ, ಅಣ್ಣಾ! ಹೀಗೆ ನೂಕಬೇಕೇ? ಇನ್ನು ಅಪ್ಪ ಬಂದ ಬಳಿಕ ಬಡಿಯುತಾನ್ನೆ, ಹ್ಯಾಗೆ ಮಾಡೋಣಾ? ನಾನು ಅಣ್ಣನೇ ಕನ್ನಡಿ ಒಡಿದನೆಂದು ಹೇಳುತ್ತೇನೆ.

ಶಂಕರ—ತಂಗೀ, ಸುಳ್ಳು ಹೇಳುತ್ತೀಯಾ? ನನಗೇನು ಬಾಯಿ ಇಲ್ಲವೇ ಹೇಳಲಿಕ್ಕೆ? ನಾನು ಅದರ ಗೊಡವೆಗೆ ಹೋಗಲಿಲ್ಲ, ಸೀತೆಯೇ ತುಳಿದು ಕನ್ನಡೀ ಒಡಿದು ನನ್ನ ಮೇಲೆ ಹಾಕುತ್ತಾಳೆಂದು ಹೇಳುವೆನು.

ಸೀತೆ—ನನ್ನ ಕಾಲು ತಾಕಿ ಕನ್ನಡಿ ಒಡಿಯಿತು ಸರಿ; ಆದರೆ ನಾನು ಬೇಕಂತ ಒಡಿದೆನೋ? ನೀನು ನೂಕಿದ್ದರಿಂದ ನನ್ನ ಕಾಲು ತಗಲಿ ಒಡಿಯಿತೋ? ನೀನೇ ಹೇಳು.

ಶಂಕರ—ನಿನ್ನನ್ನು ನೂಕಲಿಲ್ಲೆಂದು ನಾನು ಅನ್ನುವದಿಲ್ಲ, ಆಡುವಾಗ ಒಬ್ಬರಿಗೊಬ್ಬರು ನೂಕಾಡುವದುಂಟು; ಆದರೆ ನಾನು ನೂಕಿದರೆ, ನೀನು ಕನ್ನಡೀ ಮೇಲೆ ಕಾಲು ಇಡಬೇಕೇನು?

ಸೀತೆ—ಅಣ್ಣಾ, ನೀನು ಆಡುವದು ತುಂಟಕತನದ ಮಾತು, ನೀನು ನೂಕಿದ್ದರಿಂದ ಕನ್ನಡಿಗೆ ನನ್ನ ಕಾಲು ತಾಕಿತು ಎಂದು ನಾನು ಅನ್ನುತ್ತೇನೆ; ಕನ್ನಡಿಯ ಮೇಲೆ ನೀನು ಕಾಲು ಇಟ್ಟೆ ಎಂದು ನೀನು ಅನ್ನುತ್ತೀ; ಅಂದರೆ ಬೇಕಂತ ಕನ್ನಡೀ ಒಡಿದಳೆಂದು ನೀನು ಅಂಬುವದಲ್ಲವೇ?

ಶಂಕರ—ತಂಗೀ, ನೀನು ಒಡಿದದ್ದೇನು, ನಾನು ಒಡಿದದ್ದೇನು, ಎಲ್ಲಾ ಒಂದೇ ಸರಿ; ಆದರೆ ಮುಂದೆ ಹ್ಯಾಗೆ ಮಾಡಬೇಕು ಹೇಳು. ಅಪ್ಪ ಹೊಡೆಯುವನು.

ಸೀತೆ—ಅದಕ್ಕೆ ಮತ್ತೊಂದು ಮಾರ್ಗವಿಲ್ಲ; ಆದ ಸಂಗತಿಯನ್ನೆಲ್ಲ ನಿಜವಾಗಿ ತಿಳಿಸಿದರೆ ಆಯಿತು. ಆ ಮೇಲೆ ಶಿಟ್ಟು ಮಾಡಿದರೂ ಬಹಳ ಮಾಡಲಿಕ್ಕಿಲ್ಲ.

ಶಂಕರ—ಛೀ ಛೀ, ಅದೇನು ಕೆಲಸದ್ದಲ್ಲ; ನಾವು ಯಾವ ಮಾತು ಆಡಲೇ ಬಾರದು. ಇಲ್ಲಿಂದ ಮೆಲ್ಲಗೆ ಹೊರಟು ತೋಟಕ್ಕೆ ಆಡಲಿಕ್ಕೆ ಹೋದರಾಯಿತು; ಯಾರು ಒಡಿದರೋ ಏನೋ, ನಮಗೆ ಅದರ ಸುದ್ದಿಯೇ ಇಲ್ಲವೆಂಬ ಹಾಗೆ ಇರಬೇಕು.

ಸೀತೆ—ಅಣ್ಣಾ, ಈ ಹಂಚಿಕೆ ನೆಟ್ಟಗಲ್ಲ; ನಾವು ಇಲ್ಲಿ ಆಡುವದನ್ನು ಎಲ್ಲರೂ ನೋಡಿದ್ದಾರೆ. ನಾವೇ ಕನ್ನಡಿ ಒಡಿದದ್ದು ನಿಜವಾಗುವದು. ಮೊದಲು ಸುಳ್ಳು ಹೇಳಿ ಹಿಂದುಗಡೆ ಒಪ್ಪಿಕೊಳ್ಳುವದೇನು ಚಂದ? ಮೊದಲೇ ಒಪ್ಪಿಕೊಳ್ಳುವದು ನೆಟ್ಟಗೆ.

ಶಂಕರ—ಒಳ್ಳೇದು, ಹಾಗೇ ಆಗಲಿ. ಆದರೆ ತಂದೆಗೆ ಹೇಳಲಿಕ್ಕೆ ನನಗೆ ಅಂಜಿಕೆ ಬರುತ್ತದೆ. ತಾಯಿಯ ಬಳಿಗೆ ಹೋಗಿ ತಿಳಿಸುವಾ, ಬಾ. ಆಕೆಯ ಬಳಿಯಲ್ಲಾದರೂ ನಾನು ಮಾತಾಡುವದಿಲ್ಲ, ನೀನೇ ಮಾತಾಡು.

ಸೀತೆ—ಒಳ್ಳೇದು, ತಾಯಿಗೆ ಹೇಳಿಕೊಂಡರೆ, ಆಕೆ ಅಪ್ಪನ ಶಿಟ್ಟು ಇಳಿಸುವಳು. ಈ ಮೇರೆಗೆ ಮಾತಾಡಿ ಅವರಿಬ್ಬರು ತಾಯಿಯ ಬಳಿಗೆ ಹೋದರು.

ಅವರ ತಾಯಿ ಮನೆಯೊಳಗೆ ಅಕ್ಕೀ ಬ್ಯಾಳೀ ಹಸನ ಮಾಡುತ್ತ ಕುಳಿತಿದ್ದಳು; ಆಕೆಯ ಹತ್ತರ ಹೋಗಿ, ಸುಮ್ಮನೇ ಕುಳಿತುಕೊಂಡರು. ಮೊದಲು ಅವರ ಬಾಯಿಂದ ಮಾತುಗಳೇ ಹೊರಡಲಿಲ್ಲ. ತುಸು ಹೊತ್ತಿನ ಮೇಲೆ ತಾಯಿ—ಮಕ್ಕಳಿರಾ, ನೀವು ಅದೇನು ಬಗೆ ಸುಮ್ಮನೇ ಕುಳಿತುಕೊಂಡಿರಿ? ಏನೂ

ಮಾತಾಡದೆ ಹೀಗೆ ಕುಳಿತದ್ದು ನನಗೆ ಬಹು ಸೋಜಿಗವಾಗಿದೆ, ಎಂದ ಕೂಡಲೆ ಸೀತೆ ಬಿಕ್ಕಿ ಬಿಕ್ಕಿ ಅಳಹತ್ತಿದಳು; ಶಂಕರನೂ ಸಣ್ಣ ಮೋರೆ ಮಾಡಿಕೊಂಡು ಕಣ್ಣು ಒರಸಿಕೊಳ್ಳಹತ್ತಿದನು. ಅದನ್ನು ನೋಡಿ ತಾಯಿ—ಸೀತೇ, ಯಾಕೆ ಅಳುತ್ತೀ? ಏನಾಯಿತೋ, ಶಂಕರಾ? ಯಾರನ್ನಾದರೂ ಕೆಣಕಿ ಶಿಟ್ಟು ಮಾಡಿಸಿಕೊಂಡಿರೋ? ಯಾರಾದರೂ ಬಡಿದರೋ? ಏನಾಯಿತು? ಹೇಳಿರಿ, ಅಳಬೇಡಿರಿ, ಅಂದಳು.

ಸೀತೆ ಕಣ್ಣು ಒರಸಿಕೊಳ್ಳುತ್ತ—ಅವ್ವಾ, ಇಂದು ನಮ್ಮಿಂದ ಒಂದು ತಪ್ಪಾಯಿತು; ನೀನು ಶಿಟ್ಟು ಮಾಡದಿದ್ದರೆ ಹೇಳುತ್ತೇನೆ.

ತಾಯಿ—ಅದೇನು ಹೇಳು, ನನ್ನ ಮಗಳೇ, ಹೆದರಬೇಡ.

ಸೀತೆ—ನಾನೂ ಅಣ್ಣನೂ ಪಡಸಾಲೆಯೊಳಗೆ ಆಡುತ್ತಿದ್ದೆವು; ಅಲ್ಲಿ ಕನ್ನಡಿ ಇದ್ದದ್ದು ನಮಗೆ ಗೊತ್ತು ಇದ್ದಿಲ್ಲ; ಆಡುವಾಗ ನನ್ನ ಕಾಲು ತಾಕಿ, ಆ ಕನ್ನಡಿ ಒಡಿಯಿತು; ಇದು ತಿಳಿದರೆ ಅಪ್ಪ ಬಡಿದಾನೆಂದು ನಾವು ಹೆದರಿಕೊಂಡಿದ್ದೇವೆ.

ತಾಯಿ—ಹೀಗಾಯಿತೇ? ಒಳ್ಳೇದು, ನನ್ನ ಬಳಿಗೆ ಬಂದು ನೀವು ತಪ್ಪು ಒಪ್ಪಿಕೊಂಡದರಿಂದ ನನಗೆ ಬಹಳ ಸಂತೋಷವಾಯಿತು. ಮಕ್ಕಳಿರಾ, ಇನ್ನು ಅಂಜಬೇಡಿರಿ! ನಾನು ಅವರಿಗೆ ಹೇಳಿಕೊಳ್ಳುವೆನು, ನೀವು ಸುಳ್ಳು ಹೇಳಿದ್ದರೆ ಮಾತ್ರ ನಿಮ್ಮನ್ನು ಅವರು ಬಡಿಯುತ್ತಿದ್ದರು.

---

## ೫೦ನೇ ಪಾಠ.

### ತೋಳವು.

ತೋಳವೂ ನಾಯಿಯೂ ಒಂದೇ ವರ್ಗದವು; ಆದರೆ ನಾಯಿಗಳಿಗಿಂತ ತೋಳಗಳು ತುಸು ದೊಡ್ಡವು. ಇವುಗಳ ಕಿವಿ ನಿಗರಿರುತ್ತವೆ; ಬಾಲದ ತುದಿಗೆ ದಟ್ಟಗೂದಲು ಇರುವವು; ಕಣ್ಣುಗಳು ಯಾಸಿಯಾಗಿ, ಗುಡ್ಡೆಗಳು ಹಚಗೆ ಹೊಳೆಯುತ್ತವೆ. ಈ ನಾಡೊಳಗಿನ



ತೋಳಗಳು ಕೆಂಪಿನ ಮೇಲಿರುತ್ತವೆ. ಬೇರೆ ಕೆಲವು ನಾಡುಗಳಲ್ಲಿ ಬಿಳೇ ತೋಳಗಳೂ, ಕರೇ ತೋಳಗಳೂ ಉಂಟು.

ತೋಳಗಳಲ್ಲಿ ಸಿಟ್ಟು, ಟಕ್ಕು, ಹೆದರಿಕೆ ಬಹಳ. ಜೀವದಿಂದ ಇದ್ದ ಪ್ರಾಣಿಗಳ ನಾತವನ್ನೂ ಸತ್ತ ಪ್ರಾಣಿಗಳ ನಾತವನ್ನೂ ಅವು ದೂರಿಂದಲೇ ಗೊತ್ತು ಹಿಡಿಯುತ್ತವೆ.


ತೋಳಗಳು ಹಸಿದ ಕೂಡಲೆ ಹೊರಬಿದ್ದು, ದನ, ಕುರಿ ಮುಂತಾದವುಗಳನ್ನು ಕೊಂದು ತಿನ್ನುತ್ತವೆ. ಒಂಟಿದೋಳಗಳೇ ಬಹುತರವಾಗಿ ತಿರುಗುವವು. ಅವು ಆಹಾರದ ನಾತ ತಿಳುಕೊಳ್ಳುವದಕ್ಕಾಗಿ ಗಾಳಿಗೆ ಎದುರಾಗಿ ಹೋಗುತ್ತವೆ; ಕೊಳಿತ ಹೆಣಗಳನ್ನೂ ಕೆದರಿ ತಿನ್ನುವವು. ರಣದೊಳಗಿನ ಹೆಣಗಳನ್ನು ತಿನ್ನುವದಕ್ಕಾಗಿ ತೋಳಗಳು ಒಮ್ಮೊಮ್ಮೆ ದಂಡಿನ ಹಿಂದಿಂದೆ ಹೋಗುತ್ತವೆ. ಇವು ಬಹಳ ತಿನಿಸುಬಕ್ಕ ಪ್ರಾಣಿಗಳು.

ಹೆಣ್ಣು ತೋಳವು ಗಬ್ಬಾಗಿ ಮೂರುವರೆ ತಿಂಗಳಿಗೆ ಈಯುತ್ತದೆ. ಸರತಿಗೆ ಐದಾರು ಮರಿಗಳು ಹುಟ್ಟುವವು. ಹುಟ್ಟಿದಾಗ ಆ ಕುನ್ನಿಗಳು ಕುರುಡು ಇರುತ್ತವೆ. ಹೆಣ್ಣು ತೋಳವು ಅವುಗಳಿಗೆ ಒಂದೆರಡು ತಿಂಗಳು ಮೊಲೆ ಕುಡಿಸಿ, ಆ ಮೇಲೆ ತುಸು ತುಸು ಮಾಂಸ ತಂದು, ಅವುಗಳಿಗೆ ತಿನಿಸುತ್ತದೆ. ಹೆಣ್ಣು ತೋಳವು ಈಯುಲಾದ ಕೂಡಲೆ ಅಡವಿಯೊಳಗೆ ಬೇರೆ ಒತ್ತಟ್ಟಿಗೆ ಸಳವನ್ನು ನೋಡಿ, ಅಲ್ಲಿಯ ಮುಳ್ಳು ಕಲ್ಲುಗಳನ್ನು ತೆಗೆದು, ಹಾವಸೆಯನ್ನಾಗಲಿ, ಹುಲ್ಲನ್ನಾಗಲಿ ತಂದು ಹಾಸಿ, ತನ್ನ ಮರಿಗಳ ಸಲುವಾಗಿ ಮೆತ್ತಗೆ ಮಾಡುತ್ತದೆ. ಇವುಗಳ ಬೆಳವಣಿಗೆ ಮೂರು ವರ್ಷ; ಇವು ಹದಿನೈದು ಹದಿನಾರು ವರ್ಷ ಬದುಕುತ್ತವೆ.

---


## ೫೧ನೇ ಪಾಠ.

### ಘಡಿಯಾಳ.




ಘಡಿಯಾಳವೆಂದರೆ ಹೊತ್ತು ತೋರಿಸುವ ಯಂತ್ರವು. ಅದರ ಮೇಲ್ಭಾಗದಲ್ಲಿ ಒಂದು ಬಟ್ಟನ್ನ ತಗಡು ಕೂಡ್ರಿಸಿ, ಮೇಲೆ

ಅಂಕಿಗಳನ್ನು ಹಾಕಿರುತ್ತಾರೆ. ಆ ತಗಡಿನ ನಡುವೆ ಸಣ್ಣದೊಂದೂ ದೊಡ್ಡದೊಂದೂ ಎರಡು ಮುಳ್ಳುಗಳು ಹಚ್ಚಿರುತ್ತವೆ; ಅವು ಯಾವಾಗಲು ತಿರುಗುತ್ತಿರುತ್ತವೆ. ಸಣ್ಣ ಮುಳ್ಳು ತಾಸು ತೋರಿಸುತ್ತದೆ; ದೊಡ್ಡ ಮುಳ್ಳು ಮಿನ್ಯುಟು ತೋರಿಸುತ್ತದೆ. ಕೆಲವು ಘಡಿಯಾಳಗಳಿಗೆ ಮೂರನೆದೊಂದು ಸಣ್ಣ ಮುಳ್ಳು ಇರುವದು; ಅದು ಸೇಕಂದು ತೋರಿಸುತ್ತದೆ.



ಘಡಿಯಾಳಗಳೊಳಗೆ ಮುಖ್ಯವಾಗಿ ಕಿಸೆಯೊಳಗೆ ಹಾಕುವ ಸಣ್ಣ ಘಡಿಯಾಳವೂ, ಮನೆಯಲ್ಲಿಡುವ ದೊಡ್ಡ ಘಡಿಯಾಳವೂ ಎಂಬ ಎರಡು ತರಗಳುಂಟು. ಕೆಲವು ಘಡಿಯಾಳಗಳು ತಾರೀಖು ತಿಂಗಳುಗಳನ್ನು ಸಹ ತೋರಿಸುತ್ತವೆ. ದೊಡ್ಡ ಘಡಿಯಾಳಗಳು ಬಹುತರವಾಗಿ ತಾಸು ಬಡಿಯುತ್ತವೆ. ಕೆಲವು ದೊಡ್ಡ ಘಡಿಯಾಳಗಳಿಗೆ ದಿನಕ್ಕೊಮ್ಮೆ, ಕೆಲವುಗಳಿಗೆ ವಾರಕ್ಕೊಮ್ಮೆ, ಕೆಲವುಗಳಿಗೆ ತಿಂಗಳಿಗೊಮ್ಮೆ ಕೀಲೀ ಕೊಡಬೇಕಾಗುತ್ತದೆ. ಒಂದು ನಿಮಿಷವಾದರೂ ಹೆಚ್ಚುಕಡಿಮೆಯಾಗದೆ ಒಂದೇ ಸವನೆ ಚನ್ನಾಗಿ ನಡೆಯುವಂಥ ಘಡಿಯಾಳಗಳಿಗೆ ಕ್ರೊನಾಮಿಟರ್ (ಕಾಲಮಾಪಕ ಯಂತ್ರ) ಎಂಬ ಹೆಸರು. ಇವುಗಳನ್ನು ಹಡಗ ನಡಿಸುವವರು ಉಪಯೋಗಿಸುತ್ತಾರೆ. ದೊಡ್ಡ ದೊಡ್ಡ ಘಡಿಯಾಳಗಳನ್ನು ಗುಡಿಗಳ ಮೇಲೆಯೂ ಎತ್ತರವಾದ ಮನೆಗಳ ಮೇಲೆಯೂ

ಹಚ್ಚುವದುಂಟು. ಸ್ಟ್ರಾಸ್ಬರ್ಗವೆಂಬ ಪಟ್ಟಣದೊಳಗಿನದೊಂದು ಗುಡಿಯ ಮೇಲೆ ಒಂದು ಪ್ರಸಿದ್ಧವಾದ ಘಡಿಯಾಳವದೆ, ಅದು ಪೃಥ್ವಿಯ ಮೇಲಿನ ಯಾವತ್ತು ಘಡಿಯಾಳಗಳಿಗಿಂತ ಬಹಳ ದೊಡ್ಡದು. ಕಿಸೆಯೊಳಗೆ ಹಾಕುವ ಘಡಿಯಾಳಗಳು ಬಹಳ ದೊಡ್ಡವೆಂದರೆ ಹೆಂಗಸರ ಕೈಯೊಳಗಿನ ಕಾಜಿನ ಬಳೆಯಷ್ಟು ಇರುತ್ತವೆ; ತೀರ ಸಣ್ಣವಂದರೆ ಚೌಲಿಯಷ್ಟು ಇರುತ್ತವೆ; ಇಷ್ಟು ಸಣ್ಣ ಘಡಿಯಾಳಗಳನ್ನು ಉಂಗರದ ಮೇಲೆ ಹರಳು ಕೂಡ್ರಿಸುವಂತೆ ಕೂಡ್ರಿಸುವರು. ಸಣ್ಣ ಘಡಿಯಾಳಗಳಿಗೆ ದಿನಾಲು ಕೀಲೀ ಕೊಡಬೇಕಾಗುತ್ತದೆ. ಇವು ಬಹುತರವಾಗಿ ತಾಸು ಬಾರಿಸುವದಿಲ್ಲ.

ಹತ್ತು ರೂಪಾಯಿ ಮೊದಲ್ಗೊಂಡು ಸಾವಿರಾರು ರೂಪಾಯಿ ತನಕ ಘಡಿಯಾಳಗಳು ಇರುತ್ತವೆ. ಸಣ್ಣ ಘಡಿಯಾಳಗಳು ಹದಿನಾರನೇ ಶತಮಾನದಲ್ಲಿ ಜರ್ಮನಿಯೊಳಗಿನ ನ್ಯೂರೆಂಬರ್ಗ ಎಂಬ ಊರಲ್ಲಿ ಮೊದಲು ಹುಟ್ಟಿದವು. ಆಗ ಅವುಗಳಿಗೆ ಜನರು ನ್ಯೂರೆಂಬರ್ಗದ ತತ್ತಿಗಳೆಂದೆನ್ನುತ್ತಿದ್ದರು. ಈಗ ಜಿನೀವಾ, ಲಂಡನ್, ಪಾರಿಸ ಮೊದಲಾದ ಪಟ್ಟಣಗಳಲ್ಲಿ ತರತರದ ಘಡಿಯಾಳಗಳು ಬಹಳ ಆಗುತ್ತವೆ.

ಘಡಿಯಾಳದಿಂದ ನಮಗೆ ಬಹಳ ಪ್ರಯೋಜನವುಂಟು. ಘಡಿಯಾಳವಿಲ್ಲದೆ ಹಗಲು ಒಂದು ವೇಳೆ ಸೂರ್ಯನನ್ನು ನೋಡಿ ಹೊತ್ತು ತಿಳುಕೊಳ್ಳಬಹುದು; ಆದರೆ ಇರುಳು ಹೊತ್ತು ತಿಳುಕೊಳ್ಳಬೇಕಾದರೆ, ಘಡಿಯಾಳವಿಲ್ಲದಿದ್ದರೆ ಬಹಳ ತೊಂದರೆಯಾಗುವದು. ಇಂಥ ಇಂಥ ಹೊತ್ತಿಗೆ ಇಷ್ಟಿಷ್ಟು ಕೆಲಸಗಳನ್ನು ಮಾಡಬೇಕೆಂಬದಾಗಿ ಗೊತ್ತು ಮಾಡಿದ ಮೇರೆಗೆ ಆ ಕೆಲಸಗಳನ್ನು ಕಡೆಗಾಣಿಸುವದಕ್ಕೆ ಘಡಿಯಾಳವು ಬಹು ಉಪಯೋಗವಾದದ್ದು. ಘಡಿಯಾಳಗಳ ಮೇಲೆ ಸಾಧಾರಣವಾಗಿ ರೋಮನ್* ಅಂಕಿಗಳನ್ನು ಹಾಕಿರುತ್ತಾರೆ. ಅವುಗಳನ್ನು ಎಲ್ಲರು ಕಲಿಯಬೇಕೆಂಬದಾಗಿ ಕೆಳಗೆ ಬರೆದಿದ್ದೇವೆ.

* ಪೂರ್ವಕಾಲದಲ್ಲಿ ಹೆಸರಾದ ರೋಮದ ರಾಜ್ಯದಲ್ಲಿ ನಡೆಯುತ್ತಿದ್ದ ಅಂಕಿಗಳು.

| | | | | | | |
|---|---|---|---|---|---|---|
| ರೋಮನ್ ಅಂಕಿಗಳು | I. | II. | III. | IV. | V. | VI. |
| ಕನ್ನಡ ಅಂಕಿಗಳು | ೧ | ೨ | ೩ | ೪ | ೫ | ೬ |
| ರೋಮನ್ ಅಂಕಿಗಳು | VII. | VIII. | IX. | X. | XI. | XII. |
| ಕನ್ನಡ ಅಂಕಿಗಳು | ೭ | ೮ | ೯ | ೧೦ | ೧೧ | ೧೨ |

## ೫೨ನೇ ಪಾಠ.

### ಕುರುಡ ಹುಡುಗನು.



ನೋಡಿರಿ, ಆ ಬಾಗಿಲ ಬಳಿಯಲ್ಲಿ ಒಬ್ಬ ಕುರುಡ ಹುಡುಗ ನಿಂತಿದ್ದಾನೆ. ಆ ಪ್ರಾಣಿ ತೀರ ಕುರುಡನಿದ್ದಾನೆ. ಸೂರ್ಯನ ಬೆಳಕು ಬಿದ್ದಾಗ್ಯೂ ಅವನಿಗೆ ಕಾಣುವದಿಲ್ಲ. ಬೆಳಕೇ ಇಲ್ಲದಿದ್ದರೆ ಯಾವತ್ತರಿಗೂ ಹ್ಯಾಗಾಗುತ್ತಿತ್ತೋ, ಹಾಗೆಯೇ ಪಾಪ ಈ ಬಡ ಪ್ರಾಣಿಗಾಗಿದೆ. ಎಂಥ ಕಷ್ಟ ನೋಡಿರಿ! ನಮ್ಮನ್ನು ಕತ್ತಲ ಕೋಣೆಯೊಳಗೆ ಹಾಕಿ ಕಟ್ಟು ಮಾಡಿ ಇಟ್ಟರೆ ಏನು ಪರಿ ಆಗುವದೋ, ಅದೇ

ಪರಿ ಈ ಬಡವನಿಗೆ ಯಾವಾಗಲೂ ಆಗುತ್ತಿದ್ದೀತು. ಅವನ ಕಣ್ಣು ಗಳ ಹಾಗೆ ನಮ್ಮವು ಹೋಗಿಲ್ಲ, ಚನ್ನಾಗಿವೆ. ಇದರಿಂದ ನಮ್ಮ ಮೇಲೆ ದೇವರ ದಯೆ ಎಷ್ಟುಂಟು ನೋಡಿರಿ! ಆಕಾಶದೊಳಗಿನ ಚಂದ್ರ, ಸೂರ್ಯ, ನಕ್ಷತ್ರಗಳನ್ನು ನಾವು ನೋಡುತ್ತೇವೆ. ಹಸು ರಡವಿಗಳಲ್ಲಿಯೂ, ಬೈಲುಗಳಲ್ಲಿಯೂ ಮೇಯುವ ದನಕರುಗಳ ನ್ನೂ ಆಡುವ ಆಡುಗಳನ್ನೂ ನೋಡುತ್ತೇವೆ. ಮೊರಡೆಯ ಮೇ ಲಾಗಲಿ ಗುಡ್ಡದ ಮೇಲಾಗಲಿ ಹುಲ್ಲು ತಿಂದು ಉಲ್ಲಾಸದಿಂದ ಜಿಗಿ ದಾಡುವ ಕುರೀಮರಿಗಳನ್ನು ನೋಡುತ್ತೇವೆ. ಕರಿಕೆ, ಕಾಳುಗಳು ಭೂಮಿಯಲ್ಲಿ ಹುಟ್ಟಿ ಬೆಳೆಯುವದನ್ನೂ, ಬಳ್ಳಿಗಳಿಗೂ ಗಿಡಗಳಿಗೂ ಹೂವು, ಹೀಚು, ಕಾಯಿ, ಹಣ್ಣುಗಳಾಗುವದನ್ನೂ ನಾವು ನೋಡು ತ್ತೇವೆ. ಇದರಂತೆ ಕೆಲವು ಹಕ್ಕಿಗಳು ಆಕಾಶದಲ್ಲಿ ಹಾರುವದನ್ನೂ, ಕೆಲವು ಈ ಗಿಡದಿಂದ ಆ ಗಿಡಕ್ಕೆ, ಆ ಗಿಡದಿಂದ ಈ ಗಿಡಕ್ಕೆ ಹೋಗು ವದನ್ನೂ ನೋಡುತ್ತೇವೆ. ಪುಸ್ತಕಗಳನ್ನು ಓದುವದಕ್ಕೆ ನಮಗೆ ಕಣ್ಣು ಕಾಣಿಸುತ್ತವೆ. ನಾವು ದಿನಾಲು ಹೊಸ ಹೊಸ ಸೋಜಿಗಗ ಳನ್ನು ನೋಡುತ್ತೇವೆ. ಆದರೆ ಈ ಕುರುಡ ಪ್ರಾಣಿಗೆ ಏನೂ ಕಾಣುವ ದಿಲ್ಲ. ನಮ್ಮನ್ನು ಸಾಕಿ ಸಲಹುವ ತಾಯಿತಂದೆಗಳನ್ನೂ ಬಂಧುಬಳಗ ದವರನ್ನೂ ನಾವು ನೋಡುತ್ತೇವೆ; ಆ ಪ್ರಾಣಿಗೆ ಯಾರೂ ಕಾಣಿಸು ವದಿಲ್ಲ. ಅಕಟಕಟಾ, ಕಣ್ಣಿಲ್ಲದೆ ಇರುವದು ಬಹು ಕಷ್ಟ! ಕಣ್ಣುಗ ಳಿಲ್ಲದ್ದರಿಂದ ಆತನ ಪಾಲಿಗೆ ಜಗವೇ ಇಲ್ಲದ ಹಾಗಾಯಿತು! ಇದು ತೀರದ ದುಃಖ! ಆದದರಿಂದ ಈ ಬಡ ಹುಡುಗನ ಮೇಲೆ ದಯೆ ಮಾಡುವದು ನಮಗೆ ತಕ್ಕ ಕೆಲಸವು.

## ೩೩ನೇ ಪಾಠ.

### ಹಣವು.




ಹಣವು ಈ ಜಗದೊಳಗೆ ಬಹು ಪ್ರಯೋಜನವಾದದ್ದು. ಹಣವಿಲ್ಲದಿದ್ದರೆ, ಬೇಕಾದ ಒಡವೆಯನ್ನು ದೊರಕಿಸುವದಕ್ಕೆ ನಮಗೆ ಬಹು ಕಷ್ಟವಾಗುತ್ತಿತ್ತು. ನೋಡಿರಿ! ಒಬ್ಬ ಒಕ್ಕಲಿಗನಿದ್ದಾನೆ, ಆತನಲ್ಲಿ ಬೇಕಾದಷ್ಟು ಕಾಳು ಉಂಟು; ಆದರೆ ಹೊದ್ದುಕೊಳ್ಳಲಿಕ್ಕೆ ಹಚ್ಚಡವಿಲ್ಲ, ಅದು ಅವನಿಗೆ ಹ್ಯಾಗೆ ದೊರೆಯಬೇಕು? ಅದನ್ನು ದೊರಕಿಸುವದಕ್ಕೆ ಅವನು ಜೇಡನ ಮನೆಗೆ ಹೋಗಿ, ಹಚ್ಚಡದ ಬೆಲೆಗಾಗಿ ಅವನಿಗೆ ಕಾಳು ಕೊಟ್ಟು ಹಚ್ಚಡ ಕೊಳ್ಳಬೇಕು.

ಒಂದು ವೇಳೆ ಆ ಜೇಡನ ಬಳಿಯಲ್ಲಿ ಕಾಳು ಇದ್ದದರಿಂದ ಆತನಿಗೆ ಅವು ಬೇಡಾಗಿದ್ದರೆ, ಅವನಿಗೆ ಬೇಕಾದ ಎರಡನೇ ಯಾವದಾದರೊಂದು ವಸ್ತು ಯಾರ ಬಳಿಯಲ್ಲಿ ಉಂಟೋ ಅವರ ಹತ್ತರ ಹೋಗಿ, ಅವರಿಗೆ ಆ ಕಾಳು ಕೊಟ್ಟು ಆ ವಸ್ತುವನ್ನು ತಂದು ಜೇಡನಿಗೆ ಕೊಟ್ಟಾಗ, ಹಚ್ಚಡ ದೊರಕುವದು. ಒಂದು ವೇಳೆ ಎರಡನೆಯವನಿಗೂ ಕಾಳು ಬೇಕಾಗದಿದ್ದರೆ, ಅವನಿಗೆ ಬೇಕಾದ ಒಡವೆಯು ಇದ್ದವರ ಬಳಿಗೆ ಹೋಗಿ, ಅವರಿಗೆ ಕಾಳು ಕೊಟ್ಟು, ಆ ಒಡವೆಯನ್ನು ತಂದು, ಅವನಿಗೆ ಕೊಡಬೇಕು. ಈ ಮೇರೆಗೆ ಅವನು ಎಷ್ಟು ಕಷ್ಟ ಪಡಬೇಕಾಗುವದು ನೋಡಿರಿ!

ಒಮ್ಮೊಮ್ಮೆ ಒಂದೆರಡು ಮನೆಗಳನ್ನು ತಿರುಗಿದರೆ, ಆತನಿಗೆ ಬೇಕಾದದ್ದು ದೊರೆಯಬಹುದು; ಒಮ್ಮೊಮ್ಮೆ ನೂರಾರು ಮನೆಗಳನ್ನು ತಿರುಗಿದಾಗ್ಯೂ ಆತನ ಕೆಲಸವಾಗಲಿಕ್ಕಿಲ್ಲ. ಇಷ್ಟು ಕಷ್ಟವೆಲ್ಲ ಯಾ

ತರಿಂದ? ಯಾವತ್ತರಿಗೂ ಬೇಕಾದಂಥ ಒಂದು ಸಾಧನವಿಲ್ಲದ್ದರಿಂದಲ್ಲವೇ? ಆ ಸಾಧನವಿದ್ದರೆ ತೊಂದರೆ ಆಗುತ್ತಿದ್ದಿಲ್ಲ. ಹಣವು ಅಂಥ ತರದ ಸಾಧನವಾಗಿದೆ. ಆದದರಿಂದ ಹಣವಿದ್ದರೆ, ಜೇಕಾದ ಪದಾರ್ಥಗಳು ಬೇಕಾದಾಗ ಸುಲಭದಿಂದ ದೊರಕುತ್ತವೆ.




ನೋಡಿರಿ, ಒಬ್ಬನ ಬಳಿಯಲ್ಲಿ ಬೇಕಾದಷ್ಟು ವಿಲಾಯತಿಯ ಒಡವೆಗಳುಂಟು. ಆತನಿಗೆ ಅನ್ನವಾಗಲಿ ವಸ್ತ್ರವಾಗಲಿ ಬೇಕಾದರೆ, ತನ್ನ ಬಳಿಯಲ್ಲಿರುವ ಒಡವೆಗಳನ್ನು ಮಾರಿ ಹಣ ಮಾಡಿಕೊಂಡು,

ಅವುಗಳನ್ನು ಕೊಳ್ಳುತ್ತಾನೆ. ಹೀಗೆ ಮಾಡುವದರಿಂದ ಆತನಿಗೆ ಅಷ್ಟು ತೊಂದರೆ ಬೀಳುವದಿಲ್ಲ.

ಇದರ ಮೇಲಿಂದ ಮನುಷ್ಯರು ನಾಣ್ಯಗಳನ್ನು ಮಾಡುವದಕ್ಕೆ ಅರಿಯದೆ ಇರುವಾಗ ಅವರಿಗೆ ಬೇಕಾದ ವಸ್ತುಗಳನ್ನು ದೊರಕಿಸಲಿಕ್ಕೆ ಎಷ್ಟು ತೊಂದರೆಗಳು ಉಂಟಾಗಿರಬಹುದೆಂಬುವದು ಮೇಲೆಯೇ ಕಾಣಿಸುತ್ತದೆ.

ದೇವರು ನಮಗೆ ಹಣ ಕೊಟ್ಟರೆ, ನಾವು ಸೊಕ್ಕು ಮಾಡಬಾರದು; ನಮ್ಮ ಕೈಯಿಂದಾದಷ್ಟು ಮುಂದಿಗೆ ಒಳಿತು ಮಾಡಬೇಕು. ಒಬ್ಬ ಒಳ್ಳೇ ಮನುಷ್ಯನು ಸಂಕಟದಲ್ಲಿರುವಾಗ ಕೈಗಡ ಬೇಡಿದರೆ, ನಾವು ಅವನಿಗೆ ಹಣ ಕೊಟ್ಟು ಸಹಾಯ ಮಾಡಬೇಕು. ಅನ್ನವಸ್ತ್ರಗಳಿಗೋಸ್ಕರ ಹಣ ಕೊಟ್ಟು ಕಾಪಾಡಬೇಕು. ಇಂಥಾ ಪ್ರಸಂಗಗಳಲ್ಲಿ ಹಣದಿಂದ ಎಷ್ಟು ಪ್ರಯೋಜನಗಳಾಗುವವು ನೋಡಿರಿ! ಒಳ್ಳೇ ಮನುಷ್ಯರು ಹಣವಿದ್ದಾಗ ಹೀಗೆ ಮಾಡದೆ ಇರುವದಿಲ್ಲ. ಇಂಥ ಕೆಲಸಗಳ ಸಲುವಾಗಿ ಮಾಡಿದ ವೆಚ್ಚಕ್ಕೆ ಸದ್ವ್ಯಯವೆಂದೆನ್ನುತ್ತಾರೆ. ಸಾರಾಂಶವೇನಂದರೆ, ಹಣದಿಂದ ಬಹುತರವಾಗಿ ಯಾವ ತೊಂದರೆಗಳಾದರೂ ದೂರಾಗುವವು; ಆದಕಾರಣ ಹಣವು ಬಹಳ ಉಪಯೋಗವಾದದ್ದು.



## ೩೪ನೇ ಪಾಠ.

### ನರಿಯೂ ಶಾಹಾಮೃಗವೂ.



ಒಂದು ನರಿಯು ಶಾಹಾಮೃಗವನ್ನು ತನ್ನ ಮನೆಗೆ ಊಟಕ್ಕೆ ಕರೆಯಿತು. ಆಗ ಶಾಹಾಮೃಗಕ್ಕೆ ವಿನೋದ ಮಾಡಬೇಕೆಂದು ನರಿಯು ಮನಸ್ಸಿನೊಳಗೆ ಯೋಚಿಸಿ, ಒಂದು ತಳಿಗಿಯಲ್ಲಿ ಪಾಯಸ ಹಾಕಿ ತಂದು ಅದರ ಮುಂದೆ ಇಟ್ಟು, ತಕ್ಕೋ ಎಂದು ತಾನೂ ಅದರ ಕೂಡ ತಿನ್ನಲಾರಂಭಿಸಿತು. ಶಾಹಾಮೃಗದ ಚಂಚು ಉದ್ದ ವಿದ್ದ ಕಾರಣ ಆ ತಳಿಗೆಯೊಳಗಿನ ಪಾಯಸವು ಅದರ ಬಾಯಿಗೆ ಬರಲಿಲ್ಲ. ಅಷ್ಟರೊಳಗೆ ಆ ನರಿಯು ಪಾಯಸವೆಲ್ಲಾ ತಿಂದು ತಳಿಗೀ ನೆಕ್ಕಹತ್ತಿತು. ಶಾಹಾಮೃಗವು ಮನದೊಳಗೆ ಮರುಗಿ, ಹಾಗೇ ಉಪವಾಸ ತನ್ನ ಮನೆಗೆ ಹೋಯಿತು. ಆ ಕುನಸು ಮನಸ್ಸಿನಲ್ಲಿಟ್ಟುಕೊಂಡು ಕೆಲವು ದಿನದ ಮೇಲೆ ಆ ಶಾಹಾಮೃಗವು ಈ ನರಿಗೆ ಮೇಜವಾನೀ ಮಾಡಿತು. ಆಗ ಉದ್ದನ್ನ ಗೋಣಿನ ಹೂಜಿಯೊಳಗೆ ಮಾವಿನ ಹಣ್ಣಿನ ಸೀಕರಣೀ ಹಾಕಿ ಆ ಶಾಹಾಮೃಗವು ನರಿಯ ಮುಂದೆ ಇಟ್ಟು—ಅಣ್ಣನವರೇ, ಇನ್ನು ತಕ್ಕೊಳ್ಳಬೇಕು ಎಂದು ಅದಕ್ಕೆ ವಿನಯದಿಂದ ಹೇಳಿ ತಾನೂ ಅದರ ಕೂಡ ಆರಂಭಿಸಿತು. ಆ ಪಾತ್ರೆಯ ಹೊಟ್ಟೆ ದೊಡ್ಡದು, ಕುತ್ತಿಗೆ ಸಣ್ಣಗಾಗಿ ಉದ್ದಕೆ ಇತ್ತು. ಆದಕಾರಣ ಅದರೊಳಗೆ ನರಿಯ ಮೋರೆ ಹಿಡಿಸಲಿಲ್ಲ. ಶಾಹಾಮೃ

ಗವು ತನ್ನ ಚಂಚುವನ್ನು ಒಳಗೆ ಹಾಕಿ ಆ ಸೀಕರಣೀ ಕುಡಿದು ನರಿಗೆ ತೋರಿಸಿತು. ಶಾಹಾಮೃಗವು ಸೀಕರಣೀ ತಕ್ಕೊಂಡು ಮೇಲಕ್ಕೆ ಮೋರೆ ಮಾಡುವಾಗ ಅದರ ಬಾಯೊಳಗಿನ ಎಂಜಲ ತಟಕು ಆ ಹೂಜೆಯ ಮೇಲೆ ಬೀಳುವವು; ಅವುಗಳನ್ನು ನೆಕ್ಕುತ್ತ ನರಿಯು ಹೊತ್ತುಗಳೆಯಿತು. ಕಡೆಗೆ ಮನಸ್ಸಿನೊಳಗೆ ನಾಚಿಕೊಂಡು—ಗೆಳೆಯಾ, ನೀನು ಮಾಡಿದ್ದು ಯಥಾ ಯೋಗ್ಯವು. ಇದರೊಳಗೆ ನಾನು ಮನಸ್ಸಿಗೆ ಹಿಡಿಯತಕ್ಕದ್ದೇನೂ ಇಲ್ಲ, ಎಂದು ಡೌಲಿನ ಮಾತು ಹೇಳಿ ಮೋರೆ ಒಣಗಿಸಿಕೊಂಡು ಮನೆಗೆ ಹೋಯಿತು.

---

## ೩೩ನೇ ಪಾಠ.

### ಸತ್ಯದ ಬಗ್ಗೆ ಒಬ್ಬ ಮುದಕನ ಉಪದೇಶ.



ಒಂದು ದಿನ ಒಬ್ಬ ಮುದಕನು ಕೆಲವು ಹುಡುಗರಿಗೆ ಅಂದದ್ದು—ಮಕ್ಕಳಿರಾ, ನಾನು ನಿಮಗೆ ಹಿತವಾಗಬೇಕೆಂದು ಅಪೇಕ್ಷಿಸುತ್ತೇನೆ. ಆದದರಿಂದ ನನ್ನ ಅನುಭವಕ್ಕೆ ಬಂದ ಮಾತುಗಳನ್ನು ನಿಮಗೆ ಹೇಳುವೆನು, ಕಿವಿಗೊಟ್ಟು ಕೇಳಿರಿ. ನಿಮಗೆ ಧೈರ್ಯ, ನಿಶ್ಚಿಂತೆ, ಸಂತೋಷ, ಹಣ, ಕೀರ್ತಿ ಮುಂತಾದವುಗಳು ಉಂಟಾಗ

ಬೇಕೆಂಬ ಇಚ್ಛೆ ಇದ್ದರೆ, ಸತ್ಯದ ಮೇಲೆ ಪ್ರೀತಿ ಇಡಿರಿ. ಸತ್ಯವು ರಾಜಮಾರ್ಗದಂತೆಯೂ, ಕತ್ತಲೊಳಗೆ ಹಾದೀ ತೋರಿಸುವ ದೀವಟಿಗೆಯಂತೆಯೂ ಇರುವದು. ಸತ್ಯ ಮಾತಾಡುವದು ಬಹು ಸುಲಭ. ನಿಮ್ಮ ಮನಸ್ಸಿನಲ್ಲಿದ್ದ ಮಾತು ಕೈಗೂಡುವದಕ್ಕೆ ಇದು ಬಹು ಸಮೀಪದ ದಾರಿ. ಇದರಲ್ಲಿ ತೊಂದರೆಗಳು ಬಹಳ ಕಡಿಮೆ. ಸತ್ಯ ಮಾತಾಡುವವರಿಗೆ ಅಂಜಿಕೆಯಂತೂ ಇರುವದೇ ಇಲ್ಲ. ಯಾಕೆಂದರೆ, ಅವರ ಮನಸ್ಸು ನಿರ್ಮಲವಿರುತ್ತದೆ. ಇಂಥ ದಾರಿಯನ್ನು ಬಿಟ್ಟು ನಡೆಯುವವರು ಬಹಳ ದಡ್ಡರು.

ಸುಳ್ಳು ಮಾತಾಡುವವರಿಗೆ ಅನೇಕ ತೊಂದರೆಗಳುಂಟಾಗುತ್ತವೆ. ಒಂದು ಸುಳ್ಳು ಮುಚ್ಚುವದಕ್ಕೆ ಹಲವು ಸುಳ್ಳು ಮಾತುಗಳನ್ನು ಹುಟ್ಟಿಸಬೇಕಾಗುತ್ತದೆ. ಅವರಿಗೆ ಅಂಜಿಕೆ ಬಹಳ. ಅವರನ್ನು ಒಬ್ಬರೂ ನಂಬುವದಿಲ್ಲ; ಅವರಿಗೆ ಒಬ್ಬರೂ ಮಾನ ಕೊಡುವದಿಲ್ಲ. ತಳ ಸೋಸದೆ ಮನೆ ಕಟ್ಟಿದರೆ, ಆ ಮನೆಯು ಕಡಕೊಂಡು ಬೀಳುವದು ಹ್ಯಾಗೆ ನಿಶ್ಚಯವೋ, ಹಾಗೆ ಸುಳ್ಳಿನಿಂದ ಹಣವಂತರಾದಾಗ್ಯೂ ಕಟ್ಟಕಡೆಗೆ ಅವರು ನಿಜವಾಗಿ ಹಾಳಾಗುವರು. ಸುಳ್ಳು ಮಾತಾಡುವವರು ಬಹು ಪಾಪಿಗಳು. ಈ ಜಗದೊಳಗೆ ಅವರು ಎಂದಿಗೂ ಸುಖದಿಂದ ಬಾಳರು. ಯಾವಾಗಲೂ ಸತ್ಯ ಮಾತಾಡಿ ಒಮ್ಮೆ ಸುಳ್ಳು ಹೇಳಿದರೆ, ಅವನು ಸುಳ್ಳನೇ ಎಂದು ತಿಳಿದು ಅವನನ್ನಾದರು ಜನರು ನಂಬುವದಿಲ್ಲ. ಒಂದು ತೊಲೆ ಭಂಗಾರದೊಳಗೆ ಕುಸು ಬೆಳ್ಳಿಯನ್ನಾಗಲಿ ತಾಂಬ್ರವನ್ನಾಗಲಿ ಕೂಡಿಸಿದರೆ, ಅದು ಭಂಗಾರದಂತೆ ಕಾಣಿಸಿದರೂ ಒರೆಗಲ್ಲಿಗೆ ಹಚ್ಚಿದ ಕೂಡಲೇ ಅದರ ಬೆಲೆ ಕಡಿಮೆಯಾಗುವಂತೆ, ಸುಳ್ಳು ಆಡುವವನ ಯೋಗ್ಯತೆ ನಿಶ್ಚಯವಾಗಿ ಕಡಿಮೆಯಾಗುತ್ತದೆ.

ನಾವು ಮನಸ್ಸಿನಲ್ಲಿಯೂ, ಮಾತಿನಲ್ಲಿಯೂ, ನಡತೆಯಲ್ಲಿಯೂ ಯಾವಾಗಲೂ ಸತ್ಯವನ್ನೇ ಆಶ್ರಯಿಸಬೇಕು. ನಮ್ಮ ಬಳಿಯಲ್ಲಿ ಹಣವಿದ್ದಾಗ ಎರಡನೆಯವರು ಕೈಗಡ ಕೇಳಿದರೆ, ಮನಸ್ಸಿನಲ್ಲಿ ಹಣ

ವಿಲ್ಲೆಂದು ಹೇಳ ನಿಶ್ಚಯಿಸಿದರೆ, ಸುಳ್ಳು ಹೇಳಿದ ಹಾಗಾಯಿತು. ಸಾಲೆಗೆ ಹೋಗದೆ ಆಡುವದಕ್ಕೆ ನಿಂತು, ಮರುದಿನ ಗುರುಗಳು ಕೇಳಿದಾಗ ನಿನ್ನೆ ಜ್ವರ ಬಂದಿದ್ದವೆಂದು ಹೇಳಿದರೆ, ಸುಳ್ಳು ಹೇಳಿದ ಹಾಗಾಯಿತು. ಹೆರವರ ಪುಸ್ತಕ ಮುಂತಾದವುಗಳನ್ನು ಕದ್ದು ಕೊಂಡರೆ, ಅಸತ್ಯದಿಂದ ನಡೆದ ಹಾಗಾಯಿತು. ಸತ್ಯವನ್ನು ಬಿಟ್ಟು ನಡೆಯುವವರು ಈ ಲೋಕದಲ್ಲಿಯಾಗಲಿ, ಪರಲೋಕದಲ್ಲಿಯಾಗ ಲಿ ದುಃಖಗಳನ್ನೇ ಅನುಭೋಗಿಸುವರು. ಅವರಿಗೆ ನಿಜವಾದ ಸು ಖವು ಎಳ್ಳಷ್ಟಾದರೂ ದೊರಕುವದಿಲ್ಲ. ಅಹಹಾ! ಸತ್ಯವು ಎಂಥಾ ಘನವಾದದ್ದು ನೋಡಿರಿ! ಸತ್ಯದಿಂದ ನಡೆಯುವವರಿಗೆ ಸಂಪತ್ತಿನ ಕಣಿಯೂ, ಜ್ಞಾನದ ನಿಧಿಯೂ, ಸಂತೋಷದ ಮನೆಯೂ ದೊರ ಕಿದವೆಂದು ತಿಳಿಯತಕ್ಕದ್ದು. ಆದದರಿಂದ ಮಕ್ಕಳಿರಾ, ನೀವು ಸತ್ಯವನ್ನು ಎಂದಿಗೂ ಬಿಡಬೇಡಿರಿ.

ಒಂದು ದಿನ ಒಬ್ಬ ಮೂಕನಾದ ಕುರುಡನನ್ನು, ಸತ್ಯವೆಂದರೇ ನು? ಎಂದು ನಾನು ಒದರಿ ಕೇಳಿದೆನು; ಆಗ ಅವನು ತನ್ನ ಬೆರಳಿ ನಿಂದ ಒಂದು ನೆಟ್ಟನ್ನ ಗೆರೆ ತೆಗೆದು ತೋರಿಸಿದನು. ಬಳಿಕ ಸುಳ್ಳು ಅಂದರೇನು? ಎಂದು ಕೇಳಲು, ಹಾವು ಹರಿದಾಡಿದಂತೆ ಒಂದು ಸೊಟ್ಟ ಗೆರೆ ತೆಗೆದು ತೋರಿಸಿದನು. ಮಕ್ಕಳಿರಾ, ನೋಡಿರಿ, ಆ ಕುರುಡನು ಎಂಥಾ ಜಾಣನು! ನೀವೆಲ್ಲರು ನನ್ನ ಮಾತು ಚನ್ನಾಗಿ ನೆನಪಿಟ್ಟುಕೊಂಡು, ಅವನ ಹಾಗೆ ಜಾಣರಾಗಿರಿ. ಒಬ್ಬ ಕೆಟ್ಟ ಮನುಷ್ಯನು ಕೆಟ್ಟ ದಾರಿಯಿಂದ ಹೋದರೆ, ನೀವು ಆ ದಾರೀ ಹಿಡಿ ಯಬೇಡಿರಿ. ಕೆಟ್ಟ ನಡತೆಯಿಂದ ನಡೆಯುವವರಿಗೆ ಆಗುವ ಕೆಟ್ಟ ಪರಿಣಾಮಗಳನ್ನು ಮನಸ್ಸಿನಲ್ಲಿ ತಂದು ಆ ಮೇರೆಗೆ ನಡೆಯದೆ ನೀವು ನೀತಿಯಿಂದಲೇ ನಡೆಯಿರಿ; ಹಾವನ್ನು ಕಂಡ ಕೂಡಲೆ ಹ್ಯಾಗೆ ಅಂ ಜುವಿರೋ ಹಾಗೆ ಸುಳ್ಳಿಗೆ ಹೆದರಿ ಹಿಂಜರಿಯಿರಿ.


## ೩೭ನೇ ಪಾಠ.

### ಚಿರ್ಚು.



ಚಿರ್ಚುಗಳು ಬಹುತರವಾಗಿ ಎಲ್ಲ ದೇಶಗಳಲ್ಲಿ ಉಂಟು. ಅವುಗಳೊಳಗೆ ಪಟ್ಟೆ ಚಿರ್ಚು, ಚಿಕ್ಕಿ ಚಿರ್ಚು, ಉರಟಗೂದಲ ಚಿರ್ಚುಗಳೆಂದು ಮೂರು ಜಾತಿಗಳುಂಟು. ಚಿರ್ಚೂ ನಾಯಿಯೂ ಒಂದೇ ವರ್ಗದವು. ಮೊದಲನೇ ಜಾತಿಯ ಚಿರ್ಚುಗಳು ೧೯, ೨೦ ಇಂಚು ಎತ್ತರ, ಮೂರುವರೆ ಫೂಟು ನಿಡಿದು ಇರುವವು. ಇವುಗಳ ಬಣ್ಣವು ಬಿಳುಪು; ಮೈಮೇಲೆ ಊದೀ ಬಣ್ಣದ ಅಡ್ಡ ಪಟ್ಟೆಗಳು, ಬೆನ್ನ ಮುಂಭಾಗದ ಮೇಲೆ ಉದ್ದನ್ನ ಬಿರಿಸು ಕೂದಲು ಇರು

ತ್ತವೆ. ಶರೀರದ ಮುಂಭಾಗವು ಬಲವುಳ್ಳದ್ದು, ಹಿಂಭಾಗವು ಕುಗ್ಗಿದ ಹಾಗಾಗಿ ಅಶಕ್ತವಿರುವದು. ಚಿರ್ಚುಗಳು ಯಾವಾಗಲು ಮೋರೆ ಕೆಳಗೆ ಮಾಡಿಕೊಂಡು ನಡೆಯುತ್ತವೆ.



ಎರಡನೇ ಜಾತಿಯ ಚಿರ್ಚುಗಳು ತುಸು ಸಣ್ಣವು; ಇವುಗಳ ಬಣ್ಣ ಹಳದಿ, ಮೈಮೇಲೆ ಕರೇ ಚಿಕ್ಕಿಗಳು ಇರುತ್ತವೆ.

ಮೂರನೇ ಜಾತಿಯ ಚಿರ್ಚುಗಳ ಮೈಮೇಲೆ ಉದ್ದನ್ನ ಬಿರಿಸು ಕೂದಲು ಇರುತ್ತವೆ. ಚಿರ್ಚುಗಳ ಮೋರೆಯ ಮೇಲೆ ಶಿಟ್ಟಿನ ಕಳೆ ಇರುವದು.

ಚಿರ್ಚು ಒದರಹತ್ತಿದರೆ, ಯಾರೋ ಅತ್ತ ಹಾಗೆ ಕೇಳಿಸುತ್ತದೆ. ತಮಗಿಂತ ಬಲವುಳ್ಳ ಮೃಗಗಳ ಕೂಡ ಚಿರ್ಚುಗಳು ಧೈರ್ಯದಿಂದ ಕಾದ ಹೆಣಗುತ್ತವೆ. ಇವುಗಳ ಕಣ್ಣು ಇರುಳು ಚನ್ನಾಗಿ ಕಾಣಿಸುವವು. ಇವು ಓಡುವಾಗ ಕುಂಟಿದ ಹಾಗೆ ಕಾಣುತ್ತದೆ.

ಮೊದಲನೇ ಎರಡನೇ ಜಾತಿಯ ಚಿರ್ಚುಗಳು ಗವಿಯಲ್ಲಾಗಲಿ, ತಗ್ಗುಗಳಲ್ಲಾಗಲಿ, ಕೊಳ್ಳದೊಳಗಾಗಲಿ ಇರುತ್ತವೆ.

ಮೂರನೇ ಜಾತಿಯ ಚಿರ್ಚುಗಳು ಸಮುದ್ರದ ದಂಡಿಯಲ್ಲಿದ್ದುಕೊಂಡು, ಕೊಳಕ ಮಾಂಸ ಮುಂತಾದ್ದನ್ನು ತಿನ್ನುತ್ತವೆ.

ಚಿರ್ಚುಗಗಳು ನಾಯಿೂ ಹಾಗೆ ಈಯುತ್ತವೆ. ಸಂಸ್ಥಾನಿಕರು ಚಿರ್ಚುಗಗಳನ್ನು ಸಾಕಿ ಬೇಟೆಗೆ ಹೋದಾಗ ಚಿಗರೀ ಮೇಲೆ ಬಿಡುತ್ತಾರೆ; ತಕ್ಷಣವೇ ಅವು ಚಿಗರೀ ಹಿಡಿಯುವವು.

---

## ೫೭ನೇ ಪಾಠ.

### ತನ್ನ ಕರ್ಮ ತನಗೆ ಬಿಡದು.

ಒಂದು ಊರೊಳಗೆ ಒಂದು ರಾತ್ರಿ ನಾಲ್ಕು ಮಂದಿ ಕಳ್ಳರು ಕೂಡಿ ಪಟ್ಟಣಶೆಟ್ಟೀ ಮನೆಯ ಕನ್ನಾ ಕೊರೆದು, ಇದ್ದ ವಸ್ತು ಒಡವೆಗಳನ್ನೆಲ್ಲ ಕದ್ದುಕೊಂಡು ಹಂಚಿಕೊಳ್ಳುವದಕ್ಕೆ ಅಡವಿಯೊಳಗಿನದೊಂದು ಹಾಳು ದೇಗುಲ ಹಾದೀ ಹಿಡಿದರು. ಆಗ ಅವರೊಳಗಿನವನೊಬ್ಬನು—ಅಣ್ಣಾ, ಇಂದು ನಮಗೆ ದೇವರು ದಯಮಾಡಿದನು. ಆದದರಿಂದ ಊರೊಳಗೆ ಹೋಗಿ ಏನಾದರು ತಿನ್ನುವ ಜೀನಸು ತಕ್ಕೊಂಡು ಬರುವಾ, ಅಂದನು. ಅದಕ್ಕೆ ಎಲ್ಲರೂ ಒಪ್ಪಿಕೊಂಡದರಿಂದ ಇಬ್ಬರು ರೊಕ್ಕಾ ತಕ್ಕೊಂಡು ಊರ ಹಾದೀ ಹಿಡಿದರು. ಹೋಗ ಹೋಗುತ್ತ ದಾರಿಯೊಳಗೆ ಅವರಿಬ್ಬರೂ ಆಲೋಚಿಸಿದ್ದೇನಂದರೆ—ನಾವು ಕಳವು ಮಾಡಹತ್ತಿ ಏನಿಲ್ಲಂದರೂ ಹತ್ತೊಂಬತ್ತು ಇಪ್ಪತ್ತು ವರ್ಷ ಆಗುತ್ತ ಬಂತು. ಆದರೂ ನಮ್ಮ ಕೈಯೊಳಗೆ ಗಂಟು ಆಗಲಿಲ್ಲ. ಸಾಯುವ ತನಕ ಇದೇ ಹಾಡಾಯಿತು. ಇಷ್ಟು ದಿನ ಆದದ್ದಾಯಿತು, ಇನ್ನು ಮೇಲೆ ಕೈಯೊಳಗೆ ಒಮ್ಮೆಲೆ ದುಡ್ಡು ಮಾಡಿಕೊಂಡು ಒತ್ತಟ್ಟಿಗೆ ಹೋಗಿ ಸೌಖ್ಯದಿಂದ ಕಾಲಹರಣ ಮಾಡಬೇಕು. ಈಹೊತ್ತು ನಾವು ಕಸ್ತು ಮಾಡಿದ ಕಾರಣ ಇಷ್ಟು ಬದುಕು ದೊರಕಿತು. ಇದನ್ನು ನಾಲ್ಕೂ ಮಂದಿ ಹಂಚಿಕೊಂಡರೆ, ನಮ್ಮ ಬಡತನವೇನೂ ಹಿಂಗುವದಿಲ್ಲ. ಅದಕ್ಕೆ ಅವರಿಬ್ಬರನ್ನು ಕೊಂದು ನಾವಿಬ್ಬರೇ ಆ ಬದುಕು ಎತ್ತಿ ಬಡಿಯ

ಬೇಕೆಂದು ನಿಶ್ಚಯಿಸಿ, ಪೇಡೇ ಬರ್ಫೇ ತಕ್ಕೊಂಡು, ಅದರೊಳಗೆ ವಿಷಾ ಕೂಡಿಸಿ ತಂದರು. ಇತ್ತ ಅಡವಿಯೊಳಗೆ ಇವರಿಬ್ಬರೂ ಇದೇ ಪ್ರಕಾರ ದುರಾಲೋಚನೆ ಮಾಡಿ, ಪೇಟೆಯೊಳಗಿಂದ ಬಂದ ಕೂಡಲೆ ಅವರನ್ನು ಕೊಂದುಹಾಕಿ ಈ ಬದುಕು ತಾವಿಬ್ಬರೇ ತಕ್ಕೊಳ್ಳಬೇಕೆಂದು ಹವಣಿಸಿಕೊಂಡು ಕುಳಿತಿದ್ದರು. ಅವರು ಅಲ್ಲಿಗೆ ಹೋದ ಕೂಡಲೆ ಇವರು ತಮ್ಮ ಕೈಯೊಳಗಿನ ಕನ್ನಗತ್ತಿಯಿಂದ ಇವರನ್ನು ಇರಿದು ಹಾಕಿ, ಇದೆಲ್ಲಾ ತಮ್ಮಿಬ್ಬರಿಗೇ ಆಯಿತೆಂದು ಹಿಗ್ಗಿ ಅವರು ತಂದ ಮಿಠಾಯಿ ತಿನ್ನಲು, ವಿಷವೇರಿ ಇವರೂ ಸತ್ತರು. ಹೀಗೆ ಒಬ್ಬರಿಗೊಬ್ಬರು ಕೇಡು ಬಗೆದದರಿಂದ ನಾಲ್ವರೂ ಸತ್ತುಹೋದರು. ಆ ಬದುಕು ಅಲ್ಲಿಯೇ ಉಳಿಯಿತು.

ಎರಡನೆಯವರನ್ನು ನಾಶ ಮಾಡಹೋದರೆ, ತನಗೇ ಕೇಡು ಬರುತ್ತದೆಂಬ ಮಾತು ಸುಳ್ಳಲ್ಲ.

---

## ೫೮ ನೇ ಪಾಠ.

## ಧೋತರಜೋಡು.

ಈ ಹಿಂದುಸ್ತಾನದೊಳಗೆ ಧೋತರ ಉಡುವ ಜನರು ಬಹಳ. ಒಂದೇ ತರದ ಎರಡು ಧೋತರಗಳಿಗೆ ಧೋತರಜೋಡು ಅನ್ನುತ್ತಾರೆ.

ಸಾಧಾ ಧೋತರಜೋಡು ಎಂತಲೂ, ಅಂಚಿನವೆಂತಲೂ ಎರಡು ತರವುಂಟು. ಸಾಧಾ ಜೋಡುಗಳು ಬರೇ ನೂಲಿನವು; ಅಂಚಿನ ಜೋಡುಗಳಿಗೆ ಬಣ್ಣದ ದಡಿಯಾಗಲಿ, ರೇಶ್ಮಿಯ ದಡಿಯಾಗಲಿ, ಜರದ ದಡಿಯಾಗಲಿ ಇರುತ್ತವೆ. ಕೆಂಪು, ಹಳದಿ, ಬಿಳೇ, ಹಸುರು ರೇಶ್ಮಿಯನ್ನು ಅಂಚಿಗೆ ಹಾಕುತ್ತಾರೆ.

ರೇಶ್ಮೀ ಅಂಚಿನೊಳಗೆ ಹಲವು ತರಗಳುಂಟು. ದಬ್ಬಣದಷ್ಟು ಹಿಡುಕೊಂಡು ಹತ್ತು ಬೊಟ್ಟಿನ ತನಕ ರೇಶ್ಮೀ ಅಂಚು ಇರುತ್ತವೆ. ದಾಬಣಕಾಠೀ, ಬೊಟ್ಟಂಚು, ಹುಂಜುದಡಿ, ಕರ್ವತಕಾಠೀ, ಕಮಲ ಪೇಠೀ, ನಾಗಪುರಿ, ಪರಾಸಪೇಠೀ, ಗಂಗಾಜಮುನಾ ಇಲ್ಲವೆ ಅರ ನಾರಿ, ಎಂದು ಅಂಚಿನ ಮೇಲಿಂದ ಅನೇಕ ಹೆಸರುಗಳುಂಟು.

ನೂಲು ಸಣ್ಣ, ಅಂಚು ಅಗಲ ಇದ್ದ ಹಾಗೆ ಧೋತರಜೋಡು ಬೆಲೆಗಾಣುತ್ತವೆ. ಸಾಧಾ ಜೋಡುಗಳು ಎರಡು ರೂಪಾಯಿ ಹಿಡಿದು ಎಂಟು ಹತ್ತು ರೂಪಾಯಿ ತನಕ ಇರುತ್ತವೆ. ರೇಶ್ಮೀ ಅಂಚಿನ ಧೋತರಜೋಡುಗಳು ನಾಲ್ಕು ರೂಪಾಯಿ ಹಿಡಿದು ಐವತ್ತು ರೂಪಾಯಿ ತನಕ ಇರುತ್ತವೆ. ಜರದಂಚಿನ ಧೋತರಜೋಡುಗಳು ನೂರಾರು ರೂಪಾಯಿ ತನಕ ಇರುವವು.

ಧೋತರಗಳು ಸಾಧಾರಣವಾಗಿ ಹತ್ತು ಮೊಳ ಉದ್ದ, ಎರಡುವರೆ ಮೊಳ ಅಗಲ ಇರುತ್ತವೆ; ಆದರೆ ನೇಕಾರರು ತಮ್ಮ ಉಳತಾಯದ ಸಲುವಾಗಿಯಾಗಲಿ ಗಿರಾಕಿಗಳ ಹೇಳಿಕೆಯಿಂದಾಗಲಿ ಉದ್ದ ಅಗಲಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡುವದುಂಟು. ಬಹಳ ಕಡೆಯಲ್ಲಿ ಧೋತರಗಳು ಹುಟ್ಟುತ್ತವೆ; ಆದರೆ ನಾಗಪೂರ, ಮಹೇಶ್ವರ, ಶಾಪೂರ, ಹುಬ್ಬಳ್ಳೀ, ಶಾಲಮುಗಳಲ್ಲಿ ಆಗುವ ಧೋತರಜೋಡು ಬಹಳ ಪ್ರಸಿದ್ಧ. ಜರದಂಚಿನ ಉತ್ಕೃಷ್ಟ ಜೋಡುಗಳು ಪೈಠಣ, ಅಮದಾಬಾದ, ಶಾಲಮುಗಳಲ್ಲಿ ಆಗುತ್ತವೆ.

ಹುಡುಗರ ಸಲುವಾಗಿ ನೆಯ್ದ ರೇಶ್ಮೀ ಅಂಚಿನ ಸಣ್ಣ ಧೋತರಜೋಡುಗಳಿಗೆ ಬಚಕಾನಿಯೆನ್ನುತ್ತಾರೆ. ಉದ್ದವೂ ಅಗಲವೂ ಕಡಿಮೆಯಾಗಿ ಉರುಟು ನೂಲು ಇದ್ದರೆ, ಅವುಗಳಿಗೆ ಪಂಜೆಗಳೆನ್ನುತ್ತಾರೆ. ನಾಲ್ಕು ಪಂಜೆಗಳನ್ನು ಕೂಡಿಸಿ ನೆಯ್ದಿದ್ದರೆ, ಅವುಗಳಿಗೆ ಹೊರೆಯೆನ್ನುತ್ತಾರೆ.

— — —

## ೫೯ನೇ ಪಾಠ.

## ಸುಖ ಪಡಕೊಳ್ಳುವ ಹಂಚಿಕೆ.



ಕೆಲವು ಹುಡುಗರು ಸ್ವಾಭಾವಿಕವಾಗಿ ಸಂತೋಷದಿಂದ ಇರುತ್ತಾರೆ, ಆದರಿಂದ ಅವರ ಮೇಲೆ ಎಲ್ಲರೂ ಪ್ರೀತಿ ಮಾಡುವರು; ಕೆಲವರು ಶಿಡುಕುತನದವರಿರುತ್ತಾರೆ, ಆದರಿಂದ ಅವರ ಮೇಲೆ ಯಾರೂ ಪ್ರೀತಿ ಮಾಡುವದಿಲ್ಲ; ಇದು ಎಲ್ಲ ಹುಡುಗರಿಗೆ ಗೊತ್ತು ಇರಬಹುದು.

ನಮ್ಮ ಮೇಲೆ ಎರಡನೆಯವರ ಪ್ರೀತಿ ಇಲ್ಲದಿದ್ದರೆ, ನಮಗೆ ಸುಖವಾಗದು. ಯಾಕಂದರೆ, ಒಬ್ಬರ ಕೂಡೊಬ್ಬರು ಪ್ರೀತಿಯಿಂದ ನಡಕೊಳ್ಳುವದರಿಂದ ಮನುಷ್ಯರಿಗೆ ಸುಖವಾಗುವ ಹಾಗೆ ದೇವರು ಮಾಡಿದ್ದಾನೆ.

ನಾವು ಪರರ ಮೇಲೆ ಪ್ರೀತಿ ಮಾಡಿದರೆ, ಪರರು ನಮ್ಮ ಮೇಲೆ ಪ್ರೀತಿ ಮಾಡುವರು. ಎರಡನೆಯವರು ನಮಗೆ ಶೇರದಿದ್ದರೆ, ನಾವೂ ಎರಡನೆಯವರಿಗೆ ಶೇರುವದಿಲ್ಲ. ಆದದರಿಂದ ನಾವು ಯಾವಾಗಲು ಪರರಿಗೆ ಉಪಕಾರ ಮಾಡಿ ಕೈಲಾದ ಮಟ್ಟಿಗೆ ಸಂತೋಷ ಪಡಿಸಬೇಕು. ಇದು ಇಲ್ಲದೆ ನಾವು ಎಂದಿಗೂ ಸುಖಪಡಲಾರೆವು.

ನಾವು ಪ್ರಾಮಾಣಿಕತನದಿಂದ ನಡಕೊಳ್ಳುವವರಾದರೆ, ಒಂದೊಂದು ವೇಳೆ ನಮ್ಮ ಗೆಳೆಯರ ಮನಸ್ಸು ಸಹ ಮುರಿಯಬೇಕಾಗುವದು; ಆದರೆ ನಿಜವಾಗಿ ನಾವು ಮಮತೆಯಿಂದ, ಸ್ವಾರ್ಥಬುದ್ಧಿ ಇಲ್ಲದೆ, ಕಷ್ಟ ಪಟ್ಟು ಪರರಿಗೆ ಒಳಿತು ಮಾಡುವವರಾದರೆ, ನಮಗೆ ಬೇಕಾದಷ್ಟು ಮಂದಿ ಗೆಳೆಯರಾಗುವರು.

ಹೆರವರ ಮೇಲೆ ಪ್ರೀತಿಯನ್ನೂ ಉಪಕಾರವನ್ನೂ ಮಾಡಬೇಕೆಂಬ ಇಚ್ಛೆ ನಮ್ಮಲ್ಲಿ ಹೆಚ್ಚಾಗುತ್ತ ಹೋದ ಹಾಗೆ ನಮಗೆ ಸುಖವು ಹೆಚ್ಚಾಗುತ್ತದೆ.

ಬೀದಿಯಲ್ಲಿ ಏನಾದರೊಂದು ಆಟವಾಗುತ್ತಿದ್ದರೆ, ಅದನ್ನು ನೋಡುವದಕ್ಕೆ ಬಹು ಜನರು ನೆರೆಯುತ್ತಾರೆ; ಆಗ ನಾವು ಸ್ವಲ್ಪ ಹೊತ್ತು ನೋಡಿದ ಬಳಿಕ, ಯಾರಾದರೂ ನಮ್ಮ ಗುರುತಿನವರು ನೋಡುವ ಇಚ್ಛೆಯಿಂದ ಬಂದು ಸ್ಥಳ ದೊರೆಯದಿರುವದರಿಂದ ಒತ್ತಟ್ಟಿಗೆ ನಿಂತರೆ, ನಾವು ಅವರನ್ನು ಕರೆದು ಅವರಿಗೆ ನಾವು ನಿಂತ ಸ್ಥಳ ಕೊಟ್ಟು ಹಿಂದಕ್ಕೆ ಸರಿದರೆ, ಅವರು ಸಂತೋಷ ಪಡರೋ? ತಾತ್ಪರ್ಯವೇನಂದರೆ, ಹೆರವರಿಗೆ ಸುಖವಾಗಬೇಕೆಂಬ ಉದ್ಯೋಗದಲ್ಲಿ ನಾವು ಯಾವಾಗಲು ಇದ್ದರೆ, ನಮಗೆ ನಿಶ್ಚಯವಾಗಿ ಸುಖವಾಗುವದು. ಇದೇ ಸುಖ ಪಡಕೊಳ್ಳುವ ಹಂಚಿಕೆ.

# ೬ನೇ ಪಾಠ.

## ಕೇಶರ.




ಕೇಶರವು ನೇಪಾಳ ದೇಶದಲ್ಲಿಯೂ ಇಂಗ್ಲಂಡದಲ್ಲಿಯೂ ಹುಟ್ಟುತ್ತದೆ. ಕೇಶರದ ಗಿಡಗಳು ಸಣ್ಣವು. ಅದರ ಗಡ್ಡೆಗಳನ್ನು ಎರಡೆರಡು ಮೊಳದ ಅಂತರದ ಮೇಲೆ ಸಾಲಹಿಡಿದು ಹಚ್ಚುತ್ತಾರೆ. ಬಳಿಕ ಅವು ಎರಡು ಮೂರು ತಿಂಗಳಿಗೆ ಗಿಡಗಳಾಗಿ ಹೂ ಬಿಡುತ್ತವೆ. ಆ ಹೂಗಳಿಗೆ ಮೂರು ಮೂರು ಎಸಳುಗಳು ಇರುವವು. ಅವುಗಳೊಳಗಿರುವ ಸೂಕ್ಷ್ಮವಾದ ಎಳೆಗಳೇ ಕೇಶರವು. ಹೂಗಳನ್ನು ಕೊಯ್ದು ಮೇಲಿನ ಎಸಳುಗಳನ್ನು ಚೆಲ್ಲಿ, ಒಳಗಿನ ಎಳೆಗಳನ್ನು ತಕ್ಕೊಂಡು, ತುಸು ಬೆಚ್ಚಗೆ ಮಾಡುತ್ತಾರೆ. ಬಳಿಕ ಕಾಗದದ ಮೇಲೆ ಹರವಿ, ಅದರ ಮೇಲೆ ಉಣ್ಣೇ ಬಟ್ಟೆಗಳ ಒಂದೆರಡು ಮಡಿಕೆಗಳನ್ನು ಹಾಕಿ ಹತ್ತೊತ್ತಿ ಇಡುತ್ತಾರೆ. ಉತ್ಕೃಷ್ಟ ಕೇಶರದ ಎಳೆಗಳು ಕೆಂಪಗೆ ಉದ್ದ ಇರುತ್ತವೆ. ಒಂದು ವರ್ಷದ ತರುವಾಯ ಕೇಶರವು ಕೆಡುತ್ತದೆ.

ಒಮ್ಮೆ ಹಚ್ಚಿದ ಕೇಶರದ ಗಿಡಗಳು ಮೂರು ವರ್ಷ ಇರುತ್ತವೆ. ಆ ಮೇಲೆ ಅವುಗಳ ಮೊಳಿಕೆಗಳನ್ನು ಆಗಿದು ಮತ್ತೊಂದು ಸ್ಥಳದಲ್ಲಿ ಊರುತ್ತಾರೆ. ಕೇಶರವು ಔಷಧಕ್ಕೂ ಬಣ್ಣಕ್ಕೂ ಬರುತ್ತದೆ. ಇದು ಸುವಾಸಿಕ ಪದಾರ್ಥವು. ಇದು ಬಹಳ ಬೆಳೆಯುವದಿಲ್ಲ, ಹಾಗೂ ಬಹಳ ಸ್ಥಳಗಳಲ್ಲಿ ಬೆಳೆಯುವದಿಲ್ಲ; ಆದದರಿಂದ ಕೇಶರವು ತುಟ್ಟಿ ಇರುತ್ತದೆ. ಬಣ್ಣದ ಸಲುವಾಗಿಯೂ ಸುಗಂಧದ ಸಲುವಾಗಿಯೂ ಕೆಲವು ತಿನ್ನುವ ಪದಾರ್ಥಗಳಲ್ಲಿ ಕೇಶರವನ್ನು ಹಾಕುತ್ತಾರೆ.

---

## ೬೧ನೇ ಪಾಠ.

### ಕರಡಿ.




ಯುರೋಪ, ಏಶಿಯಾ, ಅಮೇರಿಕ ಖಂಡಗಳೊಳಗೆ ಕರಡಿಗಳು ಬಹಳ; ಆಫ್ರಿಕಾ ಖಂಡದೊಳಗೆ ಮಾತ್ರ ಕಡಿಮೆ. ಯುರೋಪ,

ಏಶಿಯಾ ಖಂಡಗಳ ಉತ್ತರ ಕಡೆಯ ನಾಡುಗಳೊಳಗೂ, ಸಿಂಹಲ ದ್ವೀಪ ಮುಂತಾದ ಕೆಲವು ನಡುಗಡ್ಡೆಗಳೊಳಗೂ ಊದೀ ಬಣ್ಣದ ಕರಡಿಗಳು, ಹಿಂದುಸ್ತಾನದೊಳಗೆ ಕರೇ ಕರಡಿಗಳು, ಉತ್ತರ ಧ್ರುವದ ಕಡೆಯ ಚಳಿನಾಡೊಳಗೆ ಬಿಳೇ ಕರಡಿಗಳು ಉಂಟು.

ಕರಡಿಯ ತಲೆ ಹಲಚಿ, ಮೂಗು ಉದ್ದ, ಕಿವಿಗಳು ಬಟ್ಟಗೆ, ಮೈಮೇಲೆ ಕೂದಲು ಉದ್ದವಾಗಿ ದಟ್ಟವಿರುವವು; ಬಾಲವು ತೀರಾ ಸಣ್ಣದು; ಹೆಜ್ಜೆಗಳು ದೊಡ್ಡವು; ಅಂಗಾಲು ಘಟ್ಟಿ; ಹೆಜ್ಜೆಗೆ ಐದೈದು ಬೆರಳು, ಬೆರಳಿಗೆ ಉದ್ದನ್ನ ಉಗುರುಗಳು ಇರುತ್ತವೆ; ಕಣ್ಣುಗಳು ಸಣ್ಣವು. ಈ ಮೇರೆಗೆ ಕರಡಿಯ ಅವಯುವಗಳೆಲ್ಲ ಅಸಡ್ಡಾಳಾಗಿ ಬಲವುಳ್ಳವಿರುತ್ತವೆ. ಊದೀ ಬಣ್ಣದ ಕರಡಿಗಳು ಐಗೇಣು ನಿಡಿದು, ಮೂರು ಗೇಣು ನಿಲುವು; ಬೂದಿ ಬಣ್ಣದ ಕರಡಿಗಳು ಹನ್ನೆರಡು ಗೇಣು ನಿಡಿದು; ಬಿಳೇ ಕರಡಿಗಳು ಊದೀ ಬಣ್ಣದ ಕರಡಿಗಿಂತ ಮುಮ್ಮಡಿ ದೊಡ್ಡವಿರುತ್ತವೆ. ಅವುಗಳ ಮೂಗೂ ಉಗುರುಗಳೂ ಕಪ್ಪು; ಕರಡಿಯ ಮುಖಮುದ್ರೆಯು ಕ್ರೂರವಾಗಿಯೂ, ಅಮಂಗಲವಾಗಿಯೂ ತೋರುತ್ತದೆ.

ಕರಡಿಗೆ ಬಹುತರವಾಗಿ ಯುಕ್ತಿ ಇಲ್ಲ; ಶಿಟ್ಟು ಬಹಳ. ಕರಡೀ ಆಡಿಸುವವರು ಮರಿಗಳನ್ನು ಹಿಡತಂದು ಅವುಗಳಿಗೆ ಕುಣಿಯಲಿಕ್ಕೆ ಕಲಿಸುತ್ತಾರೆ. ಕರಡಿಯ ಮೂಗಿನ ಮೇಲೆ ಬಡಿದರೆ, ಅದು ಶಿಟ್ಟಿಗೆದ್ದು ಆರ್ಭಟಿಸುತ್ತದೆ. ಬಿಳೇ ಕರಡಿಗಳು ನೀರೊಳಗೆ ಮುಳುಗಿಕೊಂಡು ಹತ್ತು ಹತ್ತು ಹರದಾರೀ ತನಕ ಈಸುತ್ತ ಹೋಗುತ್ತವೆ. ಕರಡಿಗಳು ಮಲಗಿದಾಗ ಗುರುಗುಟ್ಟುತ್ತವೆ; ಎದ್ದಾಗ ಹಾಸುಹೊಯ್ದ ಹಾಗೆ ತಿರುಗಾಡುತ್ತವೆ.

ಕರಡಿಗೆ ಜತೆ ಬೇಡ. ಅದು ಯಾವಾಗಲು ಒಂದೇ ಇರುತ್ತದೆ. ಅದು ಗವಿಗಳಲ್ಲಾಗಲಿ, ಗುಡ್ಡಗಳಲ್ಲಾಗಲಿ, ಗಿಡಗಳ ಹೊದರುಗಳಲ್ಲಾಗಲಿ ಬಿದ್ದುಕೊಂಡು ಇರುತ್ತದೆ. ಯಾರಾದರು ಅವುಗಳ ಮೈಮೇಲೆ ಹೋದರೆ, ಅವು ಶಿಟ್ಟಿಗೆದ್ದು ತಮ್ಮ ಮುಂಗಾಲುಗಳಿಂದ



ಅವರಿಗೆ ತೆಕ್ಕಿಬಿದ್ದು, ಅವರ ಕುತ್ತಿಗೆ ಹಿಚಿಕಿ, ಇಲ್ಲವೆ ಉಸುರು ಕಟ್ಟಿಸಿ ಅವರನ್ನು ಕೊಲ್ಲುತ್ತವೆ. ಚಳಿಗಾಲದಲ್ಲಿ ಕರಡಿಗಳು ತಮ್ಮ ಗವಿಗಳಲ್ಲಿ ನಾಲ್ವತ್ತು ಐವತ್ತು ದಿನ ಅನ್ನವಿಲ್ಲದೆ ಸುಮ್ಮನೇ ಬಿದ್ದುಕೊಂಡಿರುತ್ತವೆ.

ಕರಡಿಗಳು ದನ, ಕರು, ಕುರಿ ಮುಂತಾದವುಗಳನ್ನು ಒಮ್ಮೊಮ್ಮೆ ತಿನ್ನುತ್ತವೆ; ಆದರೂ ಗಡ್ಡೆ, ವನಸ್ಪತಿ, ಕಾಳು, ಹಣ್ಣುಹಂಪಲಗಳನ್ನು ತಿಂದು ಬದುಕುವದು ಬಹಳ. ಅವು ಯಾವಾಗಲು ಜೇನು ಹುಡುಕುತ್ತವೆ. ಅದರ ಸಲುವಾಗಿಯೇ ಮರವೇರುವವು.

ಹೆಣ್ಣು ಕರಡಿಗಳು ಮಾಗೀಕಾಲದಲ್ಲಿ ಈಯುತ್ತವೆ; ಸರತಿಗೆ ಎರಡೆರಡು ಮರಿಗಳು ಹುಟ್ಟುವವು. ಕರಡಿಯ ತೊಗಲಿನಿಂದ ಜೋಡು, ಕೈಚೀಲು, ಟೊಪ್ಪಿಗೆ ಮುಂತಾದವುಗಳನ್ನು ಮಾಡುತ್ತಾರೆ. ರೂಸ ದೇಶದೊಳಗಿನ ಶ್ರೀಮಂತರು ಚಳಿಗಾಲದಲ್ಲಿ ಕರಡಿಯ ತೊಗಲು ಹೊದ್ದುಕೊಳ್ಳುತ್ತಾರೆ. ಉತ್ತರ ಕಡೆಯ ಜನರು ಕರಡಿಗಳಿಂದ ವೈದ್ಯತನವನ್ನು ಕಲಿಯುತ್ತಾರೆ. ಹ್ಯಾಗಂದರೆ, ಘಾಯವಾದಾಗ ಅವು ಹಚ್ಚಿಕೊಳ್ಳುವ ಔಷಧವನ್ನೂ, ಬೇನೆ ಬಂದಾಗ

ತಿನ್ನುವ ವನಸ್ಪತಿಗಳನ್ನೂ ನೋಡಿಕೊಂಡು ಅವರು ಅದರಂತೆ ಮಾಡುತ್ತಾರೆ; ಅವರು ಕರಡೀ ನೋಡಿ ಕುಣಿಯುವದನ್ನೂ ಕಲಿತು ಕೊಂಡರು.

---

## ೬೨ನೇ ಪಾಠ.

## ರೊಟ್ಟಿ.



ಬಡಬಗ್ಗರು ಮುಖ್ಯವಾಗಿ ರೊಟ್ಟೀ ತಿಂದು ಜೀವಿಸುತ್ತಾರೆ. ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಪದಾರ್ಥಗಳಿಂದ ರೊಟ್ಟೀ ಮಾಡುವರು; ಗೋಧೀ ರೊಟ್ಟಿಯು ಎಲ್ಲಕ್ಕೂ ಮೇಲಾದದ್ದು. ಅದನ್ನು ಯಾವತ್ತು ಸುಧಾರಿಸಿದ ರಾಷ್ಟ್ರಗಳ ನಿವಾಸಿಗಳು ಮಾಡ ಬಲ್ಲರು. ನಮ್ಮ ದೇಶದಲ್ಲಿ ಗೋಧಿ, ಶಜ್ಜೆ, ಜೋಳ, ರಾಗಿ, ಅಕ್ಕಿ, ಈ ಧಾನ್ಯಗಳ ರೊಟ್ಟಿಗಳನ್ನು ಮಾಡುವರು.

ಕೆಲವು ಕಡೆಯಲ್ಲಿ ಗಿಡಗಳ ತೊಗಟೆಯನ್ನು ಕುಟ್ಟಿ ಹಿಟ್ಟು ಮಾಡಿ ಅದರ ರೊಟ್ಟೀ ಮಾಡುತ್ತಾರೆ. ಕೆಲವು ಕಡೆಯಲ್ಲಿ ಗಡ್ಡೆಗಳ ರೊಟ್ಟೀ ಮಾಡುತ್ತಾರೆ. ಕೆಲವು ಸ್ಥಳಗಳಲ್ಲಿ ಹಾವಸೆಯ, ಕೆಲವು ಕಡೆಯಲ್ಲಿ ಅಂಟಿನ ರೊಟ್ಟೀ ಮಾಡುವರು.


ಮೊಲಕ್ಕಾ ಎಂಬ ನಡುಗಡ್ಡೆಗಳೊಳಗಿನವರಿಗೆ ಹೊಲಾ ಹರಗುವದೂ ಬಿತ್ತುವದೂ ಅವಶ್ಯವಿಲ್ಲ. ಯಾಕಂದರೆ ದೇವರು ಅಲ್ಲಿ ಅವರಿಗೆ ಒಂದು ತರದ ಗಿಡಗಳನ್ನು ದಯೆಪಾಲಿಸಿದ್ದಾನೆ. ಅವುಗಳಿಂದ ಅವರಿಗೆ ಬೇಕಾದಷ್ಟು ಹಿಟ್ಟು ದೊರೆಯುತ್ತದೆ; ಆ ಹಿಟ್ಟಿನ ರೊಟ್ಟಿಯಿಂದ ಅವರು ಬದುಕುತ್ತಾರೆ; ತೆಂಕಣ ಕಡಲೊಳಗಿನ ನಡುಗಡ್ಡೆಗಳಲ್ಲಿರುವವರ ಸಲುವಾಗಿ ದೇವರು ಮತ್ತೊಂದು ಬಗೆಯ ಗಿಡಗಳನ್ನು ಹುಟ್ಟಿಸಿದ್ದಾನೆ; ಅವುಗಳಿಗೆ ಕೆಲವರು ರೊಟ್ಟೀ ಗಿಡಗಳೆಂದೆನ್ನುತ್ತಾರೆ. ಆ ಗಿಡಗಳಿಗೆ ಕಂಚೀ ಕಾಯಷ್ಟು ಕಾಯಿಗಳಾಗುವವು. ಅವು ಹಣ್ಣಾದ ಕೂಡಲೆ ಅವನ್ನು ಪೊಳ್ಳು ಮಾಡಿದ ಎರಡು ಕಲ್ಲುಗಳೊಳಗೆ ಹಾಕಿ ಬೇಯಿಸುತ್ತಾರೆ. ಬಳಿಕ ಮೇಲಿನ



ತೊಗಟೀ ತೆಗದು ಒಳಗಿನ ಬಿಳೀ ತಿಳಲು ತಿನ್ನುತ್ತಾರೆ. ಅದು ಗೋಧೀ ರೊಟ್ಟಿಯ ಹಾಗೆ ಸವಿ ಹತ್ತುತ್ತದೆ.

ನಾರ್ವೆ ದೇಶದವರು ಮಾಡುವ ರೊಟ್ಟಿಗಳು ಮೂವತ್ತು ನಾಲ್ವತ್ತು ವರ್ಷ ತಾಳುತ್ತವೆ. ಹೊಸ ರೊಟ್ಟಿಗಿಂತ ಹಳೇ ರೊಟ್ಟಿಯ ಮೇಲೆ ಅವರ ಪ್ರೀತಿ ಬಹಳ. ಹಳೆದಾದ ಹಾಗೆ ಅವರೊಳಗೆ ರೊಟ್ಟಿಯ ಮಾನವು ಹೆಚ್ಚಾಗುತ್ತದೆ. ಬಹಳ ವರ್ಷದ ರೊಟ್ಟಿಯನ್ನು ದೊಡ್ಡ ದೊಡ್ಡ ಸಮಾರಂಭದಲ್ಲಿ ಬಡಿಸುತ್ತಾರೆ. ಕೂಸು ಹುಟ್ಟಿದಾಗ, ಆ ಕೂಸಿನ ಅಜ್ಜ ಮುತ್ತಂದಿರು ಹುಟ್ಟಿದ ದಿನ ಮಾಡಿದ

ರೊಟ್ಟಿ ಇದ್ದರೆ, ಅದನ್ನು ಬಂಧುಬಳಗದವರಿಗೆ ತಿನ್ನಲಿಕ್ಕೆ ಕೊಡುತ್ತಾರೆ. ಜವೆಗೋಧಿಗಳೂ, ಬೇರೆ ತರದ ಕಾಳುಗಳೂ ಆ ನಾಡೊಳಗೆ ಹುಟ್ಟುತ್ತವೆ; ಆ ಕಾಳುಗಳಿಂದ ಸಹ ರೊಟ್ಟೀ ಮಾಡಿ, ತೋಡಿದ ಎರಡು ಕಲ್ಲುಗಳೊಳಗೆ ಹಾಕಿ ಸುಡುತ್ತಾರೆ.



## ೭೩ನೇ ಪಾಠ.

### ಪಾರಿವಾಳ.

ಪಾರಿವಾಳಗಳು ಬಹು ಚಂದವಾದ ಪಕ್ಷಿಗಳು. ಅವುಗಳ ಸ್ವಭಾವವು ಬಹಳ ಶಾಂತವು. ಅವು ಬಹುತರವಾಗಿ ಮನುಷ್ಯರ ಆಶ್ರಯದ ಹೊರ್ತು ಅಡವಿಗಳೊಳಗೆ ಸ್ವತಂತ್ರದಿಂದ ಇರುವದಿಲ್ಲ. ಕೆಲವು ಸೊಗಸುಗಾರರು ಪಾರಿವಾಳಗಳನ್ನು ಸಾಕುತ್ತಾರೆ. ಅವುಗಳ ಸಲುವಾಗಿ ಸಣ್ಣ ಮನೆಯನ್ನು ಕಟ್ಟಿ, ಅದಕ್ಕೆ ಪಾರಿವಾಳದ ಮನೆ ಎನ್ನುವರು. ಆ ಮನೆಯೊಳಗೆ ಪಾರಿವಾಳಗಳು ಇರುತ್ತವೆ.



ಅವುಗಳಲ್ಲಿ ಒಂದು ಹೆಣ್ಣು ಒಂದು ಗಂಡು ಕೂಡಿ ಜತೆಯಾಗಿ ಇರುತ್ತವೆ. ತಮ್ಮ ಸ್ಥಳದೊಳಗೇ ದಿನಾಲು ಅವೆರಡೂ ಕೂಡಿ ತಪ್ಪದೆ ಹೋಗಿ ಕೂತುಕೊಳ್ಳುತ್ತವೆ. ಅವು ಎರಡನೇ ಪಾರಿವಾಳಗಳ ಸ್ಥಳಕ್ಕೆ ಹೋಗುವದಿಲ್ಲ, ಎರಡನೇ ಪಾರಿವಾಳಗಳನ್ನು ತಮ್ಮ ಸ್ಥಳಕ್ಕೆ ಬರಗೊಡುವದಿಲ್ಲ. ತಾವು ಇರುವ ಮನೆಯನ್ನು ಬಿಟ್ಟು ತಪ್ಪಿಸಿಕೊಂಡು ಅವು ಎಂದಿಗೂ ಹೋಗುವದಿಲ್ಲ. ಸಾಕಿದವನು ಅವುಗಳನ್ನು ದಿನಕ್ಕೆ ಎರಡು ಸಾರಿ ಹೊರಗೆ ಬಿಡುತ್ತಾನೆ. ಅವೆಲ್ಲ ಕೂಡಿ ಹಿಂಡುಗಟ್ಟಿ ಇತ್ತಕಡೆಗೂ ಅತ್ತಕಡೆಗೂ ಒಂದೆರಡು ಗಳಿಗೆ ಹಾರಾಡಿ ತಿರಿಗಿ ತಮ್ಮ ಮನೆಯ ಹತ್ತರ ಬರುತ್ತವೆ. ಬಳಿಕ ಆವನು ಅವುಗಳಿಗೆ ಕಾಳೂ ನೀರೂ ಹಾಕಿ ಪುನಃ ಅವುಗಳನ್ನು ಮನೆಯೊಳಗೆ ಹಾಕುತ್ತಾನೆ. ಬೇರೆ ಬೇರೆ ಸ್ಥಳದ ಹಿಂಡುಗಳು ಹಾರುವಾಗ ಒಂದು ಹಿಂಡಿನೊಳಗೆ ಮತ್ತೊಂದು ಹಿಂಡಿನೊಳಗಿನ ಪಾರಿವಾಳವು ಕೂಡಿದರೂ ಅವು ಕೆಳಗೆ ಇಳಿಯುವಾಗ ಬೇರೆ ಬೇರೆ ಅಗಲಿ ತಮ್ಮ ತಮ್ಮ ಮನೆಗೆ ಬರುತ್ತವೆ. ಪಾರಿವಾಳದ ಪೀಳಿಗೆ ಬಹು ಬೇಗ ಬೆಳೆಯುವದು. ಹೆಣ್ಣು ಪಾರಿವಾಳಗಳು ಮೂರು ಮೂರು ತಿಂಗಳಿಗೆ ಎರಡೆರಡು ತತ್ತಿಗಳನ್ನು ಹಾಕುತ್ತವೆ. ಹೆಣ್ಣೊಂದು ಗಂಡೊಂದು ಇದ್ದರೆ, ವರ್ಷದೊಳಗೆ ಹತ್ತು ಹನ್ನೆರಡು ಪಾರಿವಾಳಗಳು ಆಗುವವು.

ಬಿಳೇವು, ಕರೇವು, ಹಂಡಬಂಡ, ಕೆಂಪು, ಬೂದಿಬಣ್ಣದವು, ಈ ಮೇರೆಗೆ ಹಲವು ಬಣ್ಣದ ಪಾರಿವಾಳಗಳುಂಟು. ಜುಟ್ಲೇ ಎಂಬ

ಪಾರಿವಾಳಗಳಿಗೆ ತುರಾಯಿ ಇರುತ್ತದೆ. ಕಾಲಕುಬಸದ ಪಾರಿವಾಳಗಳ ಕಾಲ ಮೇಲೆ ತುಪ್ಪಳ ಇರುತ್ತದೆ. ಲಕ್ಕಾ ಎಂಬ ಪಾರಿವಾಳಗಳು ಎದೆ ಹಾಯಿಸಿಕೊಂಡು, ಹಿಂಗರಿಯನ್ನು ನಿಗರಿಸಿಕೊಂಡು, ಹಿಂದಕ್ಕೆ ಸೆಟೆದಿರುತ್ತವೆ. ಈ ಜಾತಿಯ ಪಾರಿವಾಳಗಳು ಬಹಳ ಮೇಲಕ್ಕೆ ಹಾರುವದಿಲ್ಲ. ಗಿರೇಬಾಜ ಪಾರಿವಾಳಗಳು ಹಾರುವಾಗ ಲಾಗ ಹೊಡೆಯುತ್ತವೆ. ಲೋಟಾ ಎಂಬ ಪಾರಿವಾಳಗಳು ನೆಲದ ಮೇಲೆ ಉರುಳುತ್ತ ಹೋಗುತ್ತವೆ; ಇವುಗಳಿಗೆ ಚನ್ನಾಗಿ ಹಾರಲಿಕ್ಕೆ ಬರುವದಿಲ್ಲ.

ಅಡವೀ ಪಾರಿವಾಳಗಳು ಮನುಷ್ಯರನ್ನು ನಂಬುವದಿಲ್ಲ. ಇವು ಮುಗಿಲ ಬಣ್ಣದವು; ಎತ್ತರವಾದ ಗುಡಿಗಳ ಮೇಲಾಗಲಿ ಆಳವಾದ ಬಾವಿಗಳೊಳಗಾಗಲಿ ಮನೆ ಮಾಡಿಕೊಂಡು ಇರುತ್ತವೆ. ಇವು ಊರ ಪಾರಿವಾಳಗಳೊಳಗೆ ಕೂಡುವದಿಲ್ಲ.

---

## ೬೪ನೇ ಪಾಠ.

## ಅಕ್ರೋಡ.

ಚೀನ ದೇಶದ ಪಡುವಣದಲ್ಲಿಯೂ, ಹಿಮಾಲಯದ ಸುತ್ತುಮುತ್ತಲೂ, ಇರಾಣ ದೇಶದಲ್ಲಿಯೂ ಅಕ್ರೋಡದ ಗಿಡಗಳು ಬಹಳ. ಆ ನಾಡುಗಳಲ್ಲಿ ಅಕ್ರೋಡದ ದೊಡ್ಡ ದೊಡ್ಡ ಹಳುವುಗಳುಂಟು. ಅಕ್ರೋಡದ ಎಲೆಗಳು ಹಚ್ಚಗೆ ಬಹು ಚಂದವಿರುತ್ತವೆ; ಹಣ್ಣುಗಳು ಪೇರಲ ಹಣ್ಣಿನಷ್ಟು ಆಗುತ್ತವೆ; ಅವುಗಳ ಮೇಲಿನ ತೊಗಟೆ ಮಿದುವು; ಅದನ್ನು ತಿಕ್ಕಿದರೆ ಬೆರಳುಗಳು ಕಪ್ಪು ಆಗುತ್ತವೆ. ಒಳಗಿನ ಚಿಪ್ಪು ಬಲಿಯುವದಕ್ಕೆ ಮುಂಚೆ ಅಕ್ರೋಡದ ಕಾಯಿಗಳನ್ನು ಉಪ್ಪಿನಕಾಯಿ ಹಾಕುತ್ತಾರೆ. ಹಣ್ಣಾದ ಬಳಿಕ ಮೇಲಿನ ತೊಗಟೇ ಸುಲಿದು ಒಳಗಿನ ಅಕ್ರೋಡಗಳನ್ನು ಪೇಟೆ


ಯೊಳಗೆ ಮಾರಲಿಕ್ಕೆ ತರುತ್ತಾರೆ. ಅಕ್ರೋಡದ ಎಣ್ಣೆಯು ದೀವಿಗೆಗೂ ಉಣ್ಣುವದಕ್ಕೂ ಬರುತ್ತದೆ. ಅಕ್ರೋಡದ ಕಟ್ಟಿಗೆ ಬಿರುಸು; ಅದು ಬಹಳ ಕೆಲಸಗಳಿಗೆ ಬರುವದು. ಹೊಟ್ಟೆಯೊಳಗೆ ಜಂತುಗಳಾದರೆ, ಆ ನಾಡೊಳಗಿನವರು ಕಹಿ ಅಕ್ರೋಡದ ರಸವನ್ನು ತೆಗೆದು ಕುಡಿಯುತ್ತಾರೆ.

ಅಕ್ರೋಡದ ಗಿಡಗಳಿಗೆ ಬೇಗ ಕಾಯಿಗಳಾಗುವದಿಲ್ಲ; ಹಚ್ಚಿದ ಮೂವತ್ತು ನಾಲ್ವತ್ತು ವರ್ಷಕ್ಕೆ ಆಗಹತ್ತುತ್ತವೆ. ಇದರ ಹಣ್ಣಿನ ಸುಗ್ಗಿ ಆಶ್ವಿನ ಕಾರ್ತಿಕಗಳಲ್ಲಿ. ಈ ಗಿಡಗಳಿಗೆ ಬಹಳ ವರ್ಷಕ್ಕೆ ಕಾಯಿಗಳಾಗುತ್ತವೆಂಬ ಬಗ್ಗೆ ಒಂದು ಕಥೆಯುಂಟು. ಅದೇನಂದರೆ—ಒಬ್ಬ ಗೃಹಸ್ಥನು ಅರುವತ್ತು ವರ್ಷದವನಾದಾಗ ಅಕ್ರೋಡದ ಸಸಿಯನ್ನು ಹಚ್ಚುತ್ತಿದ್ದನು; ಅದನ್ನು ಕಂಡು ಒಬ್ಬನು—ಹಿರಿಯರೇ, ಇದು ಯಾತರ ಗಿಡವೆಂದು ತಿಳುಕೊಂಡು ಹಚ್ಚುತ್ತೀರಿ? ಇದನ್ನು ಹಚ್ಚಿದರೆ ನಿಮಗೇನು ಪ್ರಯೋಜನ? ಎಂದು ನಗೆಮಾತಿನಿಂದ ಕೇಳಿದನು. ಅದಕ್ಕೆ ಅವನು—ಎಲೈ ಗೃಹಸ್ಥನೇ, ಸುಮ್ಮನೆ ಹಚ್ಚುವದುಂಟೇ? ತಿಳುಕೊಂಡೇ ಹಚ್ಚುತ್ತೇನೆ. ಇಂದಿನ ತನಕ ನಾನು ತಿಂದ ಅಕ್ರೋಡಗಳ ಗಿಡಗಳನ್ನೆಲ್ಲ ನಾನೇ ಹಚ್ಚಿದ್ದೆನೋ? ಎರಡನೆಯವರು ಹಚ್ಚಿದ ಗಿಡಗಳ ಫಲಗಳನ್ನು ನಾನು ತಿಂದಂತೆಯೇ, ಮುಂದಿನವರ ಸಲುವಾಗಿ ಗಿಡಗಳನ್ನು ಹಚ್ಚುವದು ನನಗೆ ತಕ್ಕದ್ದು. ತನ್ನ ಒಳಿತಕ್ಕಾಗಿಯೇ ಮನುಷ್ಯನು ದುಡಿಯಬೇಕೆಂಬುವದಲ್ಲ, ಮಂದಿಯ ಒಳಿತಕ್ಕೂ ದುಡಿಯತಕ್ಕದ್ದು.

ದೇವರು ಪ್ರತಿ ನಾಡೊಳಗೆ ಅಲ್ಲಿಯ ಹವೆ ನೆಲಗಳಂತೆ ಬೇರೆ ಬೇರೆ ಗಿಡಗಳನ್ನು ಹುಟ್ಟಿಸಿ ಜನರನ್ನು ಕಾಪಾಡುತ್ತಾನೆ.


## ೬೫ನೇ ಪಾಠ.

### ಹಡಗು.




ಸಮುದ್ರದ ಮೇಲಿಂದ ಪ್ರಯಾಣ ಮಾಡುವದಕ್ಕಾಗಿ ಹಡಗುಗಳನ್ನು ಮಾಡುತ್ತಾರೆ. ಯುರೋಪೀಯನ್ ಜನರು ಈ ದೇಶಕ್ಕೆ ಬರುವದಕ್ಕೆ ಮುಂಚೆ ಈ ದೇಶದ ವ್ಯಾಪಾರಸ್ಥರು ಫತ್ತೆಮಾರಿಗಳಲ್ಲಿಯೂ ಬಗಲಗಳಲ್ಲಿಯೂ ಸರಕುಗಳನ್ನು ತುಂಬಿಕೊಂಡು ವ್ಯಾಪಾರದ ಸಲುವಾಗಿ ಸಮುದ್ರಪ್ರಯಾಣ ಮಾಡುತ್ತಿದ್ದರು. ಇಂಥವು ಈಗಲೂ ಬಹಳ ಉಂಟು. ಹಿಂದುಸ್ತಾನದೊಳಗಿನ ಒಂದು ಬಂದರದಿಂದ ಮತ್ತೊಂದು ಬಂದರಕ್ಕೆ ಮಾತ್ರ ಫತ್ತೆಮಾರಿಗಳು ಹೋಗುವವು; ಬಗಲಗಳು ದೂರಿನ ದೇಶಗಳಿಗೆ ಹೋಗುತ್ತವೆ. ಅರಬೀ ಜನರು ಮಾರಾಟದ ಕುದುರೆಗಳನ್ನು ಬಗಲಗಳ ಮೇಲೆ ಹಾಕಿಕೊಂಡು ಈ ದೇಶಕ್ಕೆ ತರುತ್ತಾರೆ. ಇಂಥ ಹಡಗುಗಳಿಗೂ ಯುರೋಪೀಯನ್ ಜನರ ಹಡಗುಗಳಿಗೂ ಬಹಳ ಭೇದವದೆ.

ಯುರೋಪೀಯನ್ ಜನರು ಮೊದಲು ತಮ್ಮ ಹಡಗುಗಳನ್ನು ಓಕ
ವೆಂಬ ಜಾತಿಯ ಕಟ್ಟಿಗೆಯಿಂದ ಮಾಡುತ್ತಿದ್ದರು; ಈಗ ಸಾಧಾರಣ
ವಾಗಿ ಕಬ್ಬಿಣದಿಂದ ಮಾಡುತ್ತಾರೆ. ಇವುಗಳಲ್ಲಿ ಗಾಳಿಯಿಂದ ಸಾ
ಗುವ ಹಡಗು ಎಂತಲೂ, ಉಗಿಯಿಂದ ಸಾಗುವ ಹಡಗು ಎಂತಲೂ
ಎರಡು ತರಗಳುಂಟು. ಇವು ಬಹಳ ಉತ್ಕೃಷ್ಟವಿರುತ್ತವೆ; ಸಾವಿ
ರಾರು ಖಂಡಗ ಒಜ್ಜೆ ಹಿಡಿಸುವ ಹಾಗೆ ಇರುವವು. ಯುದ್ಧದ
ಸಲುವಾಗಿ ದೊಡ್ಡ ದೊಡ್ಡ ಹಡಗುಗಳನ್ನು ಕಬ್ಬಿಣದಿಂದ ಮಾಡು
ತ್ತಾರೆ; ಇವುಗಳಲ್ಲಿ ತೋಪು, ಮದ್ದು, ಗುಂಡು ಮುಂತಾದ ಸಾ
ಮಾನು ಸಹಿತವಾಗಿ ದಂಡುಗಳು ಇರುತ್ತವೆ.



ಬಹಳ ದೊಡ್ಡ ಹಡಗಿಗೆ ಮೂರು ಪಟಸ್ತಂಭಗಳಿರುತ್ತವೆ;
ಅವುಗಳಿಗಿಂತ ಸಣ್ಣ ಹಡಗಿಗೆ ಎರಡು ಪಟಸ್ತಂಭಗಳಿರುವವು.
ಗಾಳೀ ಹಿಡಿಯುವದರ ಸಲುವಾಗಿ ಸ್ತಂಭಗಳಿಗೆ ಪಟಗಳನ್ನು ಹಚ್ಚಿ
ರುತ್ತಾರೆ. ಆ ಪಟಗಳನ್ನು ಖಾರವಿಯಿಂದಾಗಲಿ ಪಡಮದಿಂದಾ
ಗಲಿ ಮಾಡಿರುತ್ತಾರೆ. ಕುದುರೆಗಳನ್ನು ನಡಿಸುವದಕ್ಕೆ ಕಡಿವಾಣ
ವಿದ್ದಂತೆ ಹಡಗುಗಳನ್ನು ನಡಿಸುವದಕ್ಕೆ ಸುಕಾಣು ಇರುತ್ತದೆ.


ಸುಕಾಣನ್ನು ತಿರುಗಿಸಿದಂತೆ ಹಡಗು ಅತ್ತಿತ್ತ ತಿರುಗುತ್ತದೆ. ಹಡಗಿನ ಹಿಕ್ಕಟ್ಟಿನಲ್ಲಿ ಸುಕಾಣು, ಮುಕ್ಕಟ್ಟಿನಲ್ಲಿ ಘಡತರವಾದದ್ದೊಂದು ಕಬ್ಬಿಣ ಸರಪಳಿಯು ಇರುವವು. ಆ ಸರಪಳಿಯ ತುದಿಗೆ ಕಬ್ಬಿಣದ್ದೊಂದು ದೊಡ್ಡ ಪಾತಾಳಗಡ ಹಚ್ಚಿರುತ್ತದೆ; ಅದಕ್ಕೆ ಲಂಗರವೆಂಬ ಹೆಸರು. ಹಡಗವನ್ನು ಸಮುದ್ರದೊಳಗೆ ನಿಲ್ಲಿಸಬೇಕಾದರೆ, ಈ ಸರಪಳಿಯನ್ನು ಕೆಳಗೆ ಇಳಿಯ ಬಿಡಲು, ಆ ಲಂಗರವು ತಳಕ್ಕೆ ಹೋಗಿ ಬುಡದೊಳಗಿನ ಕೆಸರೊಳಗೆ ಶಿಕ್ಕೊಂಡು ನಿಲ್ಲುತ್ತದೆ. ಅದ್ದರಿಂದ ಹಡಗು ಕಂಭಕ್ಕೆ ಕಟ್ಟಿದ ಹಾಗೆ ಅಲ್ಲಿಯೇ ತಡೆದು ನಿಲ್ಲ



ವದು. ಬಳಿಕ ಹಡಗು ಸಾಗಿಸುವದಾದರೆ, ಆ ಸರಪಳಿಯನ್ನು ಮೇಲಕ್ಕೆ ಎಳಕೊಂಡು ಪಟವನ್ನು ಏರಿಸುತ್ತಾರೆ; ಆ ಮೇಲೆ ಹಡಗು ಸಾಗಹತ್ತುತ್ತದೆ.

ಹಡಗುಗಳು ಸಮುದ್ರದ ದಂಡೆಗೆ ಬರುವದಿಲ್ಲ, ಆ ಕಾರಣ ಡೋಣಿಗಳೊಳಗಿಂದ ಸರಕುಗಳನ್ನೂ ಮನುಷ್ಯರನ್ನೂ ಒಯ್ದು ಹಡಗಕ್ಕೆ ಮುಟ್ಟಿಸುತ್ತಾರೆ.

ಹಡಗಿನಿಂದ ಮನುಷ್ಯರಿಗೆ ಬಹಳ ಪ್ರಯೋಜನವದೆ. ಹಡಗುಗಳು ಇಲ್ಲದಿದ್ದರೆ, ಸಮುದ್ರದೊಳಗಿಂದ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗಲಿಕ್ಕೂ ಬರಲಿಕ್ಕೂ ಜನರಿಗೆ ಬರುತ್ತಿದ್ದಿಲ್ಲ; ದೇಶ ದೇಶಗಳ ಹಲವು ತರದ ಒಡವೆಗಳು ಪೃಥ್ವಿಯ ಎಲ್ಲ ಭಾಗಗಳಿಗೂ ಒದಗುತ್ತಿದ್ದಿಲ್ಲ; ಜನರ ಜ್ಞಾನವೂ ಈಗಿನಷ್ಟು ಹೆಚ್ಚಾಗುತ್ತಿದ್ದಿಲ್ಲ.



## ೭೭ನೇ ಪಾಠ.


### ಗೂಗೆ.

ಗೂಗೆಯು ಇರುಳು ತಿರುಗಾಡುವ ಪಕ್ಷಿಯು. ಇದರ ತಲೆ ಕುಸು ಹೆಚ್ಚುಕಡಿಮೆ ಬೆಕ್ಕಿನ ತಲೆಯ ಹಾಗೆ ಗುಂಡಗಿರುವದು. ಕಣ್ಣುಗಳು ದೊಡ್ಡವು; ಸುತ್ತುಮುತ್ತು ಕೂದಲು ಬೆಳದಿರುತ್ತವೆ. ಸೂರ್ಯನ ಬೆಳಕಿನೊಳಗೆ ಗೂಗೆಯು ಕಣ್ಣು ಕಾಣಿಸುವದಿಲ್ಲ. ಅದರಿಂದಲೇ ಅದು ಹಗಲು ಹೊರಗೆ ಬರುವದಿಲ್ಲ; ಬಂದರೆ ಉಳಿದ ಪಕ್ಷಿಗಳು ಅದನ್ನು ತಲೆ ತಲೆ ಕುಕ್ಕುತ್ತವೆ.



ಗೂಗೆಯ ಕಿವಿಗಳು ಚನ್ನಾಗಿ ಕೇಳಿಸುತ್ತವೆ. ಅದರ ರೆಕ್ಕೆಯ ಗರಿಗಳು ಬಹು ಮೆತ್ತಗಿರುವದರಿಂದ ಅದು ಹಾರುವಾಗ ಸಪ್ಪಳ ವಾಗುವದಿಲ್ಲ. ಮರದ ಹೊದರುಗಳಲ್ಲಿಯೂ ಹಾಳು ದೇಗುಲಗಳ ಲ್ಲಿಯೂ ಇವು ಇರುತ್ತವೆ. ಗೂಗೆಗಳಿಗೆ ಗೂಡು ಕಟ್ಟಿಕೊಳ್ಳಲಿಕ್ಕೆ ಬರುವದಿಲ್ಲ. ಎಲ್ಲಿಯಾದರು ಚಲೋ ಸ್ಥಳ ನೋಡಿ ಅಲ್ಲಿ ತತ್ತಿ ಹಾಕಿ ಮರಿ ಮಾಡುತ್ತವೆ. ಗೂಗೆಗಳು ಇಲಿ, ಕಪ್ಪೆ, ಹುಳಗ ಳನ್ನು ತಿನ್ನುತ್ತವೆ.

ಇವು ತಮ್ಮ ಮರಿಗಳನ್ನು ಬಹು ಎಚ್ಚರದಿಂದ ಜೋಪಾನ ಮಾಡುತ್ತವೆ. ಇರುಳು ಬೆಕ್ಕುಗಳಾಗಲಿ, ಬೆಕ್ಕಿನ ಮರಿಗಳಾಗಲಿ ಶಿಕ್ಕರೆ, ಗೂಗೆಗಳು ಕಣ್ಣು ಕುಕ್ಕಿ ಅವುಗಳನ್ನು ಕೊಲ್ಲುವದುಂಟು.



ಗೂಗೆಯ ಧ್ವನಿಯು ಬಹು ಅಮಂಗಲವು. ಇವು ಕೂಗಿದರೆ ಕೇಡಾಗುವದೆಂದು ಬುದ್ಧಿಹೀನರು ತಿಳಕೊಂಡು ಹೆದರುತ್ತಾರೆ.

## ೭೭ನೇ ಪಾಠ.

### ಪರೋಪಕಾರಿಯಾದ ಹುಡುಗನು.

ಒಂದು ದಿನ ಬೆಳಿಗ್ಗೆ ನಿಜಗುಣಿಯೆಂಬ ಒಬ್ಬ ಹುಡುಗನು ಒಂದು ಕೆಲಸದ ಸಲುವಾಗಿ ನೆರೆಹಳ್ಳಿಗೆ ಹೊರಟನು. ಅದು ಅವನ ಊರಿಂದ ಹೆಚ್ಚುಕಡಿಮೆ ಮೂರು ಹರದಾರಿ ದೂರವಿತ್ತು. ಅಲ್ಲಿ ಒಂದೆರಡು ದಿನ ನಿಲ್ಲಬೇಕಾದೀತೆಂದು ನಿಜಗುಣಿಯು ತನಗೆ ಹತ್ತುವಷ್ಟು ರೊಟ್ಟೀ ಬುತ್ತೀ ಕಟ್ಟಿಸಿಕೊಂಡಿದ್ದನು. ಅವನು ಹೋಗುವಾಗ ದಾರಿಯಲ್ಲಿ ಹಸಿವಿಯಿಂದ ಬಳಲುತ್ತಿರುವ ಒಂದು ನಾಯಿಯನ್ನು ಕಂಡನು. ಅವನನ್ನು ಕಂಡ ಕೂಡಲೆ ಆ ನಾಯಿಯು ಬಾಲ ಅಲ್ಲಾಡಿಸುತ್ತಾ ಅವನ ಬಳಿಗೆ ಬಂದು, ಮೋರೆ ಮೇಲಕ್ಕೆ



ಮಾಡಿ ಏನೋ ಬೇಡುವಂತೆ ಕುಂಯಿ ಕುಂಯಿ ಮಾಡಹತ್ತಿತು. ಅದನ್ನು ಕಂಡು ದಯೆ ಹುಟ್ಟಿ ನಿಜಗುಣಿಯು ಮನಸ್ಸಿನಲ್ಲಿ—ಈ ನಾಯಿಯು ಬಹಳ ಹಸಿದದೆ. ಕಟ್ಟಿ ತಂದ ಅನ್ನದಲ್ಲಿ ತುಸು ಇದಕ್ಕೆ

ಹಾಕಿದರೆ, ನನಗೆ ಕಡಿಮೆಯಾಗಬಹುದು. ಆದರೂ ಚಿಂತೆಯಿಲ್ಲ. ಒಂದು ದಿನ ಉಪವಾಸ ಬಿದ್ದರೆ ನಾನೇನೂ ಸಾಯಲಿಕ್ಕಿಲ್ಲ. ಆದರೆ ಈ ನಾಯಿ ಬೇಗ ಕೂಳು ಶಿಗದಿದ್ದರೆ ಸಾಯುವದೆಂದು ತಿಳಿದು, ಬುತ್ತೀ ಗಂಟು ಬಿಚ್ಚಿ ಅದಕ್ಕೆ ಒಂದು ತುಣಕು ರೊಟ್ಟೀ ತುಸು ಬುತ್ತೀ ಹಾಕಿದನು. ಬಹಳ ಹಸಿದದರಿಂದ ಆ ನಾಯಿಯು ಅದನ್ನು ಗಪಗಪನೆ ತಿಂದು ಬಿಟ್ಟಿತು.

ಬಳಿಕ ಆ ಹುಡುಗನು ದಾರೀ ಹಿಡಿದು ಮುಂದಕ್ಕೆ ನಡೆದನು. ಆ ನಾಯಿಯು ಅವನ ಬೆನ್ನು ಹತ್ತಿ ಹಿಂದಿಂದ ಹೋಯಿತು. ಸ್ವಲ್ಪ ಮುಂದೆ ಹೋದ ಮೇಲೆ ನಿಜಗುಣಿಯು ದಾರಿಯಲ್ಲಿ ಬಿದ್ದುಕೊಂಡಿರುವ ಒಂದು ಕುದುರೆಯನ್ನು ಕಂಡನು. ಅದು ಬೇನೆ ಬಂದ ಹಾಗೆ ಬಿದ್ದಿತ್ತು. ಆದರ ಬಳಿಗೆ ಹೋಗಿ ನೋಡಲಾಗಿ, ಅದು ನಾಲ್ಕೂ ಕಾಲು ಚಾಚಿಕೊಂಡು ಬಿದ್ದದೆ; ಹೊಟ್ಟೆಯು ಶೇದಿ ಹೋಗಿದೆ; ಅದರ ಬರಕೀ ಎಲುವುಗಳೇ ಕಾಣಿಸುತ್ತವೆ; ಅದಕ್ಕೆ ಏಳುವಷ್ಟು ತ್ರಾಣ ಸಹ ಇಲ್ಲ. ಇದನ್ನೆಲ್ಲ ಕಂಡು ನಿಜಗುಣಿಯು ಮನಸ್ಸಿನೊಳಗೆ—ಈಗ ಹುಲ್ಲು ನೀರು ಹಾಕಿ ಇದನ್ನು ಎಬ್ಬಿಸುವ ಪ್ರಯತ್ನ ನಡಿಸಿದರೆ, ನನಗೆ ತಡವಾಗುವದು. ಒಂದು ವೇಳೆ ಇಲ್ಲ ಕತ್ತಲಾಯಿತಂದರೆ, ನನಗೆ ಈ ಗುಡ್ಡದೊಳಗೆ ದಾರಿ ಶಿಗಲಿಕ್ಕಿಲ್ಲ. ಇದಲ್ಲದೆ ಇಲ್ಲಿ ಕಳ್ಳರು ಬಹಳವೆಂದು ಕೇಳಿದ್ದೇನೆ. ಆದರೂ ಈ ಕುದುರೆಯನ್ನು ಹೀಗೆಯೇ ಬಿಟ್ಟು ಹೋಗುವದು ಸರಿಯಲ್ಲ. ಕೈಲಾದ ಮಟ್ಟಿಗೆ ಪ್ರಯತ್ನ ಮಾಡಿ ಇದನ್ನು ಬದುಕಿಸಿದರೆ, ಬಹಳ ಪುಣ್ಯ ಬಂದೀತು. ನನ್ನನ್ನು ಕಾಯುವವನು ದೇವರಿದ್ದಾನೆ, ಎಂದು ವಿಚಾರ ಮಾಡಿ ನಿಜಗುಣಿಯು ನಾಲ್ಕು ಶಿವಡು ಹುಲ್ಲು ತಂದು ಆ ಕುದುರೆಗೆ ಹಾಕಿದನು; ತನ್ನ ಹತ್ತರ ಇದ್ದ ತಪೇಲಿಯೊಳಗೆ ನೀರು ತಂದು ಅದಕ್ಕೆ ಕುಡಿಸಿದನು. ಅದು ಹುಲ್ಲು ತಿಂದು ನೀರು ಕುಡಿದ ಬಳಿಕ ತುಸು ತ್ರಾಣ ಬಂದು ಎದ್ದು ನಿಂತಿತು.

ನಿಜಗುಣಿಯು ಸಂತೋಷ ಪಟ್ಟು ದಾರೀ ಹಿಡಿದು ಮುಂದಕ್ಕೆ

ಸಾಗಿದನು. ಸ್ವಲ್ಪ ದೂರ ಹೋದ ಮೇಲೆ ಒಬ್ಬ ಮನುಷ್ಯನು ದಾರಿ ತಿಗದೆ ಕೆರೆಯಲ್ಲಿ ನಡುಮಟ ನೀರೊಳಗೆ ಹೊಕ್ಕು, ಕೈಕಾಲು ಆಡಿಸುತ್ತ ದಂಡೆಗೆ ಬರಬೇಕೆಂದು ಬಹಳ ಕಷ್ಟ ಪಡುತ್ತಿರುವದನ್ನು ಕಂಡನು. ಅವನು ಆತನ ಬಳಿಗೆ ಹೋಗಿ—ಏನಯ್ಯಾ, ನಿಮಗೆ ದಾರಿ ತಿಗಲೊಲ್ಲದೋ? ಎಂದು ಕೇಳಿದನು. ಬಳಿಕ ಅವನು— ಮಗನೇ, ನಾನು ಕುರುಡನು, ಹಾದಿ ತಪ್ಪಿ ಕೆರೆಯೊಳಗೆ ಹೊಕ್ಕಿದ್ದೇನೆ, ಎಂದನು. ಅದನ್ನು ಕೇಳಿ ನಿಜಗುಣಿಯು—ನಾನು ತೊಯಿಸಿಕೊಂಡರೂ ಚಿಂತೆಯಿಲ್ಲ; ನಿನ್ನ ಕೈಯೊಳಗಿನ ಕೋಲು ಇತ್ತ ಕಡೆಗೆ ಚೆಲ್ಲು. ಆದಷ್ಟು ಪ್ರಯತ್ನ ಮಾಡಿ ನಿನ್ನನ್ನು ಹೊರಗೆ ತೆಗೆಯುವೆನು, ಎನಲಾಗಿ ಆ ಧ್ವನಿಯ ಸುಳುವು ಹಿಡಿದು ಕುರುಡನು ತನ್ನ ಕೋಲು ಬಿಸಾಟಿದನು. ನಿಜಗುಣಿಯು ಅದನ್ನು ತಕ್ಕೊಂಡು ಕೆರೆಯೊಳಗೆ ತೆಗ್ಗುಗಳಿರಬಹುದೆಂದು ಬಹು ಎಚ್ಚರದಿಂದ ಕೋಲು ಊರುತ್ತ ನೀರೊಳಗಿಂದ ನಡೆದು ಆ ಕುರುಡನ ಹತ್ತರ ಹೋಗಿ ಅವನ ಕೈ ಹಿಡಿದು ಹೊರಗೆ ಕರಕೊಂಡು ಬಂದನು. ಆಗ—ನಿನಗೆ ಕಲ್ಯಾಣವಾಗಲಿ, ದೇವರು ನಿನ್ನ ಆಯುಷ್ಯವನ್ನು ಹೆಚ್ಚು ಮಾಡಲಿ! ಎಂದು ಹರಸಿ, ಆ ಕುರುಡನು ತನ್ನ ದಾರೀ ಹಿಡಿದು ಹೋದನು.

ಮಬ್ಬುಗತ್ತಲವಾಗುತ್ತದೆಂದು ನಿಜಗುಣಿಯು ಬೇಗ ನಡೆದು ಮುಂದಕ್ಕೆ ಹೋಗುವಷ್ಟರೊಳಗೆ ಒಬ್ಬ ಬಡ ಶಿಪಾಯಿಯು ಭೆಟ್ಟಿಯಾದನು. ಆತನ ಎರಡೂ ಕಾಲುಗಳು ಕಡಿದು ಹೋದದರಿಂದ ಅವನು ಕೋಲುಕುದುರೆಯನ್ನು ಕಂಕುಳಕ್ಕೆ ಆನಿಸಿಕೊಂಡು ಕುಂಟುತ್ತ ಬರುತ್ತಿದ್ದನು. ಆ ಶಿಪಾಯಿಯು ನಿಜಗುಣಿಯನ್ನು ಕಂಡು— ತಮ್ಮಾ, ಕಾಳಗದೊಳಗೆ ಕಡತ ಹತ್ತಿ ನನ್ನ ಎರಡೂ ಕಾಲುಗಳು ಹೋದವು. ನನ್ನ ಹತ್ತರ ಏನೂ ಇಲ್ಲದ್ದರಿಂದ ಈಗ ಉಪವಾಸ ಸಾಯುತ್ತೇನೆ, ಎಂದು ಹೇಳಿಕೊಂಡನು. ಈ ಮಾತು ಕಿವಿಗೆ ಬಿದ್ದ ಕೂಡಲೆ ನಿಜಗುಣಿಗೆ ದಯೆ ಹುಟ್ಟಿ ತನ್ನ ಬಳಿಯಲ್ಲಿದ್ದಷ್ಟು

ಬುತ್ತೀ ಕೊಟ್ಟು, ಕತ್ತಲಾಗುತ್ತದೆಂದು ಬೇಗನೇ ತನ್ನ ಹಾದೀ ಹಿಡಿದು ಆ ಹಳ್ಳಿಗೆ ಹೋಗಿ ಮುಟ್ಟಿದನು.

---

## ೬೮ನೇ ಪಾಠ.

### ಪರೋಪಕಾರಿಯಾದ ಹುಡುಗನು.

೨ನೇ ಭಾಗ.

ಆ ಹಳ್ಳಿಯೊಳಗಿನ ಕೆಲಸವನ್ನು ತೀರಿಸಿಕೊಂಡು ಮರುದಿನ ಇಳಹೊತ್ತಿಗೆ ತನ್ನ ಊರಿಗೆ ಹೊರಟನು. ನಡಹಾದಿಗೆ ಬಂದ ಬಳಿಕ ಕಗ್ಗತ್ತಲೆಯಾಗಿ ದಾರಿ ಕಾಣಿಸದ ಹಾಗಾಯಿತು. ಆದದರಿಂದ ನಿಜಗುಣಿಯು ದಾರೀ ತಪ್ಪಿ ಅಡವೀ ಬಿದ್ದನು. ದಾರೀ ನಡೆದು ದಣಿದು ಮುಂದಕ್ಕೆ ಹೆಜ್ಜೆ ಇಡಲಾರದೆ ಹಸಿವೆಯಿಂದ ಹಂಬಲಿಸುತ್ತ ಒಂದು ಗಿಡದ ಕೆಳಗೆ ಕುಳಿತುಕೊಂಡನು. ದಾರಿ ಸಿಗದ್ದರಿಂದಲೂ, ಹಸಿದದರಿಂದಲೂ, ಬಹಳ ಕತ್ತಲಾದದರಿಂದಲೂ ಅವನು ಅಂಜಿ ಅಳಹತ್ತಿದನು. ಅಷ್ಟರೊಳಗೆ ಆ ನಾಯಿಯು ಬಾಯೊಳಗೆ ಒಂದು ಅರವೀಗಂಟು ಹಿಡಕೊಂಡು ಅವನ ಬಳಿಗೆ ಬಂತು. ಅದನ್ನು ನಿಜಗುಣಿಯು ಕೈಯೊಳಗೆ ತಕ್ಕೊಂಡು ಬಿಚ್ಚಿ ನೋಡಲು, ಆ ಅರವಿಯೊಳಗೆ ರೊಟ್ಟಿ, ಕಾಯಿಪಲ್ಲೆ, ಉಪ್ಪಿನಕಾಯಿ ಕಟ್ಟಿದ್ದವು. ಅವುಗಳನ್ನು ಹೊಟ್ಟೆ ತುಂಬ ತಿಂದು, ಆ ನಾಯಿಗೆ—ಎಲಾ ಗೆಳೆಯನೇ, ನಿನಗೆ ನಾನು ಒಂದು ತುಣುಕು ರೊಟ್ಟೀ ಕೊಟ್ಟದ್ದಕ್ಕೆ ನೀನು ನನಗೆ ಹೊಟ್ಟೆ ತುಂಬ ರೊಟ್ಟೀ ತಂದುಕೊಟ್ಟು ನನ್ನ ಜೀವಾ ಉಳಿಸಿದಿ! ಯಾರ ಮೇಲಾದರು ಉಪಕಾರ ಮಾಡಿದರೆ, ಅದು ವ್ಯರ್ಥವಾಗಿ ಹೋಗುವದಿಲ್ಲ! ಎಂದನು.

ಬಳಿಕ ನಿಜಗುಣಿಯು ಆ ಕಾಡೊಳಗೆ ದಾರೀ ಹುಡುಕಹತ್ತಿದನು. ಕಲ್ಲುಮುಳ್ಳುಗಳನ್ನು ತುಳಿದು ಬೇಸತ್ತನು; ಆದರೂ ದಾರಿ ಸಿಗಲಿಲ್ಲ. ಕಡೆಗೆ ಹೀಗೆ ಹುಚ್ಚನಂತೆ ತಿರುಗಾಡುವದು ತರವಲ್ಲ

ವೆಂದು ತಿಳಿದು, ಮುಂಚೆ ಕೂತ ಸ್ಥಳಕ್ಕೆ ತಿರಿಗಿ ಹೋಗಿ ಕುಳಿತು ಕೊಂಡನು. ಸ್ವಲ್ಪ ಹೊತ್ತು ಆದ ಮೇಲೆ ಚಂದ್ರನು ಮೂಡಿ ಬೆಳದಿಂಗಳು ಏರಹತ್ತಿದ್ದರಿಂದ ಕತ್ತಲೆ ಹರೆಯಿತು. ಆಗ ಅವನಿಗೆ ತುಸು ಧೈರ್ಯ ಹುಟ್ಟಿ ಸುತ್ತುಮುತ್ತು ನೋಡುವಷ್ಟರೊಳಗೆ ಸಮೀಪದಲ್ಲಿ ಒಂದು ಕುದುರೆ ಮೇಯುತ್ತಿತ್ತು. ಆ ಕುದುರೆಯ ಹತ್ತರ ಹೋಗಿ ನೋಡಲು, ತಾನು ಮೊದಲು ಹುಲ್ಲೂ ನೀರೂ ಹಾಕಿ ಬದುಕಿಸಿದ ಕುದುರೆ. ಆಗ ನಿಜಗುಣಿಯು ಆ ಕುದುರೆಯನ್ನು ಹಿಡಿದು ಹತ್ತಲು, ಅದು ಸುಮ್ಮನೇ ಹತ್ತಗೊಟ್ಟಿತು. ಅದಕ್ಕೆ ದಾರಿ ಗೊತ್ತು ಇದ್ದದರಿಂದ ಅದು ಬೇಗನೆ ಒಯ್ದು ದಾರಿಗೆ ಹಚ್ಚಿತು. ಆಗ ನಿಜಗುಣಿಯು ಮನದೊಳಗೆ ಹಿಗ್ಗಿ — ಈ ಕುದುರೆಯನ್ನು ನಿನ್ನೆ ನಾನು ಹುಲ್ಲೂ ನೀರೂ ಹಾಕಿ ಬದುಕಿಸದಿದ್ದರೆ, ಈಹೊತ್ತು ಇದು ನನ್ನ ಕೆಲಸಕ್ಕೆ ಒದಗುತ್ತಿದ್ದಿಲ್ಲ; ನಾನು ಇರುಳೆಲ್ಲ ಅಡವಿಯೊಳಗೇ ಬೀಳಬೇಕಾಗುತ್ತಿತ್ತು; ಹುಲಿ ಕರಡಿಯ ಪಾಲಾಗುವ ಹೊತ್ತು ಬಂದಿತ್ತು, ಎಂದು ಆಲೋಚಿಸುತ್ತ ಪರರ ಮೇಲೆ ಮಾಡಿದ ಉಪಕಾರವು ಎಂದಿಗೂ ವ್ಯರ್ಥವಾಗಿ ಹೋಗುವದಿಲ್ಲೆಂದು ಮನಸ್ಸಿನೊಳಗೆ ನಿಶ್ಚಯ ಮಾಡಿಕೊಂಡನು.

ತನ್ನ ಊರಿಗೆ ಹೋಗುವ ಹಾದಿ ಹತ್ತಿದ ಮೇಲೆ ಅವನು ಕುದುರೆಯ ಮೇಲಿಂದ ಇಳಿದು ಅದನ್ನು ಹಿಂದಕ್ಕೆ ಅಟ್ಟಿ ತಾನೊಬ್ಬನೇ ಮುಂದಕ್ಕೆ ಸಾಗಿದನು. ಆದರೆ ದಾರಿಯಲ್ಲಿ ಮನುಷ್ಯರ ಸುಳುವು ಕಾಣದೆ ಅವನು ಪುನಃ ಹೆದರಿ ಹಿಂದಕ್ಕೆ ಮುಂದಕ್ಕೆ ನೋಡುತ್ತ ಹೋಗುವಷ್ಟರೊಳಗೆ ಇಬ್ಬರು ಕಳ್ಳರು ಬಂದು ಗಂಟುಬಿದ್ದರು. ಅವರು ಅವನ ಮೈಮೇಲೆ ಬಂದ ಕೂಡಲೆ ಅವನ ಸಂಗಡ ಬಂದ ನಾಯಿ ಒಬ್ಬ ಕಳ್ಳನನ್ನು ಕಸುವಿನಿಂದ ಕಡಿದು ಓಡಿತು. ಆ ಕಡಿಸಿಕೊಂಡ ಕಳ್ಳನು ಸಿಟ್ಟಿಗೆದ್ದು ಆ ಹುಡುಗನನ್ನು ಬಿಟ್ಟು ನಾಯಿಯ ಬೆನ್ನ ಹತ್ತಿದನು. ಆ ನಾಯಿಯು ಬೊಗಳುತ್ತ ತಿರಿಗಿ ಆ ಕಳ್ಳನ ಮೈಮೇಲೆ ಬರಹತ್ತಿತು; ಇತ್ತಲಾಗಿ — ಹಿಡಿಯಿರಿ, ಹಿಡಿಯಿರಿ, ಅವನನ್ನು ಹೆಡ

ಮುರಿಕೆ ಕಟ್ಟಿರಿ! ಬಿಡಬೇಡಿರಿ ಎಂದು ಯಾರೋ ಒದರುವದನ್ನು ಕೇಳಿ ಎರಡನೇ ಕಳ್ಳನೂ ಓಡಿಹೋದನು. ಹೀಗೆ ಹೂಲೀ ಎಬ್ಬಿಸಿದವನು ನಿಜಗುಣಿಗೆ ಮೊದಲು ಭೆಟ್ಟಿಯಾದ ಕುಂಟನು; ಅವನು ಆ ಕುರುಡನ ಹೆಗಲ ಮೇಲೆ ಕೂತುಕೊಂಡು ಬರುತ್ತಿದ್ದನು.

ನಿಜಗುಣಿಯು ಅವರಿಬ್ಬರನ್ನು ನೋಡಿ——ನೀವು ಈ ಸಮಯಕ್ಕೆ ಬಾರದಿದ್ದರೆ, ನಾನು ಉಳಿಯುತ್ತಿದ್ದಿಲ್ಲ; ಸಂಕಟಸಮಯಕ್ಕೆ ಬಂದು ನನಗೆ ಸಹಾಯ ಮಾಡಿದ್ದರಿಂದ ನನ್ನ ಮೇಲೆ ನಿಮ್ಮ ಉಪಕಾರ ಬಹಳವಾಯಿತು, ಎಂದನು. ಅವರು—ತಮ್ಮಾ, ನೀನು ನಮ್ಮ ಮೇಲೆ ಮಾಡಿದ ಉಪಕಾರವನ್ನು ತೀರಿಸುವದಕ್ಕೆ ದೇವರೇ ನಮ್ಮನ್ನು ತಕ್ಕ ಹೊತ್ತಿಗೆ ಇಲ್ಲಿಗೆ ಬರಮಾಡಿದನು, ಎಂದರು. ಬಳಿಕ ಆ ಕುಂಟನು—ನಾನು ಒಂದು ಗಿಡದ ಬುಡಕ್ಕೆ ಕೂತಿದ್ದೆನು, ಅಲ್ಲಿಂದ ಇಬ್ಬರು ಕಳ್ಳರು ಒಬ್ಬ ಹುಡುಗನನ್ನು ಸುಲಕೊಳ್ಳಬೇಕೆಂದು ಮಾತಾಡುತ್ತ ಬರುತ್ತಿದ್ದರು. ಅವರ ಮಾತು ಕೇಳಿ, ನಾನು, ಆ ಹುಡುಗ ನೀನೇ ಇರಬೇಕು, ನಿನ್ನ ಹೊರ್ತು ಬೇರೆ ಯಾವನೂ



ಆಗಲಿಕ್ಕಿಲ್ಲೆಂದು ತಿಳಿದೆನು. ಆದರೆ ನಾನು ಕುಂಟನು, ನಿನ್ನ ಸಹಾಯಕ್ಕೆ ಹ್ಯಾಗೆ ಬರಲಿ? ಎಂದು ಚಿಂತಿಸುತ್ತಿರಲಾಗಿ, ಅಕಸ್ಮಾತ್ತಾಗಿ ಈ ಕುರುಡನು ಅಲ್ಲಿಗೆ ಬಂದನು. ಬಳಿಕ ಇವನು ನನ್ನನ್ನು ತನ್ನ ಹೆಗಲ ಮೇಲೆ ಹತ್ತಿಸಿಕೊಂಡನು, ನಾನು ಇವನಿಗೆ ದಾರೀ ತೋರಿಸಿದೆನು. ಈ ಮೇರೆಗೆ ನಮ್ಮಿಬ್ಬರನ್ನು ದೇವರೇ ಇಲ್ಲಿಗೆ ತಂದನು.

ನಿಜಗುಣಿಯು ಅವರ ಉಪಕಾರವನ್ನು ನೆನಿಸಿ, ಅವರಿಬ್ಬರನ್ನೂ ತನ್ನ ಮನೆಗೆ ಕರೆಕೊಂಡು ಹೋಗಿ, ತಂದೆಗೆ ಆದ ಸುದ್ದಿಯನ್ನೆಲ್ಲ ಹೇಳಿದನು. ತಂದೆಯು ಅದನ್ನು ಕೇಳಿ ಸಂತೋಷದಿಂದ ಮಗನನ್ನು ಅಪ್ಪಿಕೊಂಡು, ಅವರನ್ನು ಪ್ರೀತಿಯಿಂದ ಒಂದೆರಡು ದಿನ ತನ್ನ ಮನೆಯೊಳಗೆ ಇಟ್ಟುಕೊಂಡು, ಚನ್ನಾಗಿ ಪರಾಮರಿಕೆ ಮಾಡಿ ಕಳುಹಿಸಿದನು. ಆ ನಾಯಿಯು ಸಾಯುವ ತನಕ ಆ ನಿಜಗುಣಿಯ ಮನೆಯ ಬಾಗಿಲ ಕಾಯುತ್ತ ನಿಂತುಕೊಂಡಿತು.

ತಾತ್ಪರ್ಯವೇನಂದರೆ—ಯಾವ ಮನುಷ್ಯನು ತನಗೆ ಕಲ್ಯಾಣವಾಗಬೇಕೆಂದು ಬಯಿಸುತ್ತಾನೋ ಅವನು ಕೈಲಾದ ಮಟ್ಟಿಗೆ ಪರರಿಗೆ ಉಪಕಾರ ಮಾಡಬೇಕು. ತಾನು ಪರರಿಗೆ ಹಿತ ಮಾಡಿದರೆ, ನಿಶ್ಚಯವಾಗಿ ದೇವರು ತನಗೆ ಹಿತ ಮಾಡುವನು.

IMPERIAL LIBRARY